ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಮೇ 2021.... ಬೆಲೆ ರೂ. 5/-



ತಿರುಪತಿ

## ಶ್ರೀಗೋವಿಂದರಾಜ ಸ್ವಾಮಿಯವರ ಬ್ರಹ್ಮೋತ್ಸವಗಳು

2021 ಮೇ 18 ರಿಂದ 26 ರ ವರೆಗೆ



# ತಿರುಪತಿ ಶ್ರೀಗೋವಿಂದರಾಜ ಸ್ವಾಮಿಯವರ ಬ್ರಹ್ಮೋತ್ಸವಗಳು

**2021 ಮೇ 18 ರಿಂದ 26 ರ ವರೆಗೆ**

**18-05-2021 ಮಂಗಳವಾರ**
ಹಗಲು : ಧ್ವಜಾರೋಹಣ - ರಾತ್ರಿ : ದೊಡ್ಡಶೇಷವಾಹನ.

**19-05-2021 ಬುಧವಾರ**
ಹಗಲು : ಚಿಕ್ಕಶೇಷವಾಹನ - ರಾತ್ರಿ : ಹಂಸವಾಹನ.

**20-05-2021 ಗುರುವಾರ**
ಹಗಲು : ಸಿಂಹವಾಹನ - ರಾತ್ರಿ : ಮುತ್ತಿನಚಪ್ಪರವಾಹನ.

**21-05-2021 ಶುಕ್ರವಾರ**
ಹಗಲು : ಕಲ್ಪವೃಕ್ಷವಾಹನ - ರಾತ್ರಿ : ಸರ್ವಭೂಪಾಲವಾಹನ.

**22-05-2021 ಶನಿವಾರ**
ಹಗಲು : ಪಲ್ಲಕಿಯಲ್ಲಿ ಮೋಹಿನಿ ಅವತಾರೋತ್ಸವ ರಾತ್ರಿ : ಗರುಡವಾಹನ.

**23-05-2021 ಭಾನುವಾರ**
ಹಗಲು : ಹನುಮದ್ವಾಹನ - ರಾತ್ರಿ : ಗಜವಾಹನ.

**24-05-2021 ಸೋಮವಾರ**
ಹಗಲು : ಸೂರ್ಯಪ್ರಭವಾಹನ - ರಾತ್ರಿ : ಚಂದ್ರಪ್ರಭವಾಹನ.

**25-05-2021 ಮಂಗಳವಾರ**
ಹಗಲು : ರಥೋತ್ಸವ - ರಾತ್ರಿ : ಅಶ್ವವಾಹನ.

**26-05-2021 ಬುಧವಾರ**
ಹಗಲು : ಚಕ್ರಸ್ನಾನ - ರಾತ್ರಿ : ಧ್ವಜಾವರೋಹಣ.



ನರಸಿಂಹನ ಪಾದಭಜನೆಯ ಮಾಡೋ
ನರಸಿಂಹನ ಪಾದಭಜನೆಯ ಮಾಡಲು
ದುರಿತ ಪರ್ವತವ ಖಂಡಿಸುವ ಕುಲಿಶದಂತೆ
ತೆರಳನ ಮೊರೆ ಕೇಳಿ ತವಕದಿಂದಲಿ ಒಂದು।
ದುರಳನ ಕರುಳ ತನ್ನೊಕರಳಲಿ ಧರಿಸಿದ
ಸುರರೆಲ್ಲ ನಡುಗಲು ಸಿರಿದೇವಿ ಮೊರೆಯಿಡೆ।
ವರ ಕಂಬದಿಂದ ಬಂದ ವೈಕುಂಠಪತಿ ನಮ್ಮ
ಹರಿ ವಿರಂಚಾದಿಗಳು ಕರವೆತ್ತಿ ಮುಗಿಯಲು।
ಪರಮ ಶಾಂತನಾದ ಪುರಂದರವಿಠಲ

– ಶ್ರೀ ಪುರಂದರದಾಸರು.

## ಭಗವದ್ಗೀತೆ

ಏವಮುಕ್ತೋ ಹೃಷಿಕೇಶಃ ಗುಡಾಕೇಶೇನ ಭಾರತ।
ಸೇನಯೋಉರು ಭಯೋರ್ಮಧ್ಯೇ ಸ್ಥಾಪಯಿತ್ವಾ ರಥೋತ್ತಮಮ್॥
ಭೀಷ್ಮದ್ರೋಣಪ್ರಮುಖತಃ ಸರ್ವೇಷಾಂ ಚ ಮಹೀಕ್ಷಿತಾಮ್।
ಉವಾಚ ಪಾರ್ಥ ಪಶ್ಯೈತಾನ್ ಸಮವೇತಾನ್ ಕುರೂನಿತಿ॥

(ಶ್ರೀ ಮದ್ಭಗವದ್ಗೀತೆ ಅಧ್ಯಾಯ
- 1, ಶ್ಲೋಕ - 24,25)



ಸಂಜಯ : ಧೃತರಾಷ್ಟ್ರನೇ, ಅರ್ಜುನನು ಹೀಗೆ ಹೇಳಿದಾಗ, ಕೃಷ್ಣನು ಭೀಷ್ಮ ದ್ರೋಣರ ಮತ್ತು ಎಲ್ಲ ಅರಸರ ಎದುರಿಗೆ ಎರಡು ದಂಡುಗಳ ನಡುವೆ ತೇರನ್ನು ನಿಲ್ಲಿಸಿ, ಅರ್ಜುನನೇ, ಇಲ್ಲಿ ನೆರೆದಿರುವವರನ್ನು ನೋಡು ಎಂದು ಹೇಳಿದನು.

(ಆರನೆಯ ದಶಕ)

# ದಯಾ ಶತಕಮ್




- ಎನ್. ನರಸಿಂಹಾಚಾರ್ಯ

**ಜಗತಿ ಮಿತಂಪಚಾ ತ್ವದಿತರಾ ತು ದಯೇ ತರಲಾ ಫಲನಿಯಮೋಜ್ಝಿತಾ ಭವತಿ ಸಂತಪನಾಯ ಪುನಃ।**

**ತ್ವಮಿಹ ನಿರಂಕುಶಪ್ರಶಕನಾದಿ ವಿಭೂತಿಮತೀ ವಿತರಸಿ ದೇಹಿನಾಂ ನಿರವಧಿಂ ವೃಷಶೈಲನಿಧಿಮ್ ॥೫೬॥**

ಹಿಂದಿನ ಪದ್ಯದಲ್ಲಿ ಗಂಗೆಯ ಸಾದೃಶ್ಯದಿಂದ ಶ್ರೀನಿವಾಸನ ದಯೆಗಿರುವ ಸರ್ವ ಲೋಕಸಮೃದ್ಧಿಯನ್ನುಂಟುಮಾಡುವಿಕೆಯೇ ಮೊದಲಾದ ಗುಣಗಳು ತಿಳಿಸಲ್ಪಟ್ಟವು. ತನ್ಮೂಲಕವಾಗಿ ಇತರರ ದಯೆಗಳೂ ಸ್ಮೃತಿಗೆ ಬರಲಾಗಿ,ಅವುಗಳಲ್ಲಿರುವ ನ್ಯೂನತೆಯನ್ನೂ,ಶ್ರೀನಿವಾಸನ ದಯೆಗಿರುವ ಮೇಲ್ಮೆಯನ್ನೂ ಈ ಪದ್ಯದಲ್ಲಿ ನಿರೂಪಿಸುವರು. ಮೋಕ್ಷಕ್ಕಾಗಿ ಪ್ರಪತ್ತಿಯನ್ನು ಅನುಷ್ಠಿಸಬೇಕೆಂದಿರುವವನು ಇತರ ದಯೆಗಳಿಗೂ, ಭಗವಂತನ ದಯೆಗೂ ಇರುವ ವ್ಯತ್ಯಾಸವನ್ನು ಅವಶ್ಯವಾಗಿಯೂ ತಿಳಿದು ಕೊಳ್ಳಬೇಕು. ಆಗಲೇ ಮುಂದಿನ ಪದ್ಯದಲ್ಲಿ ನಿರೂಪಿಸಲ್ಪಡುವ ಮಹಾವಿಶ್ವಾಸವೇ ಮೊದಲಾದ ಪ್ರಪತ್ತಿಯ ಅಂಗಗಳು ಪೂರ್ಣವಾಗಿ ಸಿದ್ಧಿಸುವುವು.

ಶ್ರೀನಿವಾಸನ ದಯೆಗಿಂತಲೂ ಬೇರೆಯಾದ ಬ್ರಹ್ಮ ರುದ್ರಾದಿಗಳ ದಯೆಯೂ ಇತರ ಲೌಕಿಕ ಪ್ರಭುಗಳ ದಯೆಯೂ ಯಾವುದೋ ಕೆಲವು ಫಲಗಳನ್ನು ಮಾತ್ರ ಕೊಡಲು ಸಮರ್ಥವಾದವು ಕೊಡುವಂತಹ ಫಲಗಳೂ ಅತ್ಯಂತ ಮಿತವಾದವು. ನಶ್ವರವಾದವು. ಅಲ್ಲದೆ, ನಿಜವಾಗಿಯೂ ಫಲವನ್ನು ಕೊಟ್ಟೇ ಕೊಡುವರೆಂದು ನಂಬುವಂತೆಯೂ ಇಲ್ಲ. ಒಂದು ಕಾಲದಲ್ಲಿ ನಾವು ಅವರಿಗೆ ಅನುಕೂಲರಾಗಿದ್ದರೆ ಅವರಿಗೆ ದಯೆಯುಂಟಾಗುವುದು. ಇನ್ನೊಂದು ಕಾಲದಲ್ಲಿ ನಾವು ಅವರಿಗೆ ಪ್ರತಿಕೂಲರೆಂದು ತೋರಿದರೆ ಅವರ ದಯೆಯು ನಾಶವಾಗಿ ಕೋಪವುಂಟಾಗಬಹುದು. ಒಂದುವೇಳೆ ಅಂಥವರಿಂದ ಫಲವು ದೊರಕಿದರೂ ಅದು ಶಾಶ್ವತವಾಗಿ ಇರುವಂತಹುದಲ್ಲ ಅಂತಹ ಅತ್ಯಲ್ಪಗಳಾದ ಫಲಗಳು ಮುಗಿದೊಡನೆಯೇ ಸಂಸಾರದ ತಾಪತ್ರಯಗಳು ನಮ್ಮನ್ನು ಸುತ್ತಿಕೊಳ್ಳುವುವು. ಶ್ರೀನಿವಾಸನ ದಯೆಯಾದರೋ ಎಲ್ಲ ವಿಷಯಗಳಲ್ಲಿಯೂ ಇತರದಯೆಗಳಿಗೆ ಪ್ರತಿಯಾದುದು. ಭಗವಂತನ ನಿರಂಕುಶ ಸ್ವಾತಂತ್ರ್ಯ, ನಿರಂಕುಶ ಶಕ್ತಿ ಮೊದಲಾದ ಗುಣಗಳನ್ನು ದಯೆಯು ತನಗೆ ಅನುಕೂಲವಾಗಿ ಮಾಡಿಕೊಂಡು ಅವುಗಳನ್ನು ಸಮಸ್ತಪ್ರಾಣಿಗಳ ಹಿತದಲ್ಲಿಯೇ ಉಪಯೋಗಿಸಿಕೊಳ್ಳುವಳು. ಶ್ರೀನಿವಾಸನ ದಯೆಯು ಕೊಡುವ ಫಲವು ಅಪರಿಮಿತವಾದುದು. ಶಾಶ್ವತವಾದ ಮೋಕ್ಷರೂಪವಾದ ಫಲವನ್ನು ಕೊಡುವ ಸಾಮರ್ಥ್ಯವುಳ್ಳವಳು. ಯಾವನಾದರೊಬ್ಬನನ್ನು ಅನುಗ್ರಹಿಸಬೇಕೆಂದು ಮನಸ್ಸುಂಟಾದರೆ ಕರ್ಮಾಧೀನವಾಗಿ ಅವನಿಗೆ ಉಂಟಾಗಬಹುದಾದ ವಿಘ್ನಗಳನ್ನು ಹೋಗಲಾಡಿಸಿ ಎಂದಾದರೊಂದು ದಿನ ಅವಶ್ಯವಾಗಿಯೂ ಫಲವನ್ನು ಕೊಟ್ಟೇ ಕೊಡುವಳು. ಅವಳಿಂದ ಮೋಕ್ಷವೆಂಬ ಪರಿಪೂರ್ಣವಾದ ಫಲವನ್ನು ಹೊಂದಿದವನು ಮತ್ತೆ ಸಂಸಾರತಾಪವನ್ನು ಹೊಂದುವುದಿಲ್ಲ. ಇಷ್ಟುಮಾತ್ರವೇ ಅಲ್ಲದೆ ತನ್ನನ್ನು ಆಶ್ರಯಿಸಿದವನಿಗೆ ಈ ಲೋಕದಲ್ಲಿಯೇ ಮೋಕ್ಷಾನುಭವವೆಂದು ಹೇಳಲ್ಪಡುವ ವೇಂಕಟಾಚಲದಲ್ಲಿರುವ ಶ್ರೀನಿವಾಸನೆಂಬ ನಿಧಿಯನ್ನು ಕರುಣಿಸಿ ಸಂತೋಷಪಡಿಸುವಳು. ಉಪನಿಷತ್ತುಗಳೂ ಪರಮಪುರುಷನನ್ನು ನಿಧಿಯನ್ನಾಗಿ ಹೊಗಳಿರುವೆಯಲ್ಲವೆ!




ವೇಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋದೇವೋ ನ ಭೂತೋ ನ ಭವಿಷ್ಯತಿ

ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಶ್ರೀ ಪ್ಲವನಾಮ ಸಂವತ್ಸರ ಚೈತ್ರ - ವೈಶಾಖ ಮಾಸ ಸಂಚಿಕೆ

ಸಂಪುಟ - 51 ಮೇ 2021 ಸಂಚಿಕೆ - 12


## ವಿಷಯಸೂಚಿಕೆ


| | | |
|---|---|---|
| ಸಂಪಾದಕೀಯ | | 6 |
| ಅಕ್ಷಯ ತೃತೀಯ | -ಶ್ರೀಮತಿ. ಕೆ. ವಿ. ಪದ್ಮಾವತಿ | 7 |
| ಶ್ರೀಕೂರ್ಮ ಜಯಂತಿ | -ಎಸ್. ವೆಂಕಟರಾಘವನ್ | 10 |
| ಬೆಟ್ಟದೊಡೆಯನ ಭಕ್ತಾಗ್ರೇಸರ ತಾಳ್ಳಪಾಕ ಅನ್ನಮಯ್ಯ | - ಶ್ರೀಮತಿ ಕೆ.ವಿ. ಲತಾ | 12 |
| ಜ್ಯೋತಿಷ್ಯಶಾಸ್ತ್ರ ಒಂದು ವಿಜ್ಞಾನ | -ಡಾ|| ರಾಮಚಂದ್ರ ದಾಸ್ ಸಿ.ಜೆ. | 15 |
| ಪಾಲಿಸೋ ನರಸಿಂಹ | -ಶ್ರೀಮತಿ. ಸುಮಾಚಂದ್ರಶೇಖರ್ | 17 |
| ಅಕ್ಕಿರಾಂಪುರದ ಶ್ರೀಲಕ್ಷ್ಮೀವೆಂಕಟೇಶ್ವರ ದೇವಾಲಯ | - ಕೆಂಗೇರಿ ಚಕ್ರಪಾಣಿ | 19 |
| ಕರೋನ ಮೇಲಿನ ಬ್ರಹ್ಮಾಸ್ತ್ರ | - ಶ್ರೀಮತಿ | 21 |
| ಶ್ರೀ ವೇಂಕಟೇಶ್ವರಸ್ವಾಮಿ ಆಲಯ | -ದಿ|| ಬಿ.ಎಸ್.ಶ್ರೀನಿವಾಸನ್ | 23 |
| ಪುಸ್ತಕಾವಲೋಕನ | - | 26 |
| ವಿಜಯದಾಸರುಮಧ್ವತತ್ವ | - ಡಾ|| ಆರ್.ಜಿ. ಗುಡಿ | 31 |
| ಸಂಸ್ಕೃತ ಕಲಿಯೋಣ...!! | - ಡಾ|| ಸಮುದ್ರಾಲ ಲಕ್ಷ್ಮಣಯ್ಯ | 33 |
| ದೇವರ್ಷಿ ನಾರದರ ಮಹಿಮೆ | - ಡಾ || ಗುರುರಾಜ ಪೋಶೆಟ್ಟಿ ಹಳ್ಳಿ | 34 |
| ಓಂಕಾರವು ವೈಜ್ಞಾನಿಕ ವಿಶ್ವದ ಮಾದರಿ | - ಹೇಮಂತ್ ಕುಮಾರ್ ಜಿ. | 37 |
| ಪರಶುರಾಮಾವತಾರದ ವೈಶಿಷ್ಟ್ಯ | - ಕೆ. ರಾಘವೇಂದ್ರ | 39 |
| ಕಣ್ವತೀರ್ಥ ಮಹಾಮುನಿಯ ಆರಾಧನೆ | - ಪ್ರಣವ | 40 |
| ವೇದಗಳಲ್ಲಿ ವಿಜ್ಞಾನ | - ಡಾ || ಟಿ.ವಿ. ಸತ್ಯನಾರಾಯಣ | 42 |
| ಶ್ರೀಮದ್ಭಗವದ್ಗೀತೆ | - ಶ್ರೀಮತಿ ಬಿ. ಪದ್ಮಜ | 44 |
| ಆಳ್ವಾರುಗಳು ಕಂಡ ತಿರುವೇಂಗಡ | - ಎಂ. ಆರ್. ನರಸಿಂಹನ್ | 45 |
| ತಿರುಮಲೆ - ಕಾಲಮಾನಾಚರಣೆಗಳು | - ಶ್ರೀಮತಿ | 47 |
| ಮಹಾದಾರ್ಶನಿಕ ಶ್ರೀಶಂಕರಚಾರ್ಯರು | - ಡಾ || ಲಕ್ಷ್ಮೀಕಾಂತ ವಿ. ಮೊಹರೀರ | 49 |
| ನೀತಿ ಕಥೆ - ನಿಜವಾದ ಭಕ್ತನಾರು | -ಶ್ರೀಮತಿ ಸುಧಾಮಧುಸೂದನ್ | 51 |
| ಚಿತ್ರಕಥೆ - ಜೀವನಸಾರ್ಥಕವಾಗಬೇಕೆಂದರೆ | -ಟಿ.ಶಿವಾಜಿ | 52 |
| ಕ್ವಿಜ್ | | 54 |


ಮುಖಚಿತ್ರ - ಶ್ರೀ ಗೋವಿಂದರಾಜ ಸ್ವಾಮಿಯವರು, ತಿರುಪತಿ

ಹಿಂಬದಿಚಿತ್ರ - ಸ್ವಾಮಿಯವರನ್ನು ಕೀರ್ತಿಸುತ್ತಿರುವ ಅನ್ನಮಾಚಾರ್ಯರು


**ಗೌರವ ಸಂಪಾದಕರು**
ಡಾ || ಕೆ. ಎಸ್. ಜವಹರ್ ರೆಡ್ಡಿ , ಐ.ಎ.ಎಸ್
ಕಾರ್ಯನಿರ್ವಹಣಾಧಿಕಾರಿ,ತಿ.ತಿ.ದೇ.,ತಿರುಪತಿ.

**ಪ್ರಧಾನ-ಸಂಪಾದಕರು**
ಆಚಾರ್ಯ.ಕೆ.ರಾಜಗೋಪಾಲನ್, ಪಿ.ಎಚ್.ಡಿ.

**ಸಂಪಾದಕರು**
ಡಾ|| ವಿ.ಜಿ.ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.

**ಮುದ್ರಣ**
ಶ್ರೀ .ಪಿ. ರಾಮರಾಜು , ಎಮ್.ಎ.
ವಿಶೇಷಾಧಿಕಾರಿ,
(ಪ್ರಕಾಶನ ಮತ್ತು ಮುದ್ರಣಾಲಯ),
ತಿ.ತಿ.ದೇ.,ಮುದ್ರಣಾಲಯ,ತಿರುಪತಿ.

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ.ತಿರುಪತಿ.

**ಛಾಯಗ್ರಹಣ:**
ಶ್ರೀ ಪಿ.ಎನ್.ಶೇಖರ್,
ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.



ಲೇಖನ / ಚಂದಾ ಮಿಕ್ಕ ವಿವರಗಳಿಗೆ
ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ. ತಿರುಪತಿ - 517 507

**ಇತರ ವಿವರಗಳಿಗೆ**
ಕಾರ್ಯಾಲಯ : 0877 - 2264543
ಡಿ.ಟಿ.ಪಿ. ವಿಭಾಗ : 0877 - 2264359
ಸಂಪಾದಕರು : 0877 - 2264360

24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333
ಸಲಹೆ/ದೂರುಗಳಿಗೆ ಟೋಲ್‌ಫ್ರೀ ಸಂಖ್ಯೆ:
1800-425-4141
ಸಲಹೆ/ಸೂಚನ/ದೂರುಗಳಿಗಾಗಿ
sapthagiri_helpdesk@tirumala.org


ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
www.tirumala.org ಮೂಲಕ ವೀಕ್ಷಿಸಬಹುದು.

| | |
|---|---|
| ಬಿಡಿ ಪ್ರತಿ | ರೂ. 05/- |
| ವಾರ್ಷಿಕ ಚಂದಾ | ರೂ. 60/- |
| ಆಜೀವ ಚಂದಾ | ರೂ. 500/- |
| ವಿದೇಶಿವಾರ್ಷಿಕಚಂದಾ | ರೂ. 850/- |


ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ

ಸಂಪಾದಕೀಯ

# ಮಂಗಳದಾಯಕ ನರಸಿಂಹ

"ಜಗತ್ತಿನಲ್ಲಿ ಅಧರ್ಮ ತಾಂಡವ ಹೆಚ್ಚಾದಾಗೆಲ್ಲಾ ದುಷ್ಟರನ್ನು ಶಿಕ್ಷಿಸಿ ಶಿಷ್ಟರನ್ನು ರಕ್ಷಿಸಿ, ಧರ್ಮ ಸ್ಥಾಪನೆಯನ್ನು ಮಾಡಲು ನಾನು ಅವತರಿಸುತ್ತೇನೆ" ಎಂದಿದ್ದಾರೆ. ಗೀತಾಚಾರ್ಯನಾದ ಶ್ರೀಕೃಷ್ಣ ಪರಮಾತ್ಮ ಪ್ರಳಯ ಕಾಲದಲ್ಲಿ ನಿನ್ನನ್ನು ಹೇಗೆ ಪೂಜಿಸುವುದು ಎಂದೊಮ್ಮೆ ಭಗವಂತನನ್ನು ಕೇಳಿದರಂತೆ ನಾರದ ಮಹರ್ಷಿಗಳು. ಆಗ ಭಗವಂತನು ಹೇಗೆ ತನ್ನ ಅವತಾರ ತತ್ವಗಳನ್ನು ವಿವರಿಸುತ್ತಾ ಹೇಗೆ ಹೇಳುತ್ತಾರೆ.'ಅಜೋಪಿ ಸನ್ನವ್ಯ ಯತ್ಮಾ ಭೂತಾನ' ಅಂದರೆ ನನಗೆ ಜನನ ವಿಲ್ಲದಿದ್ದರೂ ಪರಿಣಾಮಕ್ರಮವಿಲ್ಲದಿದ್ದರೂ, ಸಹ ಸಕಲ ಭೂತೇಶ್ವರವಾದ್ದರಿಂದ ನನ್ನ ಈಶ್ವರ ಸ್ವಭಾವವನ್ನು ಬಿಡದೆ, ಸಂಕಲ್ಪ ರೂಪ ಜ್ಞಾನದಿಂದ ಜನ್ಮಿಸುತ್ತಲೇ ಇದ್ದೇನೆ" ಎಂದಿದ್ದಾರೆ. ಇದನ್ನೆ ನಮ್ಮಾಳ್ವಾರರು "ಇನೈವನ್ ಎಪ್ಪೊರುಟ್ಕುಮ್ ವೀಡು ಮುದಲಾಮ್ ಪುಣೈವನ್ ಪೆರವಿಕ್ಕಡಲ್ ನೀನ್ದುವಾರ್ಕ್ಕೇ" ಎಂದಿದ್ದಾರೆ.

ಮತ್ಸ್ಯನಾಗಿಯು, ಕೂರ್ಮನಾಗಿಯು, ವರಾಹನಾಗಿಯು ಅವತಾರ ಮಾಡಿದ ಪರಮಾತ್ಮವಾದ ಮಹಾವಿಷ್ಣುವೇ ಪ್ರಹ್ಲಾದನನ್ನು ರಕ್ಷಿಸಲು ನರಸಿಂಹನಾಗಿ ಅವತರಿಸಿದನು. ನರಸಿಂಹ ಅವತಾರವು 'ಭಗವಂತನ ಸರ್ವ ವ್ಯಾಪಕತ್ವವನ್ನು ತಿಳಿಯಪಡಿಸುತ್ತದೆ. ಮಹಾವಿಷ್ಣುವಿನ ಅವತಾರಗಳಲ್ಲೇ ಹಠಾತ್ತಾಗಿ ತೋರಿದ ಅವತಾರವೇ ನರಸಿಂಹಾವತಾರ, ಆಸುರೀ ಸಂಪತ್ತಿಗೂ ದೈವ ಸಂಪತ್ತಿಗೂ ನಡೆಯುವ ನಿರಂತರ ಯುದ್ಧ ನಡೆಯುತ್ತಿದೆ. ಕೊನೆಗೆ ದೈವೀ ಸಂಪದ್ದೇ ಜಯವಾಗುವುದು. ಇದರಲ್ಲಿ ಪ್ರಹ್ಲಾದನೇ ವಿಜಯನಾಗುತ್ತಾನೆ. ಭಗವಂತನು ಭಕ್ತನಿಗೆ ಸಹಕರಿಸಿ ರಕ್ಷಿಸುತ್ತಾನೆ ಎಂಬುದನ್ನು ತೋರಿಸುವುದೇ ನರಸಿಂಹಾವತಾರ. ಶುಕಮಹರ್ಷಿಗಳು ಪರೀಕ್ಷಿತ್ ಮಹಾರಾಜನಿಗೆ ವಿಷ್ಣುವಿನ ಅವತಾರಗಳ ಬಗ್ಗೆ ಉಪದೇಶ ಮಾಡುವಾಗ "ಉಗ್ರರೂಪದಿಂದ ಸಿಂಹ ಮುಖದಿಂದ ಪ್ರಕಟಗೊಂಡು ತನ್ನನ್ನು ಗದೆಯಿಂದ ಬಡಿಯಲು ಬಂದ ಹಿರಣ್ಯನ್ನು ಸಂಹರಿಸಿ ಪ್ರಹ್ಲಾದನನ್ನು ಆಶೀರ್ವಸಿದುದೇ ನರಸಿಂಹಾವತಾರ"ವೆಂದು ಹೇಳಿದ್ದಾರೆ.

ಭಕ್ತನಾದ ಪ್ರಹ್ಲಾದನನ್ನು ಹಿರಣ್ಯಕಷಿಪುವಿನ ಕಾಟದಿಂದ ರಕ್ಷಿಸಲೆಂದೇ ಭಗವಂತನು ಮಾಡಿದ ಅವತಾರವಿದು.ಈ ಕಂಬದಲ್ಲಿ ಇದ್ದಾನೆಯೇ? ಎಂದು ಅಹಂಕಾರದಿಂದ ಕೇಳಿದ ಹಿರಣ್ಯನಿಗೆ, "ಅಣುವಿನಲ್ಲೂ ಇದ್ದಾನೆ, ದೊಡ್ಡ ಬೆಟ್ಟದಲ್ಲೂ ಇದ್ದಾನೆ, ಇಲ್ಲಿರುವ ಈ ಕಂಬದಲ್ಲೂ ಇದ್ದಾನೆ" ಎಂದು ಉತ್ತರಿಸಿದ ಪ್ರಹ್ಲಾದನ ಮಾತುಗಳನ್ನು ಸತ್ಯವಾಗಿಸಲು, ಸ್ತಂಭವನ್ನು ಸೀಳಿಕೊಂಡು ಬಂದು ಹಿರಣ್ಯನನ್ನು ಸಂಹರಿಸಿದ ಅವತಾರವಿದು. ಭಗವಂತನು ತನ್ನ ವಿಷಯದಲ್ಲಿ ಅಪರಾಧ ಮಾಡಿ ದವರನ್ನು ಕ್ಷಮಿಸುತ್ತಾನೆಯೇ ಹೊರತು ತನ್ನ ಭಕ್ತರಲ್ಲಿ ಅಪರಾಧ ಮಾಡಿದವರನ್ನು ಉಪೇಕ್ಷಿಸುವುದಿಲ್ಲ ಎಂಬ ಸಾರಾಂಶವನ್ನು ಈ ಅವತಾರದ ಮೂಲಕ ತಿಳಿದಿದ್ದಾರೆ ತಿರುಮಂಗೈ ಆಳ್ವಾರ್ ಇದನ್ನೇ, ನಮ್ಮಾಳ್ವಾರರು ಹೇಳುವಾಗ, ಪ್ರಹ್ಲಾದನನ್ನು ಅನು ಗ್ರಹಿಸಿದ ನರಸಿಂಹನು, ತನನ್ನು ಸಲಹಲು ಬರಲಿಲ್ಲವೇ ಎಂದು ಪಾಶುರದಲ್ಲಿ ಹಾಡಿದ್ದಾರೆ.

ವೇದಾಂತ ದೇಶಿಕರು ಸಹ ತಮ್ಮ ದಶಾವತಾರ ಸ್ತೋತ್ರದಲ್ಲಿ ಈ ಅವತಾರವನ್ನು ಕುರಿತು ಹೇಳುವಾಗ " ಹಠತ್ತಾಗಿ ಭಗವಂತನು ಅವತರಿಸಬೇಕಾದ ಸಮಯ ಬಂದಾಗ , ಆ ಹಿರಣ್ಯನ ಮನೆಯ ಸ್ತಂಭವೇ ಭಗವಂತನನ್ನು ಹಡೆಯುವ ಭಾಗ್ಯವನ್ನು ಪಡೆದಿದೆ. ಹಿರಣ್ಯಕಶಿಪುವಿನ ಭಾಗ್ಯವೇ ಭಾಗ್ಯ" ಎಂದಿದ್ದಾರೆ. ನರಸಿಂಹಾವತಾರದ ಬಗ್ಗೆ ಮೊಟ್ಟ ಮೊದಲನೆ ಯನದಾಗಿ ತಮಿಳು ಕವಿಗಳಾದ 'ಕಂಬರ್' ತಮ್ಮ ರಾಮಾಯಣ ಗಾಥೆಯಲ್ಲಿ ಹೇಳಿದ್ದಾರೆ. 'ಕಂಬರ್' ರಾಮಾಯಣವನ್ನು 'ತಿರುವರಂಗಂ' ಎಂಬಲ್ಲಿ, ಮೇಟ್ಟಳರಿಯ ಸಿಂಗರ್ ಸನ್ನಿಧಿಯಲ್ಲಿ ಸಮೀಪದಲ್ಲಿರುವ ಮಂಟಪದಲ್ಲಿ 'ಅರಂಗೇಟ್ರೆಮ್' ಮಾಡಿದಾಗ ಅಂದರೆ ಮೊದಲು ಬಾರಿಗೆ ಹಾಡಿದಾಗ ನರಸಿಂಹದೇವರೇ ಒಪ್ಪಿಗೆ ನೀಡಿದರಂತೆ.

ಆದಿಶಂಕರರು ಅಹೋಬಿಲದಲ್ಲಿ ತನಗೆ ಅನುಗ್ರಹಿಸಿದ ನರಸಿಂಹ ದೇವರನ್ನು ಸ್ತುತಿಸುತ್ತ ಶ್ರೀಲಕ್ಷ್ಮೀ ನೃಸಿಂಹ ಕರಾವಲಂಬ ಸ್ತೋತ್ರವನ್ನು ನಮಗೆ ನೀಡಿದ್ದಾರೆ. ಈ ಸ್ತೋತ್ರವನ್ನು ಪ್ರತಿನಿತ್ಯ ಪಾರಾಯಣ ಮಾಡಿದರೆ, ಒಳ್ಳೆಯ ಭವಿಷ್ಯ ಕೂಡಿ ಬರುವುದರೊಂದಿಗೆ, ಶತ್ರುಪೀಡೆಗಳು ನಿವಾರಣೆಯಾಗುತ್ತವೆ.ತಿರುಮಂಗೈ ಆಳ್ವಾರ್ "ಅಕ್ಕಾರಕ್ಕುನಿ" ಎಂದು ನರಸಿಂಹ ದೇವರನ್ನು ಕುರಿತು ಹಾಡಿದ್ದಾರೆ. ಅಂದರೆ ತುಂಬಾ ಸವಿಯಾದ ಹಣ್ಣಿನಂತಿರುವನೇ ನರಸಿಂಹನು ಎಂದರ್ಥ. ಆಪತ್ತು ಬಂದಾಗ ನಮಗೆ ಯಾರು ಸಹಾಯ ಮಾಡುತ್ತಾರೋ, ಅವರು ನಮ್ಮ ಕಣ್ಣಿಗೆ ಬಹಳ ಸುಂದರವಾಗಿ ಕಾಣುತ್ತಾರೆ. ಹಾಗಾಗಿ ಪ್ರಹ್ಲಾದನನ್ನು ಅವನ ಆಪತ್ಕಾಲದಲ್ಲಿ ಓಡೋಡಿ ಹರಿಬಂದು ಸಲಹಿದೆ ನರಸಿಂಹನೂ ಸುಂದರನಲ್ಲವೇ, ಎನ್ನುತ್ತಾರೆ ಹಿರಿ ಯರು ಅದಕ್ಕಾಗಿಯೇ 'ಅಳಗಿಯ ಸಿಂಗರ್ ಸುಂದರ ನರಸಿಂಹನೆಂದು ಕರೆಯಲ್ಪಡುತ್ತಿದ್ದಾನೆ ನಮ್ಮ ಮುದ್ದು ನರಸಿಂಹನು.

ಇಡೀ ಜಗತ್ತನ್ನೇ ಗಡಗಡ ನಡುಗಿಸುತ್ತಿರುವ ಮಹಾಮಾರಿ ಕರೋನಾ. ಈ ರಾಕ್ಷಸ ಕಬಂಧ ಬಾಹುಗಳಿಂದ ಕ್ರಮೇಣ ಹೊರ ಬರುತ್ತಿದ್ದೀವೇನೋ ಎಂಬ ಸಂತೋಷವನ್ನು ಬಹಳ ಕಾಲ ನಿಲ್ಲದೇ ಮಾಡಿ ಸೆಕೆಂಡ್ ವೇವ್ ರೂಪದಲ್ಲಿ ತನ್ನ ಮುಷ್ಠಿ ಪ್ರಹಾರವನ್ನು ತೀವ್ರಗತಿಯಲ್ಲಿ ಬೀಸುತ್ತಾ ಇಡೀ ಮನುಕುಲವನ್ನೇ ಭಯಭೀತರನ್ನಾಗಿ ಮಾಡುತ್ತಿದೆ .ವ್ಯಕ್ತಿಗಳಿಂದ ಅತಿ ಸಮೀಪದಲ್ಲಿ ನಿಂತು ಮಾತನಾಡುವುದು. ಅಪ್ಪುಗೆಗಳು, ಶರೀರಸ್ಪರ್ಶ, ವ್ಯಾಧಿಗ್ರಸ್ಥರು ಬಿಟ್ಟ ಗಾಳಿಯ ಸೇವನೆ. ಅಲ್ಲದೇ ಹತ್ತಿರ - ಹತ್ತಿರ ಕುಳಿತುಕೊಂಡು ಆಹಾರವನ್ನು ಸೇವಿಸುವುದು ಒಂದೇ ಹಾಸಿಗೆಯ ಮೇಲೆ ಮಲಗುವುದು, ವಿರಮಿಸುವುದು, ಒಂದೇ ಸ್ಥಳದಲ್ಲಿ ಕೂರುವುದು. ಒಬ್ಬರ ವಸ್ತ್ರ ಆಭರಣಗಳನ್ನು ಮತ್ತೊಬ್ಬರು ಬಳಸುವುದು ಇತ್ಯಾದಿ ಕಾರಣಗಳಿಂದಾಗಿ ಒಬ್ಬ ವ್ಯಕ್ತಿಯಿಂದ ಮತ್ತೊಬ್ಬ ವ್ಯಕ್ತಿಗೆ ಹಲವು ರೋಗಗಳು ಸಂಕ್ರಮಣಗೊಳ್ಳುತ್ತಿವೆಯೆಂದು ಇದರ ಅರ್ಥ.ಈ ಕರೋನದಿಂದ ಆದಷ್ಟು ಬೇಗ ಈಕರೋನ ಮಹಾಮಾರಿ ದೂರವಾಗಬೇಕೆಂದು ಆ ನರಸಿಂಹನಲ್ಲಿ ಪ್ರಾರ್ಥಿಸೋಣ.

ನರಸಿಂಹದೇವರಲ್ಲಿ ಪ್ರಹ್ಲಾದನು ಭಕ್ತಿ ಮಾಡಿದಂತೆ, ನಾವೂ ಸಹ ಭಕ್ತಿ ಮಾಡಬೇಕು.ಅಂತಹ ಭಕ್ತಿಯಿಂದ ಪ್ರಾರ್ಥಿ ಸುವ ಪೂಜಿಸುವ ಭಕ್ತರ ಕಷ್ಟಗಳನ್ನೆಲ್ಲ ನರಸಿಂಹದೇವರು ಪರಿಹರಿಸಿ, ಮಂಗಳದಾಯಕನಾಗಿ ಸರ್ವಶುಭಗಳನ್ನು ಉಂಟು ಮಾಡುತ್ತಾನೆ.

# ಅಕ್ಷಯ ತೃತೀಯ

-ಶ್ರೀಮತಿ. ಕೆ. ವಿ. ಪದ್ಮಾವತಿ
97437 22327



ಭಾರತೀಯ ಹಬ್ಬಗಳಲ್ಲಿ ಅಕ್ಷಯ ತೃತೀಯಾಕ್ಕೆ ಪ್ರತ್ಯೇಕ ಸ್ಥಾನವಿದೆ. ಅಂದು ಶುಭಗ್ರಹಗಳೆಲ್ಲದರ ಅನುಗ್ರಹವೂ ಒದಗುವ ಅತ್ಯಂತ ಪ್ರಶಸ್ತ ದಿನವೆಂದು ನಂಬಿಕೆ. ಯುಗಾದಿ ಪರ್ವದಂತೆಯೇ ಅಕ್ಷಯ ತೃತೀಯಾವೂ ಶುಭಮಂಗಲ ಕಾರ್ಯಗಳ ಆರಂಭಕ್ಕೆ, ಅಕ್ಷರಾಭ್ಯಾಸಕ್ಕೆ, ಉಪನಯನ -ವಿವಾಹಾದಿಗಳಿಗೆ, ಚಿನ್ನ ಖರೀದಿಗೆ, ಹಣ ಹೂಡಿಕೆ, ವ್ಯಾಪಾರ ವ್ಯವಹಾರಗಳ ಶುಭಾರಂಭ ಇತ್ಯಾದಿಗಳಿಗೆ ಪ್ರಶಸ್ತ ದಿನವೆಂದು ಪ್ರತೀತಿ. ಈ ಬಾರಿಯ ಅಕ್ಷಯ ತೃತೀಯ ದಂದು ಸೌಖ್ಯ, ಸಂಪತ್ ಸಮೃದ್ಧಿಗಳು ನಿಮ್ಮ ಪಾಲಿಗೆ ಒದಗಿ ಸದಾ ಸರ್ವದಾ ಅಕ್ಷಯವಾಗಲೆಂಬ ಹಾರೈಕೆಯೊಂದಿಗೆ ಈ ವಿಶೇಷ ಬರಹ.

ಬಹುಮುಖವುಳ್ಳ ಪ್ರಕೃತಿ ಶಕ್ತಿಯ ಒಂದೊಂದು ಅಂಶವೂ ಒಂದೊಂದು ದೇವತೆಯೆಂಬುದು ಮಾನವನ ಕಲ್ಪನೆಯಾಗಿದೆ. ಫಲಾಪೇಕ್ಷೆಯುಳ್ಳ ಮಾನವನಿಗೆ ಆ ದೇವತೆಗಳಲ್ಲಿ ಅಪಾರ ನಂಬಿಕೆ. ನಿರ್ದಿಷ್ಟ ದೇವತೆಯನ್ನು ಭಕ್ತಿಪೂರ್ವಕವಾಗಿ ಆರಾಧಿಸಿದರೆ, ಇಷ್ಟಾರ್ಥ ಸಿದ್ಧಿಸುವುದೆಂಬುದು ಅವನ ಗ್ರಹಿಕೆಯಾಗಿದೆ. ವೇದಕಾಲದಿಂದಲೂ ಜನರು ವಿದ್ಯಾದೇವತೆ ಶಾರದೆ, ಐಶ್ವರ್ಯ ದೇವತೆಯಾದ ಶ್ರೀಲಕ್ಷ್ಮೀ, ದುಷ್ಟ ಸಂಹಾರಿ ದುರ್ಗೆಯನ್ನು ಉಪಾಸಿಸುತ್ತಾ ಬಂದಿದ್ದಾರೆ. ಪೌರಾಣಿಕ ಗ್ರಂಥಗಳಲ್ಲಿ, ತಾಂತ್ರಿಕ ಗ್ರಂಥಗಳಲ್ಲಿ ಉಪಾಸನೆ, ಪೂಜಾ ಕ್ರಮಗಳು ಪ್ರತಿಪಾದಿಸಲ್ಪಟ್ಟಿವೆ. ಭಾರತೀಯ ಸ್ತ್ರೀಯರಂತೂ ತಮ್ಮ ಸೌಭಾಗ್ಯ ವರ್ಧನೆಗೆ, ಮುತ್ತೈದೆತನಕ್ಕೆ ಸಕಲ ಸಂಪತ್ತಿಗೆ, ಮನೆಯ ಸುಖ ಶಾಂತಿಗೆ ಶ್ರೀಮಹಾಲಕ್ಷ್ಮೀಯ ಪೂಜೆಯನ್ನು ಸದಾಕಾಲ, ಸಾರ್ವತ್ರಿಕವಾಗಿ ಒಂದಿಲ್ಲೊಂದು ರೀತಿಯಲ್ಲಿ ಪೂಜಿಸುತ್ತಾ ಬಂದಿದ್ದಾರೆ.

ಭೃಗು ಮಹರ್ಷಿಯಲ್ಲಿ ಪತ್ನಿ ಖ್ಯಾತಿ ಎಂಬವಳ ಪುತ್ರಿಯಾಗಿ ಅವತರಿಸಿ, ವೈವಸ್ವತ ಮನ್ವಂತರದಲ್ಲಿ, ಕ್ಷೀರಸಾಗರ ಕನ್ಯೆಯಾಗಿ, ಕ್ಷೀರಸಾಗರ ಮಂಥನ (ಸಮುದ್ರ ಮಂಥನ) ಕಾಲದಲ್ಲಿ ದಿವ್ಯ ಕಾಂತಿ ಸೂಸುವ ಶ್ರೀದೇವಿ ಕಮಲಪಾಣಿಯಾಗಿ ಅರಳು ತಾವರೆಯ ಮೇಲೆ ಕುಳಿತು, ಮೂಡಿ ಬಂದು ಶ್ರೀಹರಿಯ ಹೃದಯದಲ್ಲಿ ಹೋಗಿ ನೆಲೆಸಿದಳು ಎಂದು ವಿಷ್ಣು ಪುರಾಣದಲ್ಲಿ ಪ್ರಸ್ತಾಪವಿದೆ. ಕಮಲದಲ್ಲಿ ವಾಸ, ಕೈಯಲ್ಲಿ ಕಮಲ, ಕಮಲದಂಥ ಕಣ್ಣು, ಕಮಲದಂಥ ಮುಖ, ಕಮಲ ನಾಭನ ಪ್ರಿಯ ಪತ್ನಿ ಎಂದು 'ಶ್ರೀಸೂಕ್ತ' ದಲ್ಲಿ ಈಕೆಯನ್ನು ಸ್ತುತಿಸಲಾಗಿದೆ. ಶ್ರೀಮನ್ನಾರಾಯಣನು ಅಂಶಗಳಿಂದ ಅವತರಿಸಿದಂತೆಲ್ಲಾ ಶ್ರೀಲಕ್ಷ್ಮೀ ಕೂಡ ಅಂಥದೇ ರೂಪವನ್ನು ತಾಳಿದಳು. ಭಗವಂತನು ಆದಿತ್ಯನಾದಾಗ ಪದ್ಮೆಯಾಗಿ, ಭಾರ್ಗವನಾದಾಗ ಧರಣಿಯಾಗಿ, ರಾಮನಾಗಿ ಬಂದಾಗ ಸೀತೆಯಾದಳು. ಕೃಷ್ಣಾವತಾರದಲ್ಲಿ ರುಕ್ಮಿಣಿಯಾಗಿ ಭಗವಂತನ ಸಂಗಾತಿಯಾದಳು. ಭಗವಂತ ಯಾವ ರೂಪ ತಾಳಿದರೂ ಅದಕ್ಕೆ ಅನುಗುಣವಾದ ರೂಪ ಶ್ರೀಲಕ್ಷ್ಮೀಯದು.

## ವಿರಾಟ್ ವಿಶ್ವರೂಪ

ಸಾತ್ವಿಕ ಶಕ್ತಿ ಶಾರದೆ, ರಾಜಸ ಶಕ್ತಿ ಲಕ್ಷ್ಮೀ ತಾಮಸ ಶಕ್ತಿ ಕಾಳಿಯಾಗುತ್ತಾಳೆ. ಸೃಷ್ಟಿಗೆ ರಾಜಸ, ಸಾತ್ವಿಕ, ತಾಮಸ ಶಕ್ತಿ ಉಪಯುಕ್ತವಾದವು. ಕೀರ್ತಿ, ಬುದ್ಧಿ, ಹಸಿವು, ಬಲ,ತೃಷ್ಣಾ, ಕ್ಷಾಂತಿ, ತುಷ್ಟಿ.... ಇವೆಲ್ಲಾ ಶಕ್ತಿಯ ಅಂಶಗಳು ಎಂದು 'ಭಾರ್ಗವ ಸಂಹಿತೆ'ಯಲ್ಲಿ ಹೇಳಿದೆ. ಶ್ರೀಲಕ್ಷ್ಮೀಯನ್ನು ಶ್ರೀಸೂಕ್ತದ ಒಂದೊಂದು ಋಕ್ಕಿನಿಂದ ಮಲ್ಲಿಗೆ, ಶ್ವೇತ ಕಮಲ ಜಾಜಿ, ಮಂದಾರ, ಹೂಗಳಿಂದ ಒಂದೊಂದು ಥರ ಪೂಜಿಸಿ, ಶ್ರೀ ಸೂಕ್ತ ಪಠಣ ವಿಧಾನದಿಂದ ಆರಾಧಿಸಿದರೆ ಸಕಲೈಶ್ವರ್ಯ ಪ್ರಾಪ್ತಿಯಾಗುವುದೆಂದು ಪದ್ಮ ಪುರಾಣದಲ್ಲಿ ವಿವರಣೆ ಇದೆ. ಕರ್ಮಜೀವಿಯಾಗಿ ತನ್ನ ಸ್ವಂತ ಪರಿಶ್ರಮಗಳಿಂದ ನಿಲ್ಲಲು ಹವಣಿಸುವ ಪೌರುಷವುಳ್ಳ ಪುರುಷನನ್ನು ಅವಳು ಸದಾಕಾಲ ಅನುಗ್ರಹಿಸುತ್ತಾಳೆ ಎಂದು ಮತ್ಸ್ಯಪುರಾಣ ಹೇಳುತ್ತದೆ. ಹೀಗೆ ಕೇನ, ತೈತ್ತಿರೀಯ ಉಪನಿಷತ್ತು, ದೇವೀ ಭಾಗವತ, ಸಪ್ತಶತೀ, ದೇವೀ ಸೂಕ್ತ, ದುರ್ಗಾ ಸೂಕ್ತ, ಶ್ವೇತಾಶ್ವತರ ಉಪನಿಷತ್‌ಗಳೆಲ್ಲ ಶ್ರೀದೇವಿಯ ಆರಾಧನಾ ಮಹತ್ವವನ್ನು ಸಾರುತ್ತವೆ.

ಅಕ್ಷಯ ತೃತೀಯಾವೆಂದರೆ ಈಗ ವ್ಯಾವಹಾರಿಕ ಸುವರ್ಣಯುಗದ ಘಟ್ಟವಾದರೆ ಪ್ರಾಚೀನ ಕಾಲಘಟ್ಟದಲ್ಲಿ ವಿಜೃಂಭಿಸಿದ ಗೋಸಂಪತ್ತು, ಧಾನ್ಯ ಸಂಪತ್ತಿನ ಮೂಲಕ ಋಷಿಮುನಿಗಳು, ಅರಸರು ಸಂಪತ್ತಿನ ಒಡೆಯರಾಗಲು ಹರಸಾಹಸ ಮಾಡಿದ ಅನೇಕ ನಿದರ್ಶನಗಳು ಪುರಾಣ ಗ್ರಂಥಗಳಲ್ಲಿ ಸಿಗುತ್ತವೆ.



ಉಪಾಸನೆಯಿಂದ ಸುಖ, ಸಮೃದ್ಧಿ ಹಾಗೂ ಸೌಭಾಗ್ಯ ಕೌಟುಂಬಿಕ ವಾಗಿ, ಸಾಂಸಾರಿಕವಾಗಿ,ಮಹಾಲಕ್ಷ್ಮೀ ವ್ರತದ ಉಪಾಸನೆಯಿಂದ ಮುತ್ತೈದೆಯರಿಗೆ ಮಾಂಗಲ್ಯಭಾಗ್ಯ, ಪತೀ, ಪುತ್ರ, ಬಾಂಧವರಿಂದ ಸೌಕ್ಯ, ಋಣ ರೋಗ ದಾರಿದ್ರ್ಯ, ನಿವಾರಣೆ ಪಾಪ, ಅಪಮೃತ್ಯು, ಭಯ, ಶೋಕ, ಮನಸ್ತಾಪಗಳಿಂದ ವಿಮೋಚನೆ ಎಂದು ಭವಿಷ್ಯತ್ ಪುರಾಣದಲ್ಲಿ ಭೃಗು ಋಷಿಯ ಉಲ್ಲೇಖವಿದೆ. ಹಾಗೆ ಶ್ರೀಲಕ್ಷ್ಮೀಯ ಉಪಾಸನೆಯಿಂದ ಯಶಸ್ಸು ಸಕಲ ಧನ ಧಾನ್ಯಾದಿ ಪುರುಷಾರ್ಥಗಳ ಸಿದ್ಧಿ.

ಪತ್ನಿ ಪುತ್ರ ಭೃತ್ಯರಿಂದ ಸೌಖ್ಯಸಂಪದಭಿವೃದ್ಧಿ ಸಾಧ್ಯ ಎಂದು ಪುರಾಣ ಗಳು ಸಾರುತ್ತವೆ. ಶ್ರೀಸೂಕ್ತದ ಫಲಶ್ರುತಿ ಭಾಗದಲ್ಲಿ 'ನ ಕ್ರೋಧೋ ನ ಚ ಮಾತ್ಸರ್ಯಂ ! ನ ಲೋಭೋ ನಾ ಶುಭಾಮತಿಃ। ಭವನ್ತಿ ಕೃತ ಪುಣ್ಯಾನಾಂ ಭಕ್ತಾನಾಂ ಶ್ರೀಸೂಕ್ತ ಜಾಪಿನಾಮ್ ಎಂಬ ಅಭಯ ವಾಕ್ಯವಿದೆ. ಶ್ರೀಸೂಕ್ತ ವನ್ನು ಭಕ್ತಿ ಪುರಸ್ಸರವಾಗಿ ಜಪಿಸುವ ಪುಣ್ಯಾತ್ಮರಾದ ಜನರಿಗೆ ಸಿಟ್ಟು ಹೊಟ್ಟೆ ಕಿಚ್ಚು ಅತ್ಯಾಸೆ ಹಾಗೂ ಕೆಟ್ಟ ಬುದ್ದಿ ಉಂಟಾಗಲಾರದು ಎಂದರ್ಥ.

ಮಹಾಲಕ್ಷ್ಮಿಯು ಸಂಪತ್ಸಮೃದ್ಧಿಯ ಅಧಿದೇವತೆ. ಈ ದೇವಿಯ ಸಾಂಕೇತಿಕ ರೂಪವೇ ತುಂಬಿದ ಕಲಶ. ಕಲಶ ಸ್ಥಾಪನೆಯ ಅನಂತರ ಮಂತ್ರಪೂರ್ವಕವಾಗಿ ಶ್ರೀಮಹಾಲಕ್ಷ್ಮೀಯನ್ನು ಆವಾಹಿಸಿ, ಪೂಜಿಸುವುದು ಪದ್ಧತಿ. ಇಲ್ಲಿ ಕಲಶವು ಸಮೃದ್ಧಿಯ ಪ್ರತೀಕವಾಗಿ ಪೂಜೆ ಮಾಡುವ ಸಂಪ್ರ ದಾಯ ಬೆಳೆದು ಬಂದಿದೆ. ಇದು ಅಮೂರ್ತ ಕಲ್ಪನೆ.

### ಅಕ್ಷಯ ತೃತೀಯಾದ ಆಶಯ

ಸೌಭಾಗ್ಯವತಿಯರ ಹಣೆಯ ಬೈತಲೆಯ ಮುಂಭಾಗದಲ್ಲಿ 'ಲಕ್ಷ್ಮೀರ್ವಸತು'.... ದೇವಿ ವಾಸವಾಗಿದ್ದಾಳೆ ಎಂಬ ನಂಬಿಕೆ ಇದೆ. ವೈಶಾಖ ಶುಕ್ಲಪಕ್ಷದ ತೃತೀಯೆಯ ದಿನವನ್ನು ಅಕ್ಷಯ ತೃತೀಯಾವಾಗಿ ಆಚರಿಸುವ ಸಂಪ್ರದಾಯವಿದೆ. ಮುಖ್ಯವಾಗಿ ನಮ್ಮ ಜೀವನ ವಿಧಾನದಲ್ಲಿ ಪರಸ್ಪರ ಒಲುಮೆ, ಪ್ರೀತಿ ವಿಶ್ವಾಸಗಳೆಂಬ ಮಾನವೀಯ ಮೌಲ್ಯಗಳು ಹಾಸು ಹೊಕ್ಕಾಗಿರಬೇಕು. ಸದಾಚಾರ ಸಂಪನ್ನರಿಗೆ ಮಾತ್ರ ಈ ವ್ರತದ ಮಹತ್ತ್ವ ಏನೆನ್ನುವುದು ತಿಳಿಯುತ್ತದೆ.ಈ ಕಲಿಯುಗವು ಸಕಲ ಪಾಪಗಳ ಭಂಡಾರವೇ ಆಗಿದ್ದರೂ ಇದರಲ್ಲಿ ಒಂದು ದೊಡ್ಡ ಗುಣವೂ ಇದೆ. ಅದೇ ಭಕ್ತಿ ಭಾವ, ಗೀತೆಯಲ್ಲಿ ಶ್ರೀಕೃಷ್ಣ ಪರಮಾತ್ಮನು ಪತ್ರಂ, ಪುಷ್ಪಂ, ಫಲಂ, ತೋಯಂ ಯೋ ಮೇ ಭಕ್ತ್ಯಾ ಪ್ರಯಚ್ಛತಿ ॥ ಎಂದ. ಎಲ್ಲದರಲ್ಲಿಯೂ ಎಲ್ಲೆಲ್ಲೂ ಶ್ರೀ ದೇವರನ್ನು ಕಂಡರೆ ಅಹಂಕಾರ,ಮಮಕಾರ, ಅಹಂಭಾವಗಳು ನೀಗುತ್ತವೆ. ಶ್ರೀದೇವರ ನಾಮಸ್ಮರಣೆ ಮಾಡುವುದಕ್ಕೆ ಅಡ್ಡಿ ಆತಂಕಗಳು ಇರುವುದಿಲ್ಲ. ಮಡಿ ಮೈಲಿಗೆಗಳು ಇರುವುದಿಲ್ಲ. ಕೂತಲ್ಲಿ, ನಿಂತಲ್ಲಿ ಎಲ್ಲಿ ಬೇಕಾದರೂ ಭಗವಂತನ ಸ್ಮರಣೆ ಮಾಡಬಹುದು. ನಿಷ್ಕಲ್ಮಷ ಭಾವ ಮನಸ್ಸು ಸಾಕು, ಸ್ಮರಣೆಗೆ ಆಚಾರ ವಿಚಾರಗಳು ಸೂತಕಗಳು ಇರುವುದಿಲ್ಲ. ನಾಮಸ್ಮರಣೆ ಯಿಂದ ಅನೇಕ ಜನ್ಮದ ಪಾಪಗಳು ನಾಶವಾಗುತ್ತದೆ.

ಪಾಪಕರ್ಮಗಳಲ್ಲಿ ಕಾಯಿಕ, ವಾಚಕ, ಮಾನಸಿಕ ಎಂದು ಮೂರು ಬಗೆಗಳು.ಪಾಪಗಳನ್ನು ನಾಮಸ್ಮರಣೆಯೊಂದರಿಂದಲೇ ತೊಲಗಿಸ ಬಹುದು. ಈ ನರಜನ್ಮದಲ್ಲಿ ಪಾಪ ಪುಣ್ಯಗಳ ಪರಿಕಲ್ಪನೆ ವಿಶೇಷವಾಗಿದೆ. ಮತ್ತಷ್ಟು ಬೇಕು ಎಂಬ ಆಶಾಪಾಶದಲ್ಲಿ ಸಿಕ್ಕಿ ತೊಳಲುವುದೇ ಪಾಪ. ಈ ಆಶಾಪಾಶವನ್ನು ಹರಿದು, ಪರಮಾತ್ಮನಲ್ಲಿ ಒಂದಾಗುವುದೇ ವ್ರತಗಳ ಮುಖ್ಯ ಉದ್ದೇಶ . ಇದು ಆಡಂಬರಕ್ಕೆ, ಡಂಭಾಚಾರಕ್ಕೆ ಕಾರಣವಾಗದಂತೆ ಗಮನ ಇರಿಸಬೇಕು.

'ವಿಷ್ಣುಪುರಾಣ' ದಲ್ಲಿ ಒಂದು ಮಾತು ಹೀಗಿದೆ. ಯಾವುದೂ ದುಃಖಕ್ಕಾಗಲೀ,ಸುಖಕ್ಕಾಗಲಿ ಕಾರಣವಲ್ಲ. ಸುಖ ದುಃಖಗಳು ಮನಸ್ಸಿನ ಪರಿಣಾಮವನ್ನವಲಂಭಿಸಿವೆ. ಮನಸ್ಸಿನ ಭಾವನೆಗಳು ಒಳ್ಳೆಯದಾಗಿರ ಬೇಕು. ದುರಾಲೋಚನೆ, ದುರಭಿಮಾನ, ದುಷ್ಟರ ಸಹವಾಸ ಇವುಗಳಿಂದ ದುಃಖವೇ ಬರುತ್ತದೆ. ಸತ್ ಚಿಂತನೆ, ಸದ್ಭಾವನೆ, ಸಜ್ಜನರ ಸಹವಾಸ ಮತ್ತು ಪುಣ್ಯಕಾರ್ಯಗಳಿಂದ ಸುಖ ಪ್ರಾಪ್ತಿಯಾಗುತ್ತದೆ. ಮನಸ್ಸಿನಿಂದ, ಮಾತಿ ನಿಂದ ಮತ್ತು ದೇಹದಿಂದ ಮಾಡುವ ಕ್ರಿಯೆಗಳು ಒಳ್ಳೆಯ ಅಥವಾ ದುಷ್ಟ ಪರಿಣಾಮಗಳನ್ನುಂಟು ಮಾಡುತ್ತವೆ. ಮನುಷ್ಯನ ಕ್ರಿಯೆಗಳಿಗೆ ಮನಸ್ಸೇ ಕಾರಣವಾಗುತ್ತದೆ. ನಾವು ಮಾಡುವ ಕಾರ್ಯದಲ್ಲಿ ಪ್ರೇರಕ ಹಾಗೂ ಪೂರಕವಾಗಿ ಯೋಚಿಸಿದರೆ ಸುಖ ದುಃಖಗಳನ್ನು ಸಮನಾಗಿ ಕಾಣಲು ಸಾಧ್ಯ.ಈ ವ್ರತದ ಈ ಸಂದೇಶ ಯುಗಯುಗಾಂತರದಲ್ಲೂ ಪ್ರಸ್ತುತವೆನಿ ಸುವಂತಿದೆ.

ಪುರುಷಾರ್ಥವನ್ನು ಅನುಭವಿಸುವುದು ಪ್ರತಿಯೊಬ್ಬನ ಹೆಬ್ಬಯಕೆ. ಅದನ್ನು ಪ್ರಾಪ್ತಿಸಿಕೊಳ್ಳಲು ಹಲವು ಮಾರ್ಗಗಳು. ಅದರಲ್ಲಿ ಮುಖ್ಯವಾಗಿ ಸಾತ್ವಿಕ ಚಿಂತನೆ ಅಗತ್ಯ. ಇದು ಆರೋಗ್ಯ, ನಿರ್ವಿಘ್ನತೆ, ಐಶ್ವರ್ಯ, ಜ್ಞಾನ, ಮೋಕ್ಷಗಳೆಂಬ ಐದು ವಿಧಗಳ ಫಲವನ್ನು ದೊರಕಿಸಿಕೊಡುವುದಾಗಿದೆ. ಸನಾತನ ವೇದಕಾಲದಿಂದಲೂ ಮನುಷ್ಯನ ಬದುಕಿಗೆ ಪ್ರಕೃತಿಯ ಪಾತ್ರ ಅನುಪಮವಾದುದು. ಸೃಷ್ಟಿಯಲ್ಲಿರುವ ಬಗೆಬಗೆಯ ಜನರು ಒಂದೊಂದು ವಸ್ತುವನ್ನು ಬೇರೆ ಬೇರೆ ದೃಷ್ಟಿಗಳನ್ನು ಬಳಸಿಕೊಂಡು ನೋಡುತ್ತಾರೆ. ವಸ್ತುವಿನ ಹುಟ್ಟಿಗೆ ಸಹಜ ತನವನ್ನು ಅದರಲ್ಲಿ ಕಾಣುವಂತಾದರೆ ಅದನ್ನು ಸರಿಯಾದ ದೃಷ್ಟಿಕೋನವೆನ್ನಬಹುದು. ದೃಷ್ಟಿಯಲ್ಲಿ ವ್ಯತ್ಯಾಸ ವೈಪರೀತ್ಯಗಳು ಏಕೆ ಬರುತ್ತವೆ? ಸ್ವಾರ್ಥಮಯ ಮನಃ ಪ್ರವೃತ್ತಿಯನ್ನು ಅವಲಂಭಿಸಿದ ದರ್ಶನಕ್ರಿಯೆ ನಡೆಯುವುದರಿಂದ ಭಾರತ ವೇದಕಾಲ - ಕೃತತ್ರೇತಾದಿ ಯುಗಗಳಲ್ಲೂ ಹಾಗೂ ಪುರಾಣ ಕಾಲದಿಂದಲೂ ಮುಖ್ಯವಾಗಿ ಗೋ ಸಂಪತ್ತು ಧಾನ್ಯ ಸಂಪತ್ತು, ಕೃಷಿ ಪ್ರಧಾನ ದೇಶವಾಗಿತ್ತು. ಕೃಷಿಯೇ ಭಾರತದ ಜನಜೀವನದ ಆಧಾರವಾಗಿತ್ತು. ಋಷಿ - ಮುನಿಗಳು, ರಾಜ ಮಹಾ ರಾಜರು ಈ ಸಂಪತ್ತು ಗಳಿಸಿಕೊಳ್ಳಲು ನಾನಾ ರೀತಿಯಲ್ಲಿ ಹೋರಾಟ ಪ್ರಯತ್ನ ಬಲವನ್ನು ಮಾಡಿದ್ದಾರೆ. ಮಹಾಭಾರತದಲ್ಲಿ ಅಜ್ಞಾತ ವಾಸ ದಲ್ಲಿರುವ ಪಾಂಡವರನ್ನು ಗುರುತಿಸಲು ವಿರಾಟ ರಾಜನ ಗೋವುಗಳನ್ನು ಅಪಹರಿಸಿದಾಗ ಅರ್ಜುನನು ಬೃಹನ್ನಳೆಯಾಗಿ ಪ್ರಕಟಗೊಂಡ. ಮದೋ ನ್ಮತ್ತನಾದ ಕಾರ್ತವೀರ್ಯಾರ್ಜುನನು ಜಮದಗ್ನಿಯ ಆಶ್ರಮದಲ್ಲಿದ್ದ

ಕಾಮಧೇನುವನ್ನು ಅಪಹರಿಸಿದಾಗ ಭಾರ್ಗವ ರಾಮನು ಅವನ ಶಿರಸ್ಸನ್ನು ಕಡಿದು ಚೆಂಡಾಡಿದ.

'ಅನ್ನಾದ್ಭವಂತಿ ಭೂತಾನಿ' ಎಂಬಂತೆ ಜೀವಿಗಳ ಹುಟ್ಟು ಅನ್ನದಿಂದ. ಅನ್ನದ ಬೆಳೆ ಸಾಧ್ಯವಾಗುವುದು ಮಳೆಯಿಂದ. ಆದ ಕಾರಣ ಭಾರತದಲ್ಲಿ ಪಶು ಸಂಗೋಪನೆ ಕೃಷಿಗೆ ಪೂರಕವಾದ ಉದ್ಯೋಗ. ಈ ಉದ್ಯೋಗ ಕೃಷಿ ಹಾಗೂ ಆಹಾರ ಎರಡರ ಅಂಗವಾಗಿ ವ್ಯಾವಹಾರಿಕವಾಗಿ ಬೆಳೆದು ಬಂದಿದೆ. ದಾನಗಳಲ್ಲಿ ಸಹ ಗೋದಾನ ಹಾಗೂ ಅನ್ನದಾನಗಳೇ ಶ್ರೇಷ್ಠವೆಂದು ವೇದಗಳಲ್ಲಿ ನಿರೂಪಿಸಲಾಗಿದೆ.ಅಕ್ಷತೆ ಅಥವಾ ಮಂತ್ರ ಪೂರ್ವಕ ಅಕ್ಕಿಕಾಳು ಅಕ್ಷಯ ರೂಪದ ಸಂಕೇತವಾಗಿ ಅನುಗ್ರಹ, ಆಶೀರ್ವಾದ ರೂಪದಲ್ಲಿ ತೋರಿಬಂದಿದೆ. ನಿರಂತರ ಸಮೃದ್ಧಿಯ ಉತ್ತರೋತ್ತರ ಅಭಿವೃದ್ಧಿಯಾಗಲಿ ಎಂದು ಇದರ ಆಶಯಾರ್ಥವಾಗಿದೆ.



### ಗೋ ಸಂಪತ್ತು - ಗಾವೋ ವಿಶ್ವಸ್ಯ ಮಾತರಃ

ಗೋ ಸಂಪತ್ತು ಪ್ರಕೃತಿಮಾತೆಯು ನಮಗೆ ನೀಡಿರುವ ಅಮೂಲ್ಯ ಸಂಪನ್ಮೂಲ ಗೋಸಂಪದ ಅಭಿವೃದ್ಧಿಯಲ್ಲಿ ನಮ್ಮ ಬದುಕಿನ ಸಾರ್ಥಕ್ಯ ಅಡಗಿದೆ. ಗೋಮಯ, ಗೋರೋಚನ, ಗೋಮೂತ್ರ, ಗೋಕ್ಷೀರ, ಗೋದಧಿ ಹಾಗೂ ಗೋಘೃತಗಳೆಂಬ ಎಂಟು ಗೋಜನ್ಯ ವಸ್ತುಗಳನ್ನು ಗೋಷಡಂಗವೆನ್ನುತ್ತದೆ ಭವಿಷ್ಯ, ಪುರಾಣ, ಇವೆಲ್ಲವೂ ಪವಿತ್ರ ವಸ್ತುಗಳಾಗಿದ್ದು, ನಮ್ಮ ಪಾಪವನ್ನು ದೂರೀಕರಿಸಿ ನಮ್ಮನ್ನು ಶುದ್ಧಿಕರಿಸುತ್ತದೆ.

ಪರಶಿವನಿಗೆ ಪ್ರಿಯವಾಗಿರುವ ಬಿಲ್ವವೃಕ್ಷವೂ ಗೋಮಯದಿಂದಲೇ ಜನಿಸಿತಂತೆ ಈ ಬಿಲ್ವ ವೃಕ್ಷದಲ್ಲಿ ಶ್ರೀ ಲಕ್ಷ್ಮೀ ಸಾನ್ನಿಧ್ಯ ಇರುವುದರಿಂದ ಈ ಬಿಲ್ವಕ್ಕೆ ಶ್ರೀವೃಕ್ಷ ಎಂದೆನ್ನುತ್ತಾರೆ. ಇದೇ ಗೋಮಯದಿಂದ ನೀಲಿ, ಕೆಂಪು, ಕಮಲದ ಹೂಗಳ ಬೀಜಗಳು ಉತ್ಪನ್ನವಾದವು. ಎಲ್ಲಾ ಬೀಜಗಳು ಗೋಕ್ಷೀರದಿಂದಲೇ ಹುಟ್ಟಿದವು. ದೇವತೆಗಳಿಗೆ ತೃಪ್ತಿ ನೀಡುವ ಅಮೃತವು ಗೋಘೃತದಿಂದಲೇ ಉತ್ಪನ್ನವಾದುದು ಎಂದು ಸನಾತನ ನಂಬಿಕೆ.

ಗೋಮೂತ್ರದಿಂದ ಸರ್ವರೋಗಗಳೂ ನಿವಾರಣೆಯಾಗುವುದೆಂದು ಆಯುರ್ವೇದದಲ್ಲಿ ವಿಶೇಷವಾಗಿ ಉಲ್ಲೇಖಿಸಲಾಗಿದೆ. ಗೋ ಉತ್ಪನ್ನಗಳು ನಮ್ಮ ಆರ್ಥಿಕ ವಿಕಾಸದಷ್ಟೇ ಆಧ್ಯಾತ್ಮ ವಿಕಾಸಕ್ಕೆ ಪೂರಕವಾಗುತ್ತವೆ ಎಂಬುದು ಪೌರಾಣಿಕ ಪ್ರತಿಪಾದನೆ, ಸಮುದ್ರಮಥನ ಕಾಲದಲ್ಲಿ ಲೋಕಮಾತೆಯರಾದ ಐದು ಗೋವುಗಳು ಉತ್ಪನ್ನಗೊಂಡವು. ನಂದಾ, ಸುಭದ್ರಾ, ಸುರಭಿ, ಸುಶೀಲಾ ಹಾಗೂ ಬಹುಲಾ, ಪುರಾಣಗಳು ಗೋ ಪ್ರಶಂಸೆಯ ಮೂಲಕ ಭಾರತೀಯ ಜನಮಾನಸದಲ್ಲಿ ಗೋವಿನ ಬಗ್ಗೆ ಭಕ್ತಿ ಶ್ರದ್ಧೆಯನ್ನು ಮೂಡಿಸಿವೆ. ವೇದಸಾಹಿತ್ಯದಲ್ಲಿ ಹಲವಾರು ಕಡೆಗಳಲ್ಲಿ ಗೋಸ್ತುತಿಯನ್ನು ಕಾಣಬಹುದು. ವೇದಪುರಾಣ ವಾಙ್ಮಯದಲ್ಲಿ ಗೋವು 'ಸರ್ವದೇವಮಯೀ' ಎಂಬ ವಿವರಣೆ ಸಿಗುತ್ತದೆ. ಗೋವನ್ನು ವರ್ಣನೆ ಮಾಡುತ್ತ ಗೋವಿನ ವಿಶ್ವರೂಪವನ್ನು ಈ ರೀತಿಯಲ್ಲಿ ಸಾದರ ಪಡಿಸಲಾಗಿದೆ.

'ಪ್ರಜಾಪತಿ ಮತ್ತು ಪರಮೇಷ್ಠಿಗಳು ಗೋವಿನ ಎರಡು ಕೋಡುಗಳಲ್ಲಿ ಸ್ಥಿತರಾಗಿದ್ದಾರೆ. ಇಂದ್ರ ಗೋವಿನ ನೆತ್ತಿಯಲ್ಲಿ, ಅಗ್ನಿದೇವ ಹಣೆಯಲ್ಲಿ, ನಕ್ಷತ್ರ ರಾಜ ಚಂದ್ರನು ಮಸ್ತಿಷ್ಕದಲ್ಲಿ ಯಮದೇವತೆಯು ಕತ್ತಿನ ಸಂದಿಯಲ್ಲಿ ನೆಲೆಸಿದ್ದಾರೆ. ದ್ಯುಲೋಕ, ಮರುತ್ ದೇವತೆಗಳು,ರೇವತಿ - ಕೃತಿಕಾ ಮುಂತಾದ ನಕ್ಷತ್ರಗಳು ಗ್ರೀಷ್ಮವೇ ಮುಂತಾದ ಋತುಗಳು, ರಣಹದ್ದು ಮುಂತಾದ ಪಕ್ಷಿಗಳು, ಬೃಹತೀ ಮುಂತಾದ ಸಾಹಿತ್ಯ ಛಂದಸ್ಸುಗಳು, ಮಿತ್ರ ವರುಣ ತ್ವಷ್ಟ್ರ - ಅರ್ಯಮಾ - ಬೃಹಸ್ಪತಿ ರುದ್ರಾದಿ ದೇವತೆಗಳು ಗಂಧರ್ವರು, ಅಪ್ಸರೆಯರು ಗೋವಿನ ವಿವಿಧ ಅಂಗಗಳಲ್ಲಿ ನೆಲೆಸಿದ್ದಾರೆ. ಇದೇ (ಗೋವಿನ) ವಿಶ್ವರೂಪ ಇದೇ ಅದರ ಸರ್ವ ಪ್ರಕಟಿತ ರೂಪ, ಭಾರತೀಯ ಸಂಸ್ಕೃತಿಯ ಆಧಾರ ಗ್ರಂಥಗಳಾದ ಸ್ಮೃತಿ , ಪುರಾಣ, ಗವೋಪನಿಷತ್ ಹಾಗೂ ಇತಿಹಾಸ ಗ್ರಂಥಗಳಲ್ಲಿ ಗೋವು ಹಾಗೂ ಮಾನವರ ಪರಸ್ಪರ ಬೆಸುಗೆಯ ವಿವರಣೆಯು ಕಂಡು ಬರುತ್ತದೆ.

ಅಕ್ಷತೆ ಅಥವಾ ಮಂತ್ರಪೂರ್ವಕ ಅಕ್ಕಿಕಾಳು ಅಕ್ಷಯ ರೂಪದ ಸಂಕೇತ. ಇದು ಸದಾ ಅನುಗ್ರಹ,ಆಶೀರ್ವಾದ ರೂಪದಲ್ಲಿರುತ್ತದೆ. ನಿರಂತರ ಸಮೃದ್ಧಿ, ಉತ್ತರೋತ್ತರ ಅಭಿವೃದ್ಧಿಯಾಗಲಿ ಎಂದು ಇದರ ಆಶಯಾರ್ಥ.



# ಶ್ರೀ ಕೂರ್ಮ ಜಯಂತಿ

– ಎಸ್. ವೆಂಕಟರಾಘವನ್
98457 93917

ಆದಿ ದೇವ ಅವತಾರ ಪುರುಷ ಶೇಷಶಯನ ಶ್ರೀಮನ್ನಾರಾಯಣ
ಜಗತ್ವ್ಯಾಪಿತ ಶ್ರೀವಿಷ್ಣು ಶ್ರೀಹರಿ ವೇದೋದ್ಧಾರಕ ವೈಕುಂಠವಾಸ ॥
ಪ್ರಥಮ ಅವತಾರ ಮತ್ಸ್ಯರೂಪಿ ಪ್ರಳಯದಿಂದ ಭಕ್ತರ ಕಾಪಾಡಿ ವೇದ ಸಂರಕ್ಷಿಸಿದೆ
ಲೋಕ ಸಂರಕ್ಷಣೆ ಭಾರವ ಹೋರುತ, ಮಂದರಗಿರಿ ಹೊತ್ತು ಕೂರ್ಮರೂಪದಿ ॥
ಭೂದೇವಿ ಸಂರಕ್ಷಣೆ ಲೋಕ ಕಲ್ಯಾಣವಾಯಿತು ವೀರ ಪರಾಕ್ರಮಿ ವರಾಹ ರೂಪದಿ
ಹಿರಣ್ಯಕಶುಪಿನ ಸಂಹಾರ ಭಾಗವತೋತ್ತಮ ಪ್ರಹ್ಲಾದ ರಕ್ಷಣೆ ನರಸಿಂಹ ರೂಪದಿ ॥
ಬ್ರಹ್ಮಾಂಡನಾಯಕ ಬಾಲಕನಾಗಿ ತುಳಿದೆ ಬಲಿಯ ಪಾತಾಳಕೆ ವಾಮನ ರೂಪದಿ
ಪರಾಕ್ರಮಶಾಲಿ ಪರಶು ಅಸ್ತ್ರವ ಹಿಡಿದು ಕ್ಷತ್ರಿಯರ ನಾಶ ಭಾರ್ಗವ ರೂಪದಿ॥
ಧರ್ಮವೇ ತಾನಾಗಿ ಗುಣಗಳ ಸನ್ನಿಧಿ ಆದರ್ಶ ಪುರುಷ ಶ್ರೀರಾಮ ರೂಪದಿ
ಧರ್ಮವೇ ರಕ್ಷಣೆ ಸಜ್ಜನರ ಪೋಷಿಸುತ ಗೀತೆಯ ಉಪದೇಶಿಸಿದ ಶ್ರೀಕೃಷ್ಣರೂಪದಿ ॥
ವೈರಾಗ್ಯ ನಿರ್ವಾಣ ಶರಣಾಗತ ಸೂಚಿಸಿ ಶಾಂತಿಯ ನೆಲೆಸಿದೆ ಬುದ್ಧ ರೂಪದಿ
ಧರ್ಮ ಪೋಷಣೆ ಕಲಿಪ್ರಭಾವ ನಾಶ ಮಾಡುತ ಅಶ್ವಾರೂಢ ಕಲ್ಕಿ ರೂಪ ॥
ಯುಗಯುಗದಲಿ ಅವತರಿಸಿದ ಶ್ರೀಹರಿ ಸಜ್ಜನ ಪೋಷಕ ಧರ್ಮ ಪರಿರಕ್ಷಕ
ಕಲಿಯುಗದಿ ಕಾಮಧೇನು - ಕಲ್ಪವೃಕ್ಷ ಶ್ರೀವೆಂಕಟೇಶ ಶ್ರೀಪದ್ಮಾವತಿರಮಣ॥

ಪರಮಾತ್ಮ ಸರ್ವಾಂತರ್ಯಾಮಿ ಶ್ರೀಮಹಾವಿಷ್ಣು ತ್ರಿಮೂರ್ತಿಗಳಲ್ಲಿ ಸ್ಥಿತಿಕಾರಕ, ಧರ್ಮರಕ್ಷಕ. ವೇದೋದ್ಧಾರಕ. ಸಜ್ಜನರ ಸಂರಕ್ಷಣೆ, ಧರ್ಮರಕ್ಷಣೆಗಾಗಿ ಬಗೆ ಬಗೆಯ ರೂಪದಲ್ಲಿ ಅವತಾರ ತಾಳಿದರು.ಮೂಲ ರೂಪದಲ್ಲಿ ಶ್ರೀಮಹಾವಿಷ್ಣು ಶ್ರೀಮನ್ನಾರಾಯಣ ಎಂಬುವ ನಾಮಗಳು. ವಿಷ್ ಎಂಬುವ ಧಾತುವಿನಿಂದ ವಿಷ್ಣು ಎನ್ನುವ ನಾಮಕ್ಕೆ ಅರ್ಥ ಬರುವುದು. ವಿಷ್ ಎಂದರೆ ಎಲ್ಲೆಡೆ ವ್ಯಾಪಿಸಿರುವ ಅರ್ಥ. ಎಲ್ಲೆಡೆ ವ್ಯಾಪಿಯಿರುವ ವಿಷ್ಣು ಶ್ರೀಹರಿ ಧರ್ಮ ಪರಿರಕ್ಷಕ. ಯದ್ ವಿಷಿತೋ ಭವತಿ ತದ್ ವಿಷ್ಣುರ್ಭವತಿ ಎಲ್ಲೆಡೆ ಪ್ರವೇಶಿಸಿ ಇರುವ ದೇವರು ಶ್ರೀಮಹಾವಿಷ್ಣು. ಶ್ರೀಹರಿ ಶ್ರೀಮನ್ನಾರಾಯಣ ! ವಿಷ್ಣುಸಹಸ್ರ ನಾಮದಲಿ ವರ್ಣಿಸಿದಂತೆ ವಿಶ್ವಂ ವಿಷ್ಣುರ್ವ ಷಟ್ಕಾರೋ ಭೂತಭವ್ಯಭವತ್ಪ್ರಭುಃ ಭೂತಕೃದ್ಭೂತಭೃದ್ಭಾವೋ ಭೂತಾತ್ಮಾ ಭೂತ ಭಾವನಃ ನಡೆದ ಕಾಲಕೆ, ನಡೆಯುತ್ತಿರುವ ಕಾಲದಲ್ಲಿ ಮುಂಬರುವ ಕಾಲ ಪ್ರಭು ಶ್ರೀಹರಿ! ಶ್ರೀಹರಿ ಎಲ್ಲ ಭೂತಗಳ ಸೃಷ್ಟಿಸಿ ಪೋಷಣೆ ಮಾಡುತ್ತ ಭಾರವ ಹೊತ್ತು ಜೀವಿಗಳಲ್ಲಿ ಇರುವರು.

## ದೂರ್ವಾಸ ಮಹಾಮುನಿಯ ಶಾಪ : -

ದೂರ್ವಾಸ ಮಹಾಮುನಿ ಅತ್ರಿ ಮಹರ್ಷಿ ಮತ್ತು ಅನಸೂಯದೇವಿ ಪುತ್ರರು. ಚಿಕ್ಕ ಅಪರಾಧವಾದರೂ ತ್ವರಿತವಾಗಿ ಕೋಪ ಬರುವುದು. ಶಾಪವ ಕೊಡುವರು. ದೂರ್ವಾಸ ಮಹಾಮುನಿಗಳು ತಪಃ ಶಕ್ತಿ ಸಂಪನ್ನರು. ಸಂತುಷ್ಟರಾದಾಗ ವರ ಕೊಡುವರು. ಹಾಗೆಯೇ ಶೀಘ್ರದಲ್ಲೇ ಕೋಪ ಬರುವುದು ಮತ್ತು ಶಾಪವ ಕೊಡುವರು. ಹೀಗಾಗಿ ದೂರ್ವಾಸರನ್ನು ಕಂಡಾಗ ಎಲ್ಲರು ಭಕ್ತಿಯಿಂದ ನಮಸ್ಕರಿಸಿ ಸಂತುಷ್ಟಗೊಳಿಸಿ ಉಪಚಾರ ಮಾಡುವರು. ಭಕ್ತ ಅಂಬರೀಷ. ಶಾಕುಂತಲೆ, ಸಾಂಬ ಇವರೆಲ್ಲ ದೂರ್ವಾಸಮುನಿಗಳ ಶಾಪಕ್ಕೆ !ಒಳಗಾದವರೇ! ಒಮ್ಮೆ ದೇವತೆಗಳ ರಾಜ ದೇವೇಂದ್ರ ಸಂಚ ರಿಸುವಾಗ ದೂರ್ವಾಸ ಮುನಿ ಎದುರಾದರು. ದೂರ್ವಾಸಮುನಿಗಳು ಸಂತುಷ್ಟರಾಗಿ ಶ್ರೀಹರಿಗೆ ಅಲಂಕರಿಸಿದ ಪುಷ್ಪಮಾಲೆಯನ್ನು ಕೊಟ್ಟರು. ದೇವೆಂದ್ರ ಹೂಮಾಲೆಯನ್ನು ತನ್ನ ವಾಹನವಾದ ಆನೆಗೆ ಅಲಂಕರಿಸಿದರು. ಹೂವಿನ ಸುವಾಸನೆಯಿಂದ ಆನೆ ಪರೆದಾಡುವಾಗ ಹೂವಾಲೆ ತುಂಡಾಗಿ ನೆಲಕ್ಕೆ ಬಿದ್ದು ಮಣ್ಣುಪಾಲಾಯಿತು. ಮುನಿಕ್ರೋಧಿತರಾಗಿ. ಶ್ರೀಹರಿಯಮಾಲೆಯನ್ನು ನಿರ್ಲಕ್ಷ್ಯ ಮಾಡಿದೆ! ವಿಷ್ಣು ಪ್ರಸಾದವನ್ನು ಗೌರವಿಸದೇ ನಿರ್ಲಕ್ಷ್ಯ ಮಾಡಿದೆ! ದೇವರಾಜ ಶಕ್ತಿಶಾಲಿ, ಪದವೀಧರ, ದೈವತ್ವದ ಗರ್ವದಿಂದ ಮಾಡಿದ ಕೃತ್ಯಕ್ಕಾಗಿ ಇಂದಿನಿಂದ ದೈವಶಕ್ತಿ ತೊಲಗಿ ಹೋಗುವುದು ಎಂದು ಶಾಪವ ಕೊಟ್ಟರು. ದೇವತೆಗಳು ಅಸುರರೊಂದಿಗೆ ಯುದ್ಧದಲ್ಲಿ ಸೋಲನ್ನಪ್ಪಿದರು. ಅಸುರ ಚಕ್ರವರ್ತಿ ಬಲಿ ಲೋಕವನ್ನು ವಶಪಡಿಸಿಕೊಂಡರು.

## ಶ್ರೀಹರಿಯ ಸಂದೇಶ ಅಮೃತದ ಪ್ರಸ್ತಾಪನೆ :

ದೇವೇಂದ್ರರು ಬ್ರಹ್ಮದೇವರನ್ನು ಆಶ್ರಯಿಸಿ ತಮ್ಮ ಶಾಪ ವಿಮುಕ್ತಿಗೆ ಉಪಾಯ ಸೂಚಿಸಲು ಬೇಡಿಕೊಂಡರು. ಬ್ರಹ್ಮದೇವರು ಶ್ರೀಹರಿಯನ್ನು ಶರಣು ಬೇಡಲು ಸೂಚಿಸಿದರು. ಶ್ರೀಹರಿಯ ಪ್ರಸಾದವಾದ ಹೂವಿನ ಹಾರದಿಂದ ಶಾಪ ಬಂತು. ಶ್ರೀಹರಿಯ ಶರಣು ಬೇಡಿ ಶಾಪವಿಮುಕ್ತಿ ಮಾಡಲು ಶರಣು ಬೇಡುವುದು ಒಂದೇ ಪರಿಹಾರ ಎಂದು ನುಡಿದರು. ದೇವೇಂದ್ರರು ವೈಕುಂಠಕ್ಕೆ ತೆರಳಿ ಶ್ರೀಹರಿಯನ್ನು ಸ್ತುತಿಸಿದರು. ಶರಣು ಬೇಡಿ ಶಾಪ ಪರಿಹಾರ ಮಾಡಲು ಬೇಡಿಕೊಂಡರು. ಶ್ರೀಹರಿ ಸಂತುಷ್ಟರಾಗಿ ದೇವೇಂದ್ರರಿಗೆ ಶಾಪವಿಮುಕ್ತಿ ಆಗುವುದು.ಲೋಕಕಲ್ಯಾಣ ಆಗುವುದು ಎಂದು ಆಶ್ವಾಸನೆ ನೀಡಿದರು. ವಿಧವಿಧವಾದ ಮೂಲಿಕೆಗಳು. ಹೂಗಳು ಕ್ಷೀರ ಸಾಗರದಲ್ಲಿ ಬೆರೆಸಿ ಮಂದರ ಪರ್ವತವನ್ನು ಕಡಗೋಲನ್ನಾಗಿ ಮಾಡಿ ಸಮುದ್ರದಲ್ಲಿ ನಿಲ್ಲಿಸಿ, ವಾಸುಕಿಯನ್ನು ಹಗ್ಗಮಾಡಿ ಮಂಥನ ಮಾಡಲು ಸೂಚಿಸಿದರು.ಕ್ಷೀರಸಮುದ್ರವು ಸಪ್ತ ಸಮುದ್ರಗಳಲ್ಲಿ ಒಂದು.

## ಕ್ಷೀರ ಸಾಗರಮಂಥನ :

ದೇವತೆಗಳು ಅಸುರರನ್ನು ಮಂಥನ ಮಾಡುವಲ್ಲಿ ಪಾಲ್ಗೊಳ್ಳಲು ಕೇಳಿದರು. ಅಮೃತ ಬರುವ ವಿಷಯ ತಿಳಿದು ದಾನವರು ಒಪ್ಪಿಕೊಂಡರು. ಮಂದರಪರ್ವತ ಸಮುದ್ರದಲ್ಲಿ ನಿಲ್ಲಿಸಿ,ವಾಸುಕಿಯನ್ನು ಹಗ್ಗವಾಗಿ ಮಂಥನ ಆರಂಭವಾಯಿತು. ದೇವ- ದಾನವರು ಕುತೂಹಲದಿಂದ ಕಾರ್ಯದಲ್ಲಿ ಪಾಲ್ಗೊಂಡರು. ವಿಸ್ತೀರ್ಣವಾದ ಹಾಲಿನ ಸಮುದ್ರದಲ್ಲಿ ಮಂದರಪರ್ವತ ನಿಲ್ಲಲು ಕಷ್ಟವಾಗಿ ಮುಳುಗುವ ಪರಿಸ್ಥಿತಿ ಎದುರಾಯಿತು. ದೇವತೆಗಳು ಶ್ರೀಹರಿಯನ್ನು ಪ್ರಾರ್ಥನೆ ಮಾಡಿದರು. ದೇವತೆಗಳ ಪ್ರಾರ್ಥನೆ ಕೇಳಿ ಶ್ರೀಹರಿ ಲಕ್ಷ ಯೋಜನ ವಿಸ್ತೀರ್ಣ, ಜಂಬೋದ್ವೀಪದಷ್ಟು ವಿಶಾಲವಾದ ಆಮೆ ಅವತಾರ ತಾಳಿ ವಿಶಾಲವಾದ ಬೆನ್ನನ್ನು ಮಂದರ ಪರ್ವತದ ಅಡಿಯಲ್ಲಿ ಸ್ಥಾಪಿಸಿ ಪರ್ವತವನ್ನು ಸ್ಥಿರವಾಗಿ ನಿಲ್ಲಿಸಿದರು. ಇದೇ ಶ್ರೀಹರಿಯ ಎರಡನೆಯ ಅವತಾರ. ಕೂರ್ಮ (ಆಮೆ) ರೂಪಧಾರಣೆ ಮಾಡುವುದರಿಂದ ಎರಡನೆಯ ಅವತಾರ ಕೂರ್ಮಾವತಾರ. ವೈಶಾಖ ಶುದ್ಧ ಹುಣ್ಣಿಮೆಯಂದು ಶ್ರೀಹರಿ ಕೂರ್ಮಾ ವತಾರ ತಾಳಿದರು.

## ಮಂಥನದಲ್ಲಿ ಉದ್ಭವಿಸಿದವರು:

**ಹಾಲಾಹಲ (ವಿಷ) :-** ಕ್ಷೀರಸಾಗರದಿಂದ ಪ್ರಳಯಕಾಲದ ಅಗ್ನಿ ಹೋತ್ರದಂತೆ ಧಗ ಧಗ ಉರಿಯುವ ಲೋಕಗಳನ್ನು ನಾಶ ಮಾಡುವ ವಿಷ



ಹೊರಬಂತು. ಲೋಕಗಳನ್ನು ರಕ್ಷಿಸಲು ಪರಮೇಶ್ವರ ವಿಷವನ್ನು ಕಂಠದಲ್ಲಿ ಬಂಧಿಸಿದರು. ಅಂದಿನಿಂದ ಪರಮೇಶ್ವರ ನೀಲಕಂಠರಾದರು. 'ಶಿವ' ಎಂದರೆ ಕಲ್ಯಾಣಕಾರಿ ಜಗತ್ತನ್ನು ರಕ್ಷಿಸಿದ ಪರಮೇಶ್ವರ ಪಾದಕ್ಕೆ ಸಾಷ್ಟಾಂಗ ನಮಸ್ಕಾರ! ಆತ್ಮನಿವೇದನೆ.

**ಶ್ರೀಮಹಾಲಕ್ಷ್ಮೀ:-** ಸಕಲ ಶೋಭಾನಮಯವಾಗಿ ಪದ್ಮಾಸನ ಸ್ಥಿತ ಶ್ರೀಮಹಾ ಲಕ್ಷ್ಮೀ ಕ್ಷೀರಸಮುದ್ರದಿಂದ ಉದ್ಭವಿಸಿದರು. ದೇವತೆಗಳು. ಮುನಿಗಳು ಇವರು ಯಾರು? ಎಂದು ಶ್ರೀಹರಿಯನ್ನು ಪ್ರಶ್ನಿಸಿದರು.

ಅಮೃತಂ ದೇವ ದೇವೇಶ ನಾರಾಯಣ ಜಗನ್ಮಯ।
ಕೈಷಾ ದೇವೀ ವಿಶಾಲಾಕ್ಷೀ ಯದಾ ವದ್ಭೂಹಿ ಪೃಚ್ಛತಾಮ್॥

ದೇವತೆಗಳ ಅಧಿನಾಯಕಾ ! ಶ್ರೀಮನ್ನಾರಾಯಣಾ ! ಸರ್ವಲೋಕ ಸ್ವರೂಪ! ವಿಶಾಲ ನೇತ್ರವುಳ್ಳ ಇವರು ಯಾರು? ಎಂದು ಶ್ರೀಹರಿಯನ್ನು ಕೇಳಿದರು.

ಇಯಂಸಾ ಪರಮಾ ಶಕ್ತಿರ್ಮನ್ಮಯೀ ಬ್ರಹ್ಮರೂಪಿಣೆ
ಮಾಯಾ ಮಮ ಪ್ರಿಯಾನಂತಾ ಯಯೇದಂ ಧಾರ್ಯತೇ ಜಗತ್

ಇವರು ಶಕ್ತಿ ಸ್ವರೂಪಿಣಿ ! ಪರಬ್ರಹ್ಮಸ್ವರೂಪಿಣಿ! ಮಾಯಾ ರೂಪಿ! ಅಂತ ವಿಲ್ಲದ ಶಕ್ತಿ, ನನಗೆ ಪ್ರೀತಿಪಾತ್ರರು ಎಂದು ಶ್ರೀಹರಿ ನುಡಿದರು.

ಚತುರ್ಭುಜಾ ಶಂಖ ಚಕ್ರ ಪದ್ಮಹಸ್ತಾ ಸ್ರಗನ್ವಿತಾ
ಕೋಟಿ ಸೂರ್ಯ ಪ್ರತೀಕಾರ ಮೋಹಿನೀ ಸರ್ವ ದೇಹಿನಾಮ್॥

ಇವರು ನಾಲ್ಕು ಭುಜಗಳಿಂದ, ಶಂಖ, ಚಕ್ರ, ಪದ್ಮಧರಿಸಿ, ಪುಷ್ಪ ಹಾರದಿಂದ ಶೋಭಿತರಾದವರು. ಇವರ ಶಕ್ತಿ ಕೋಟಿಸೂರ್ಯ ತೇಜಸ್ಸಿನ ಸಮಾನ ! ಪ್ರಾಣಿಗಳನ್ನು ಮೋಹಿಸುವ ಶಕ್ತಿ ಉಳ್ಳವರು. ಭಾಗ್ಯ ಹಾಗೂ ಸಂಪತ್ತಿನ ದೇವತೆ. ಪಂಚಮಿ ತಿಥಿಯಲ್ಲಿ ಶುಕ್ರವಾರ ಅಭಿಜಿತ್‌ಲಗ್ನದಲ್ಲಿ ಶ್ರೀದೇವಿ ಆವೀರ್ಭವಿಸಿದರು. ದೇವಿಯ ದಯಾಮಯ ನೋಟದಿಂದ ಜಗತ್ತಲ್ಲಿ ಸಕಲ ಐಶ್ವರ್ಯಪ್ರಾಪ್ತಿ ಆಯಿತು. ಶ್ರೀಮಹಾಲಕ್ಷ್ಮಿದೇವಿ ಹೂಮಾಲೆಯನ್ನು ಶ್ರೀಹರಿಗೆ ಸಮರ್ಪಿಸಿ ಶ್ರೀಹರಿಯ ವಕ್ಷ ಸ್ಥಳವನ್ನು ಸೇರಿದರು. ಕೌಸ್ತುಭಮಣಿಯನ್ನು ಕೂಡ ಶ್ರೀಹರಿ ಧರಿಸಿದರು. ಸಮುದ್ರ ಗರ್ಭದಿಂದ ಉದ್ಭವಿಸಿದರಿಂದ ಶ್ರೀಮಹಾಲಕ್ಷ್ಮೀ ದೇವಿಯನ್ನು ಸಮುದ್ರ ತನಯೇ! ಎಂದು ಕರೆಯುವರು. ಲಕ್ಷ್ಮೀಂಕ್ಷೀರ ಸಮುದ್ರರಾಜತನಯಾಂ ಶ್ರೀರಂಗಧಮೇಶ್ವರೀಂ ದಾಸೀ ಭೂತ ಸಮಸ್ತ ದೇವವನಿತಾಂ ಲೋಕೈಕ ದೀಪಾಂಕುರಾಂ ಎಂದು ದೇವಿಯ ಸ್ತೋತ್ರದಲ್ಲಿ ವರ್ಣನೆ ಕಾಣ ಬಹುದು.

**ಕೌಸ್ತುಭಮಣಿ: -** ಜಗತ್ತಿನ ಅತಿಶ್ರೇಷ್ಠ ರತ್ನಾಭರಣ, ಇದನ್ನು ಶ್ರೀಹರಿ ಧರಿಸುತ್ತಾರೆ.

**ಉಚ್ಚೈಶ್ರವಸ್ಸು:-** ಅತಿ ಶ್ರೇಷ್ಠವಾದ ಬಿಳಿಯ ಕುದುರೆ, ದೇವತಾ ಅಶ್ವ

**ವರನಿ :**

ಸುರಾಸಕ್ಕ ಅಭಿಮಾನಿದೇವತೆ ಇಂತಹವಾರುಣಿ ದೇವಿಯ ಸಾನ್ನಿಧ್ಯವುಳ್ಳ ಸುರೆಯನ್ನು ಅಸುರರು ಸ್ವೀಕರಿಸಿದರು. ಇದನ್ನು ರಾಕ್ಷಸರು ತೆಗೆದುಕೊಂಡರು.

**ಐರಾವತ:** ಬಿಳಿ ಆನೆ,ದೇವೇಂದ್ರರು ತಮ್ಮ ವಾಹನ ಮಾಡಿಕೊಂಡರು.

**ಚಂದ್ರದೇವರು:** ಚಂದ್ರದೇವರು ಸಕಲ ಕಲಾವಿದ. ಸಮುದ್ರತನಯ ಆದರಿಂದ. ಶ್ರೀ ಮಹಾಲಕ್ಷ್ಮೀದೇವಿಯ ಸೋದರ ಪೂಜ್ಯನೀಯ.

**ಅಪ್ಸರೆಯರು:** ಅಪ್ಸರೆಯರು ಸೌಂದರ್ಯರಾಶಿಯಾದ ಮಹಿಳೆಯರು. ಸ್ವರ್ಗಲೋಕಕ್ಕೆ ತೆರಳಿದರು.

**ಕಾಮಧೇನು:** ಕೇಳಿದ್ದನ್ನು ಕೊಡುವ ಹಸು. ಕಾಮಧೇನುವನ್ನು ಮುನಿಗಳು ಕೈಗೊಂಡರು. ಗೋ ಸಂರಕ್ಷಣೆ ಮಾಡುತ್ತ ಗೋದ್ರವ್ಯವಾದ ಹಾಲು. ತುಪ್ಪ ದೇವತೆಗಳ ಯಜ್ಞಯಾಗಾದಿಗಳಿಗೆ ಉಪಯೋಗಿಸಿ ದೇವತೆಗಳಿಗೆ ಹವಿಸ್ಸನ್ನು ಕೊಡುವರು.

**ಕಲ್ಪವೃಕ್ಷ: -** ಬೇಡಿದ ಮನೋಕಾಮನೆ, ಕೋರಿಕೆಗಳ ಈಡೇರಿಸುವ ಕಲ್ಪವೃಕ್ಷ

**ಪಾರಿಜಾತ:** ಅತಿಶ್ರೇಷ್ಠವಾದ ಹೂವಿನ ವೃಕ್ಷ, ಪರಿಮಳಭರಿತ ಹೂಗಳ ಕೊಡುವ ವೃಕ್ಷ

**ಧನ್ವಂತರಿ ಸಹಿತ ಅಮೃತ :**

ಕೊನೆಯಲ್ಲಿ ವೈದ್ಯ ಶಾಸ್ತ್ರಕ್ಕೆ ಅಧಿದೇವತೆ, ಶಂಖ,ಚಕ್ರ,ಗದಾ ಪದ್ಮಗಳ ಧರಿಸಿ ಸಾಕ್ಷಾತ್ ಶ್ರೀಮಹಾವಿಷ್ಣುವೇ ದಿವ್ಯ ಪುರುಷನಾಗಿ ಧನ್ವಂತರಿ ಅಮೃತ ಭಾಂಡದಿಂದ ಆವಿರ್ಭವಿಸಿದರು.

**ಮೋಹಿನಿ ಅವತಾರ:**

ಅಮೃತ ಕಂಡ ಮರುಕ್ಷಣ ರಾಕ್ಷಸರು ಪರದಾಡುವಾಗ ಶ್ರೀಹರಿ ಮೋಹಿನಿ ರೂಪ ಧಾರಣೆ ಮಾಡಿ ದೇವತೆಗಳನ್ನು ಒಂದು ಕಡೆ ಮತ್ತು ಅಸುರರನ್ನು ಇನ್ನೊಂದು ಕಡೆಕೂಡಿಸಿ ಅಮೃತ ಹಂಚಲು ಆರಂಭಿಸಿದರು. ಮೊದಲಿಗೆ ದೇವತೆಗಳಿಗೆ ಕೊಟ್ಟರು. ಸೌಂದರ್ಯ ರಾಶಿಯಾದ ವಿಷ್ಣು ಮಾಯೆಯಿಂದ ಮೋಹಿನಿಯನ್ನು ನೋಡುತ್ತಾ ದಾನವರು ಅಮೃತ ವಿಷಯ ಮರೆತರು.ದೇವತೆಗಳಿಗೆ ಹಂಚಿಕೆ ಆದ ಮೇಲೆ ಅಮೃತ ಭಾಂಡವನ್ನು ಇಂದ್ರ ಲೋಕದಲ್ಲಿ ಸುರಕ್ಷಿಸಲು ದೇವೇಂದ್ರರಿಗೆ ಒಪ್ಪಿಸಿದರು.

ವೈಶಾಖ ಶುದ್ಧ ಹುಣ್ಣಿಮೆಯಂದು ಶ್ರೀಹರಿ ಆಮೆಯ ಅವತಾರ ತಾಳಿದರು. ಹೀಗೆ ಈ ದಿನವನ್ನು ಕೂರ್ಮಜಯಂತಿ ಎಂದು ಆಚರಿಸಲಾಗುವುದು. ಭಗವಂತನ ಸೇವೆ ಮಾಡಲು ನವವಿಧ ಭಕ್ತಿ ಮಾರ್ಗಗಳಿವೆ. ಶ್ರವಣ.ಕೀರ್ತನ, ಸ್ಮರಣ. ಪಾದಸೇವೆ. ಅರ್ಚನೆ, ವಂದನೆ, ಆತ್ಮನಿವೇದನೆ ಮತ್ತು ದಾಸ್ಯ. ಇಂದಿನ ದಿನ ಶ್ರೀ ಹರಿಯ ಪೂಜೆ, ಅರ್ಚನೆ, ಧ್ಯಾನ ಮಾಡುವುದರಿಂದ ಕಷ್ಟದಿಂದ ಪಾರಾಗಿ ಸುಖ ಶಾಂತಿ ಮತ್ತು ಮೋಕ್ಷ ಪಡೆಯುವರು.

ಯಸ್ಮಾತ್ ಸಂಜಾಯತೇ ಕೃತ್ಸ್ನಂ ಯತ್ರ ಚೈವ ಪ್ರಲೀಯತೇ।

ನಮಸ್ತಸ್ಮೈ ಸುರೇಶಾಯ ವಿಷ್ಣವೇ ಕೂರ್ಮ ರೂಪಿಣೇ॥

ಸಕಲ ಜಗತ್ತನ್ನು ಸೃಷ್ಟಿಸಿ ಐಕ್ಯ ತನ್ನಲ್ಲೇ ಮಾಡಿ ಇಟ್ಟುಕೊಳ್ಳುವ ದೇವಾಧಿದೇವ. ಕೂರ್ಮರೂಪಿಯಾದ ಶ್ರೀಮಹಾವಿಷ್ಣುವಿಗೆ ನಮಸ್ಕಾರಗಳು.





# ಬೆಟ್ಟದೊಡೆಯನ ಭಕ್ತಾಗ್ರೇಸರ ತಾಳ್ಳಪಾಕ ಅನ್ನಮಾಚಾರ್ಯರು

-ಶ್ರೀಮತಿ. ಕೆ.ವಿ. ಲತಾ
98803 51524

ಅನ್ನಮಾಚಾರ್ಯರ ಗೀತೆಗಳು ಭಾವ - ಗಾಂಭೀರ್ಯ, ಭಾಷಾ - ಸೌಂದರ್ಯ ಭಕ್ತಿಯ ಅತಿಶಯ ಸ್ವರ ಮಾಧುರ್ಯಗಳಿಂದ ಕೂಡಿದ್ದು ಒಮ್ಮೆ ಕೇಳಿದಂತೆ ಮತ್ತೆ ಮತ್ತೆ ಕೇಳಬೇಕೆಂಬ ಹಂಬಲದಿಂದಾಗಿ, ಭಗಂವತನೆಡೆಗೆ ಸಾಗಿ ಜೀವನವನ್ನು ದೈವೀಕರಿಸಿಕೊಳ್ಳಲು ಅನುವು ಮಾಡುತ್ತದೆ. ಅನ್ನಮಾಚಾರ್ಯರ ಸರಳ - ಸುಂದರ ಭಾವಗೀತಾತ್ಮಕ ಜಾನಪದ ದಾಟಿಯ ಸಂಕೀರ್ತನೆಗಳು ಜನಸಾಮಾನ್ಯರನ್ನು, ಪಂಡಿತ - ಪಾಮರರನ್ನು ಆಕರ್ಷಿಸಿದೆ.

'ಅನ್ನಮಾಚಾರ್ಯರು' ಕಡಪಾ ಜಿಲ್ಲೆ, ರಾಜಂಪೇಟೆ ತಾಲ್ಲೂಕಿನ ತಾಳ್ಳಪಾಕಂ ಎಂಬ ಗ್ರಾಮದಲ್ಲಿ, ಹದಿನೈದನೇ ಶತಮಾನದ ಆದಿಯಲ್ಲಿ ಬಹುಶಃ 22-5-1408 ರಂದು,''ಶಿವ-ವಿಷ್ಣು'' ಈಶ್ವರನನ್ನೂ ಸಮಾನವಾಗಿ ಆರಾಧಿಸುವ ತೆಲುಗು - ಸ್ಮಾರ್ತ - ನಂದವರೀಕ ಬ್ರಾಹ್ಮಣ ದಂಪತಿಗಳಾದ-ತಂದೆ-ನಾರಾಯಣ ಸೂರಿ, ತಾಯಿ ಲಕ್ಕಮಾಂಬ ರವರಿಗೆ ವೈಶಾಖಮಾಸದ ವಿಶಾಖ ನಕ್ಷತ್ರದಲ್ಲಿ ಜನಿಸಿದರು. ಬಾಲಕ ಅನ್ನಮಯ್ಯನು ತನ್ನ ಮುಗ್ಧ ನಗುವನ್ನು ಹೊರಸೂಸುತ್ತಾ ಹುಣ್ಣಿಮೆಯ ಬೆಳದಿಂಗಳನ್ನು ತನ್ನ ಕಂಗಳಲ್ಲಿ ಹೊಮ್ಮಿಸುತ್ತಾ ಮಾತು ಮಾತಿಗೆ ವೆಂಕಟಪ್ಪನಿಗೆ 'ಜೋತ' ಮಾಡುತ್ತಿದ್ದ. ವೆಂಕಟಣ್ಣನ ಹೆಸರು ಹೇಳಿದರೇನೇ ಹಾಲು ಕುಡಿಯುತ್ತಿದ್ದ ವೆಂಕಟಪತಿ ಮೇಲೆ ಲಾಲಿ ಹಾಡು ಹಾಡದೆ ನಿದ್ರೆಮಾಡನು.

ಲಕ್ಕಮಾಂಬ ಭಕ್ತಿಗೀತೆಗಳನ್ನು ಹಾಡುತ್ತಿದ್ದರೆ ತಾನೂ ಧನಿಯ ಗೂಡಿಸುತ್ತಿದ್ದ ನಾರಾಯಣಸೂರಿ ಕಾವ್ಯದಲ್ಲಿನ ಅರ್ಥವನ್ನು ವಿವರಿಸುತ್ತಿದ್ದರೆ ಏನೋ ಅರ್ಥವಾದಂತೆ ತಾನೂ ತಲೆಯಲ್ಲಾಡಿಸುತ್ತಿದ್ದ. ತನ್ನ ತಂದೆ 'ವಿಷ್ಣು ಸಹಸ್ರನಾಮ'ಪಾರಾಯಣದ ಪೂರ್ವ ಭಾವಿಯಾಗಿ ಆಚರಿಸುತ್ತಿದ್ದ 'ಅಂಗ ನ್ಯಾಸ' - ಕರನ್ಯಾಸಗಳನ್ನು ತಾನೂ ಅನುಸರಿಸುತ್ತಾ ತನ್ನ ಮಗ್ಧತೆಯಿಂದ ಮೆರೆಯುತ್ತಿದ್ದ.

ಚೆನ್ನಕೇಶವನ ಗುಡಿ ಸೇರಿ 'ಬುಜ್ಜಿ ಕೇಶವಾ' ಎಂದು ಸ್ವಾಮಿಯನ್ನು ಮುದ್ದುಮುದ್ದಾಗಿ ಕರೆಯುತ್ತಿದ್ದ. ಸದಾ ಆಟದಲ್ಲಿ, ಹಾಡಿನಲ್ಲಿ ಮುಳುಗಿ ತೇಲುತ್ತಿದ್ದ ಅನ್ನಮಯ್ಯ - ಕೆರೆ ಕಟ್ಟೆಯನ್ನೇರಿ, ಗಿಡಗಂಟೆ ಕೊರಳೊಳಗಿಂದ ಹೊರಟ ಹಕ್ಕಿಗಳ ಹಾಡಿಗೆ ಮರುಳಾಗಿ, ತಾನೂ ಧನಿಗೂಡಿಸುತ್ತಿದ್ದ. ತಂಗಾಳಿಗೆ ಮೈಯೊಡ್ಡಿ ಅದರ ಇಂಚರಕ್ಕೆ, ಅದು ತರುತ್ತಿದ್ದ ಹೂವಿನ ಕಂಪ ಆಘ್ರಾಣಿಸುತ್ತಾ ಮೈಮರೆಯುತ್ತಿದ್ದ.

ಮೂಡಲ ಮನೆಯ ಮುತ್ತಿನ ನೀರಿನಿಂದ ಎರಕವ ಹೊಯ್ದು ಬಾಗಿಲು ತೆರೆದು, ಜಗವೆಲ್ಲಾ ಬೆಳಕಾಗುವುದನ್ನು ಕಂಡು ಬೆರಗಾಗುತ್ತಿದ್ದ. ಘಮಘಮಿಸುವ ಮೊಗ್ಗು ಪಟ ಪಟನೆ ಒಡೆಯುವುದು ಕಂಡು, ಎಲೆಗಳ ಮೇಲೆ ಹೂಗಳ ಒಳಗೆ ಅಮೃತದ ಬಿಂದುವನ್ನು ಕಂಡು ಅಚ್ಚರಿಗೊಳ್ಳುತ್ತಿದ್ದ. ಕೆರೆಗಳಲ್ಲಿನ ಅಲೆಗಳಲ್ಲಿ ಉಯ್ಯಾಲೆಯಾಡುವ ಕಮಲಗಳನ್ನು ನೋಡಿ ಕುಣಿಯುತ್ತಿದ್ದ. ಅರಿಯದ ಆಳ - ಕಾಣದ ಬಣ್ಣದ ಬಗ್ಗೆ ಚಿಂತಿಸಿ ತಿಳಿಯಾದ ಮನದ ಅನ್ನಮಯ್ಯಾ ಶಾಂತಿ ರಸದಿಂದ ಮನ ತುಂಬಿದ.


ಕನ್ಯೆಯರು ಬೆಳದಿಂಗಳಲ್ಲಿ 'ಜಾಜರ' ಹಾಡುಗಳನ್ನು ಹಾಡುತ್ತಿದ್ದರೆ ಅವರಲ್ಲಿ ಸೇರಿ ಅವರನ್ನು ಕೀಟಲೆ ಮಾಡುತ್ತಿದ್ದ. ಕುಯಲು ಹಾಡುಗಳ ಜಾನಪದ ಹಾಡುತ್ತಿದ್ದರೆ ಅದನ್ನು ತನ್ಮಯವಾಗಿ ಆಲಿಸುತ್ತಿದ್ದ ಆಟ ವಾಡುತ್ತಲೇ, ಪ್ರಕೃತಿಯಲ್ಲಿ ಆಗು - ಹೋಗುಗಳ ವೀಕ್ಷಿಸುತ್ತಲೇ, ಅಪ್ಪ ಕಲಿಸಿದ ಪಾಠವನ್ನು ಶ್ರದ್ಧೆಯಿಂದ ಕಲಿಯುತ್ತಲೇ ಬೆಳೆದ 'ಅನ್ನಮಯ್ಯ' - ತ್ರಿವಿಕ್ರಮನಂತೆ ಬೆಳೆದ.

ತಿರುಪತಿ ತಿಮ್ಮಪ್ಪನ ವರಪ್ರಸಾದವೇ ಮನುಜೋತ್ತಮರಲ್ಲಿ ಮಿನುಗುವ ಮೂರುತಿ - ಶ್ರೀಪುರಂದರ ವಿಠಲನೇ, ಈ ಪರ್ವಕಾಲದಲ್ಲಿ ಜನಿಸಿದ ನಮ್ಮ ಅನ್ನಮಾಚಾರ್ಯರು ವಿಷ್ಣುವಿನ ಆಯುಧ ವಿಶೇಷ - ''ನಂದಕ ಖಡ್ಗ''ವೆಂದೇ ನಂಬುಗೆ.

'ಖಡ್ಗ' ಜಗತ್ತಿನಲ್ಲಿ ಶಾಂತಿಯನ್ನು ಹಿಂಸಾಮಾರ್ಗದಲ್ಲಿ ನೆಲೆಗೊಳಿಸಿದರೆ ಅನ್ನಮಾಚಾರ್ಯರು ಲೇಖನಿಯ ಕೈಯಲ್ಲಿ ಹಿಡಿದು ಜನ ಜಾಗೃತಿಯನ್ನು,ಮನಃ ಪರಿವರ್ತನೆಯನ್ನು, ತಮ್ಮ ಸರಳ ಸುಂದರ ಕೀರ್ತನೆಗಳ ಮೂಲಕ ಮಾಡಿ ಜನರಲ್ಲಿ ತಾಂಡವವಾಡುತ್ತಿದ್ದ ತಾಂಡ ವಾಡುತ್ತಿರುವ ಕೋಮು - ಗಲಭೆ, ಜಾತಿ - ಮತ, ಮೇಲು - ಕೀಳು, ಮಡಿ- ಮೈಲಿಗೆ, ಸ್ನಾನ - ಸಂಧ್ಯಾವಂದನೆ, ಎಂಜಲು - ಮುಸರೆ, ಪೂಜೆ ಪುನಸ್ಕಾರ ಎಂಬ ಸಮಸ್ಯೆಗಳಿಗೆ ಪರಿಹಾರ ಸೂಚಿಸಿ''ಲೇಖನಿ ಖಡ್ಗಕ್ಕೂ ಮಿಗಿಲು'' ಎಂಬುದನ್ನು ಸಾಬೀತು ಪಡಿಸಿದರು.

## ದೈವತ್ವದೆಡೆಗೆ - ಸುಲಭದ ಹಾದಿ

15ನೇ ಶತಮಾನದಲ್ಲಿ ಜೀವಿಸಿದ್ದ ಇವರು ತಮ್ಮ ಎಳೆಯ ವಯಸ್ಸಿನಲ್ಲಿಯೇ ತಿರುಪತಿಯ ಗಿರಿಯನ್ನೇರಿ ನಿಂತ ಶ್ರೀವೆಂಕಟೇಶ್ವರನ



ಅನ್ನಮಾಚಾರ್ಯರ ದೃಷ್ಟಿಯಲ್ಲಿ - ವಿಷ್ಣು - ಪರಮಚೇತನ, ಶಾಶ್ವತ ನಿರಾಕಾರ ಪರಬ್ರಹ್ಮವೇ ಸಾಕಾರವಾಗಿ ಶ್ರೀ ವೇಂಕಟೇಶ್ವರನಾಗಿ ಅಸಂಖ್ಯ ಮತಗಳ ದೇವ - ದೇವತೆಗಳ ಸಾಕಾರ ರೂಪವೇ ವೆಂಕಟಗಿರಿಯಲ್ಲಿ ನೆಲೆನಿಂತು ದೇವ ಪಿತೃಗಳ ಶಾಶ್ವತ ಮಿತ್ರ ಎಲ್ಲಾ ಜೀವಿಗಳ ಏಕಮಾತ್ರ ಆಶ್ರಯ ಇವರು ಭಗವಂತನ ಏಕತ್ವ ಹಾಗೂ ಪರಮಾತ್ಮನ ವಿವಿಧ ಅವತಾರಗಳ ರೂಪ ಮತ್ತು ನಾಮಗಳಲ್ಲಿರುವ ಮೂಲ ಭೂತ ಅನನ್ಯತೆಯನ್ನು ದರ್ಶಿಸಿ ಅವನ್ನು ತಮ್ಮ ಸಂಕೀರ್ತನೆಗಳಲ್ಲಿ ಸ್ಥಿರಗೊಳಿಸಿದ್ದಾರೆ.

ಅನ್ನಮಾಚಾರ್ಯರ ಗೀತೆಗಳು ಭಾವ-ಗಾಂಭೀರ್ಯ, ಭಾಷಾ-ಸೌಂದರ್ಯ ಭಕ್ತಿಯ ಅತಿಶಯ ಸ್ವರ ಮಾಧುರ್ಯಗಳಿಂದ ಕೂಡಿದ್ದು ಒಮ್ಮೆ ಕೇಳದಂತೆ ಮತ್ತೆ ಮತ್ತೆ ಕೇಳಬೇಕೆಂಬ ಹಂಬಲದಿಂದಾಗಿ, ಭಗವಂತನೆಡೆಗೆ ಸಾಗಿ ಜೀವನವನ್ನು ದೈವೀಕರಿಸಿಕೊಳ್ಳಲು ಅನುವು ಮಾಡುತ್ತದೆ. ಅನ್ನಮಾಚಾರ್ಯರ ಸರಳ - ಸುಂದರ ಭಾವಗೀತಾತ್ಮಕ ಜಾನಪದ ದಾಟಿಯ ಸಂಕೀರ್ತನೆಗಳು ಜನ ಸಾಮಾನ್ಯರನ್ನು, ಪಂಡಿತ - ಪಾಮರರನ್ನು ಆಕರ್ಷಿಸಿದುದಲ್ಲದೇ ತಾಳ್ಳಪಾಕದ ಬಳಿಯ ನಗರ ತಂಗದೂರಿನ ಪ್ರಧಾನನಾಗಿದ್ದ ಸಾಳುವ ನರಸಿಂಹರಾಯ (ಕ್ರಿ.ಶ. 1445-1504)ನನ್ನೂ ಆಕರ್ಷಿಸಿದವು. ರಾಜನ ಗೌರವ ಪೂರ್ಣ-ಉದಾರ ಗುಣದಿಂದಾಗಿ ಅವನಲ್ಲಿ ಕೆಲ ಕಾಲ ಉಳಿದು, ತಮ್ಮ ಸಂಕೀರ್ತನೆಗಳನ್ನು ರಾಜಾ ಸ್ಥಾನದಲ್ಲಿ, ಅಲ್ಲಿ ನೆರೆದ ಪ್ರಜೆಗಳ ಆತ್ಮವಿಕಾಸಕ್ಕಾಗಿ ಹಾಡುತ್ತಿದ್ದರು.

ಉಡುಗೊರೆ - ಸನ್ಮಾನಗಳು ಅವರೆಡೆಗೆ ಹುಡುಕಿಕೊಂಡು ಬಂದವು. ಒಳಿತು-ಕೆಡಕು ಹೊಗಳಿಕೆ-ತೆಗಳಿಕೆ ಎಲ್ಲವನ್ನೂ ನಿರ್ಲಿಪ್ತ ಭಾವದಿಂದ ಸ್ವೀಕರಿಸಿ 'ಅದೃಷ್ಟದ ಚಂಚಲತೆಯ ನಡುವೆ, ಅಚಲವನ್ನೇರಿ ಅಚಲೇಶ್ವರನಾದ ಶ್ರೀವೇಂಕಟೇಶ್ವರನಲ್ಲಿ ಅಚಲನಾಗಿ ನೆಲೆನಿಂತರು ಅನ್ನಮಾಚಾರ್ಯರು. ಇವರು ತಮ್ಮ ಜೀವಿತದ ಕೊನೆಯ ವರ್ಷಗಳನ್ನು ತಾಳ್ಳಪಾಕಂ ಮತ್ತು ತಿರುಪತಿಯ ಮಧ್ಯೆ ಸತತವಾಗಿ ಸಂಚರಿಸುತ್ತಾ ಶ್ರೀವೇಂಕಟೇಶ್ವರನ ವಾರ್ಷಿಕ ಬ್ರಹ್ಮೋತ್ಸವದಲ್ಲಿ ತಪ್ಪದೇ ಭಾಗವಹಿಸುತ್ತಾ ನೆಮ್ಮದಿಯಿಂದ ಬಾಳು ಸಾಗಿಸಿದರು. ಸಾಕಷ್ಟು ಭೂಮಿಯನ್ನು ಅನೇಕ ಉಡುಗೊರೆಗಳನ್ನು ತಮ್ಮ ಅಭಿಮಾನಿಗಳಿಂದ ತಾವು ಕೇಳದೆಯೇ ಕೊಡುಗೆಯಾಗಿ ಪಡೆದರು.

ಜಗತ್ತಿನ ಆಕರ್ಷಣೆಗಳನ್ನು ಮಾರುಕಟ್ಟೆಯ ಮೆರಗು-ಬೆರಗುಗಳಿಗೆ ಹೋಲಿಸಿ ಇರುಳಿನ ವೇಳೆಯ ಮಂಜಿನ ಹನಿಗಳಂತೆ ಎಂದರು. ಅಸಹಾಯಕ ಮಾನವ ತನ್ನ ಅನಿವಾರ್ಯ ಅಸಹಾಯಕ ಸ್ಥಿತಿಯಿಂದ ಪಾರಾಗಲು ವಿಷ್ಣುವಿಗೆ ಶರಣಾಗುವುದೆ ಸುಲಭ - ಸುರಕ್ಷಿತ ವಿಧಾನವೆಂದರು. ತಮ್ಮ ಸಹ ಜೀವಿಗಳ ಶೋಚನೀಯ ಸ್ಥಿತಿಯ ಬಗ್ಗೆ ಅನುಕಂಪಿಗಳಾಗಿದ್ದು, ತಮಗೆ ದೊರೆತ ಅನುಗ್ರಹವನ್ನು ಅವರೊಂದಿಗೆ ಹಂಚಿಕೊಳ್ಳುವ ಹಂಬಲ, ತುಡಿತವಿತ್ತು. ತಮ್ಮ ನುಡಿಗಳು ಭಗವಂತನ ಪಾದಗಳ ಬೆಳಗುವ,ಅವುಗಳಿಗೆ ಅರ್ಪಿಸಿದ ಸಂಮೋಹಕ ರೂಪು-ಕೃಪಾವಲಯಕ್ಕೆ ಬಂದು, ದಿನಕ್ಕೊಂದು ಕೀರ್ತನೆಯ ರಚಿಸುವೆನೆಂದು ಕಂಕಣ ತೊಟ್ಟು, "ಸಂಕೀರ್ತನ ಯಜ್ಞ" ದಲ್ಲಿ ತಮ್ಮನ್ನೇ ಆಹುತಿಯಾಗಿಸಿಕೊಂಡವರು.

ಅನ್ನಮಾಚಾರ್ಯರು ತಮ್ಮ ಜೀವಿತದ ಬಹುಕಾಲವನ್ನು ತಿರುಪತಿ ಹಾಗೂ ಅದರ ಸುತ್ತಮುತ್ತಲಲ್ಲಿಯೇ ಕಳೆದು. ಶ್ರೀವೇಂಕಟೇಶ್ವರನ ಗುಣಗಾನ - ಸನ್ನಿಧಾನ-ಸುತ್ತಣ ವಾತಾವರಣದ ಬಣ್ಣನೆ, ವೈಷ್ಣವ ಮತದ ವಿಶಿಷ್ಟಾದ್ವೈತ ವೇದಾಂತದ ಸಾರಬೋಧನೆ ಇವೆಲ್ಲವನ್ನೂ ಸುಮದೊಳಗಿನ ಸುಗಂಧದಂತೆ ತಮ್ಮ ಕೀರ್ತನೆಗಳಲ್ಲಿ ಅಡಗಿಸಿ, ಈ ಕೀರ್ತನೆ ಕುಸುಮಗಳನ್ನು ಶ್ರೀವೇಂಕಟೇಶ್ವರನ ಪಾದ ಕುಸುಮಕ್ಕೆ ಅರ್ಪಿಸಿ ಧನ್ಯತಾ ಭಾವವನ್ನು ತಾಳಿದವರು. ಯಾಮುನಾಚಾರ್ಯ ಮತ್ತು ರಾಮಾನುಜಚಾರ್ಯರು ಪ್ರತಿಪಾದಿಸಿದ ತತ್ವಗಳಿಗೆ ಆಧಾರ ಒದಗಿಸಿದ, ವಿಷ್ಣು ಸುತ್ತಿಗಳನ್ನು ತಮಿಳಿನಲ್ಲಿ ರಚಿಸಿ ದೈವ ಭಕ್ತಿಯಲ್ಲಿ ಉನ್ನತ್ತರಾದ ಆಳ್ವಾರರ ಶ್ರೇಷ್ಠ ಪರಂಪರೆಯ ಉತ್ತಾರಾಧಿಕಾರಿಗಳು ಅನ್ನಮಾಚಾರ್ಯರು.

ಬದುಕಿನ ಅರ್ಥ - ಉದ್ದೇಶಗಳನ್ನು ಸ್ಪಷ್ಟವಾಗಿ ಗ್ರಹಿಸಿಕೊಂಡು, ಸಂಪೂರ್ಣ ಸಮರ್ಪಣಾ ಭಾವದಿಂದಲೂ ಜಗತ್ತಿನ ವೈಭವ - ವಿಜೃಂಭಣೆ ಅಬ್ಬರ- ಆಡಂಬರಗಳಿಂದ ವಿಚಲಿತರಾಗದೆ ತಮ್ಮ ಗುರಿಯತ್ತ ಸಾಗಿದರು. ಸಂಚಾರ ಸಮಯದಲ್ಲಿ ಆಲಯಗಳಲ್ಲಿ ದೇವ - ದೇವತೆಗಳ ಸಂದರ್ಶಿಸಿ, ಆಯಾ ದೇವರನ್ನು ಸ್ತುತಿಸಿದರೂ ಆ ಎಲ್ಲಾ ದೇವರಲ್ಲಿ ತಮ್ಮ ಇಷ್ಟ ದೈವವಾದ ಶ್ರೀವೇಂಕಟೇಶ್ವರನನ್ನೇ ದರ್ಶಿಸಿ ಪುಲಕಿತರಾದರು.

ಕುಸುಮಗಳಾದರೂ, ದೀನ-ದಲಿತರು ಅಜ್ಞಾನದಲ್ಲಿ ತೊಳಲಾಡುತ್ತಿರುವ ಜೀವಿಗಳಿಗೆ ದಾರಿ ದೀವಿಗೆಗಳಾಗಲಿ ಎಂಬ ಆಶಯ ಅವರ ಕೀರ್ತನೆಗಳಲ್ಲಿ ಹಾಸು ಹೊಕ್ಕಾಗಿದೆ. ವಿಶ್ವದೊಳಗಿನ ಸಿಹಿ - ಕಹಿಗಳ ಅನುಭವಿಸುತ್ತಾ ಅದರೊಳಗೊಂದಾದ ಅಣ್ಣಮಾಚಾರ್ಯರು ಅದೊಂದು "ನಾನಾಟಿ ಬದುಕು ನಾಟಕಮುಸಾಗಿ ಹೋಗುವ ರಂಗ ದೃಶ್ಯ" ಎಂಬುದನ್ನು ಒಂದು ಗಳಿಗೆಯೂ ಮರೆಯಬಾರದು.

ಅನ್ನಮಾಚಾರ್ಯರು ತಮ್ಮ ಪಾತ್ರದ ರಂಗಾಭಿನಯವನ್ನು ಪೂರ್ಣ ನೈಪುಣ್ಯದಿಂದ ನಿರ್ವಹಿಸಿ ನಿಗದಿತ ಸಮಯ ಒದಗಲು ಅಂದರೆ 23/2/1503 ರಂದು ತಮ್ಮ 95 ವರ್ಷಗಳ ಅರ್ಥಪೂರ್ಣ - ಪರಿಪೂರ್ಣ ಜೀವನ ನಡೆಸಿ ತಮ್ಮ ಜೀವಿತದ ಸಾಧನೆಯು ಪರಿಪೂರ್ಣವಾಯಿತೆಂದು ಸಾರ್ಥಕ ಮನೋಭಾವದಿಂದ ರಂಗದಿಂದ ಅಂತಿಮವಾಗಿ ನಿರ್ಗಮಿಸಿದರು.

## ಅನ್ನಮಯ್ಯ - ಪುರಂದರ

ಪುರಂದರದಾಸರು (ಕ್ರಿ.ಶ.1484 -1564 ) ಕನ್ನಡ ನಾಡಿನಲ್ಲಿ ದಾಸಕೂಟಕ್ಕೆ ನಾಂದಿಯ ಹಾಡಿದರೆ ಅನ್ನಮಾಚಾರ್ಯರು ನೆರೆದವರೆಲ್ಲ ಭಾವಪರವಶರಾಗಿ ಕಲೆತು ಹಾಡುವಂತಹ ಭಜನೆಗಳನ್ನು ರಚಿಸಿ 'ಭಜನ ಪದ್ಧತಿ ' ಕೂಟಕ್ಕೆ ನಾಂದಿ ಹಾಡಿದರು ಇಬ್ಬರೂ ಸಂಗೀತ ರಸಿಕರು, ಸಂಗೀತ ಶಾಸ್ತ್ರಜ್ಞರು ಆದರೂ, ಸಂಗೀತವನ್ನು ಸಭೆಗಳಲ್ಲಿ ಪಾಮರ ರಸಿಕರ ಎದುರು ಪಿನಿಕೆ ಮಾಡುವುದರಲ್ಲಿ ತೋರದೆ, ದೇವರೆದುರು ಒಪ್ಪಿಸುವ ಪದ್ಧತಿಯನ್ನು ಮೆಚ್ಚಿಕೊಂಡರು. ಸಾಹಿತ್ಯದ ಸೊಬಗು - ಭಾವದ ಬಂಧುರತೆ - ಜನಮನವ ಮಿಡಿವ ಸರಳವಾದ ಸಂಗೀತ ಇವುಗಳ ತ್ರಿವೇಣಿ ಸಂಗಮವೇ ಅನ್ನಮಯ್ಯ - ಪುರಂದರರ ಸಂಕೀರ್ತನೆಗಳು.

"ನನಗೇ ಇಂದಿನ ಕೂಳು ನೀಡಿ ನೀ ಧನ್ಯನಾದೆ ! ಎಂದು ಸ್ವಾಭಿಮಾನಿಯಾದ ಶ್ರೀಪುರಂದರ ದಾಸರು-ಸಂಶಯದ ಸುಳಿಯಲ್ಲಿ ಸಿಕ್ಕಿ ವ್ಯಾಪಾರದ ಲಾಭ ನಷ್ಟಗಳಿಗೆ ಮೈಯೊಡ್ಡಿ ಸುಟ್ಟು ಸುಣ್ಣವಾಗಿದ್ದ, ಹದಿಹರಿಯದ ನಾಯಕರು ಶ್ರೀವ್ಯಾಸತೀರ್ಥರಿಂದ ಅನುಗ್ರಹಿಸಲ್ಪಟ್ಟು ಹರಿದಾಸ ದೀಕ್ಷೆ ಪಡೆದು, ಹರಿದಾಸರಾಗಿ, ಹರಿಯ ಕಾಲಿನ ಕಸವಾಗಿ, ಶ್ರೀಪುರಂದರದಾಸರಾಗಿ ಹರಿಯೊಡನೆ ವ್ಯಾಪಾರ ವೆಸಗಳು ಮುಂದಾದ ದಾಸರು ಏಳು ಗಿರಿಗಳನೇರಿ ನಿಂತು ನಾಲ್ಕು ಗೋಡೆಗಳ ಕತ್ತಲೆಯ ಗರ್ಭಗೃಹದಲ್ಲಿ ಹೊರಗಣ್ಣಿಗೆ ಅಗೋಚರವಾಗಿ ಜಗದ ವ್ಯಾಪಾರವ ಬಹು ಚಾಣಾಕ್ಷತೆಯಿಂದ ಎಸಗುತ್ತಿರುವ 'ಶ್ರೀವೆಂಕಟೇಶ್ವರನ ದರ್ಶನಾಕಾಂಕ್ಷಿತರಾದ - ವ್ಯಾಪಾರಿ ಪುರಂದರರು ಗಿರಿಯೆಡೆಗೆ ಸರ ಸರ ನಡೆದರು, ಗಿರಿಯನ್ನೇರಿದರು.

ಶ್ರೀಹರಿಭಕ್ತಿಯ ಹಾಡುಗಳನ್ನು ರಚಿಸಿದವರಲ್ಲಿ ತೆಲುಗಿನಲ್ಲಿ ಮೊದಲಿಗರು ಅನ್ನಮಾರ್ಚಾರಾದರೆ ಕನ್ನಡದಲ್ಲಿ ಆ ಸ್ಥಾನವನ್ನು ಮುಳುಬಾಗಿಳಿನ ಮಾಧ್ವ ಸಂಪ್ರದಾಯ ಮಠದ ಶ್ರೀಪಾದರಾಜರಿಗೆ ನೀಡಲಾಗಿದೆ. ಅವರಿಗಿಂತ ಮೊದಲು 'ಆದ್ಯರೂ ಕೆಲವರು ಪದಗಳನ್ನು ರಚಿಸಿದರೆಂದು ಹೇಳಲಾಗಿದೆ.

ಆದರೆ ಪದಗಳನ್ನು ರಚಿಸಿ ತಾವೂ ದಂಡಿಗೆ ಬೆತ್ತ ಹಿಡಿದು ಕಾಲಿಗೆ ಗೆಜ್ಜೆ ಕಟ್ಟಿಕೊಂಡು ತಕ ಧಿಮಿ ಎಂದು ನರ್ತಿಸುತ್ತಾ ಶ್ರೀಹರಿಯ ಭಕ್ತಿಯನ್ನು ಜನಪ್ರಿಯಗೊಳಿಸಿದವರು ಪುರಂದರದಾಸರು (1484-1564) ಸ್ವತಃ ಗುರುಗಳಾದ ಶ್ರೀವ್ಯಾಸತೀರ್ಥರೇ, "ದಾಸರೆಂದರೆ ಪುರಂದರದಾಸರಯ್ಯಾ ವಾಸುದೇವ ಕೃಷ್ಣನ ಸೂಸಿ ಪೂಜಿಸುವ ಎಂದು ಶ್ಲಾಘಿಸಿದ್ದಾರೆ ಎಂದ ಮೇಲೆ ಅವರು ದಾಸಶ್ರೇಷ್ಠರೆಂಬುದರಲ್ಲಿ ಎರಡು ಮಾತಿಲ್ಲ.

ಪುರಂದರದಾಸರು ಅನ್ನಮಾಚಾರ್ಯರಿಗಿಂತ ಬಹಳ ಚಿಕ್ಕವರು. ಆಗಾಗ ತಿರುಪತಿ ತಿಮ್ಮಪ್ಪನ ಬಳಿಗೆ ಹೋಗುವುದು . ಪುರಂದರದಾಸರ ವಾಡಿಕೆ. ಅನ್ನಮಾಚಾರ್ಯರ ಮಗ ಪೆದ್ದ ತಿರುಮಲಾಚಾರ್ಯನ ಮಗ ಚಿನ್ನ ತಿರುವೇಂಗಡನಾಥ ಅಥವಾ ಚಿನ್ನಯ್ಯ ಬರೆದ 'ಅನ್ನಮಾಚಾರ್ಯ ಚರಿತಮು' ಎಂಬ ಪುಸ್ತಕದಲ್ಲಿ ಪುರಂದರದಾಸರು ಅನ್ನಮಾಚಾರ್ಯರನ್ನು ಭೇಟಿಯಾದ ಉಲ್ಲೇಖವಿದೆ. ಹಾಗೆ ಒಮ್ಮೆ ಬಂದಾಗ ಹಣ್ಣು ಹಣ್ಣು ಮುದುಕರಾಗಿದ್ದ, ಆ ವೇಳೆಗೆ ಸುಮಾರು 32,000 ಕೀರ್ತನೆಗಳನ್ನು ರಚಿಸಿದ್ದ ಅನ್ನಮಾಚಾರ್ಯರನ್ನು ಕುರಿತು ಕೇಳಿದ ಪುರಂದರದಾಸರು ಅವರನ್ನು ಕಂಡರಂತೆ, ಆ ವೃದ್ಧಾಪ್ಯದಲ್ಲೂ ಅನ್ನಮಾಚಾರ್ಯರು ಕೈಯಲ್ಲಿ ತಂಬೂರಿ ಹಿಡಿದು ಕಾಲಿಗೆ ಗೆಜ್ಜೆಕಟ್ಟಿ ಶ್ರೀವೇಂಕಟೇಶ್ವರ ಸ್ವಾಮಿಯ ಮುಂದೆ ಕೀರ್ತನೆ ಹಾಡುತ್ತಾ



ನರ್ತಿಸುತ್ತಿದ್ದದನ್ನು ಕಂಡು "ಸಾಕ್ಷಾತ್ ವೆಂಕಟೇಶ್ವರನನ್ನೇ ಕಂಡಂತಾಯಿತು ಎಂದು ಪುರಂದರದಾಸರು ಭಾವಪರವಶವಾಗಿ ನುಡಿದರಂತೆ., ತದನಂತರ ಅನ್ನಮಾಚಾರ್ಯರು ಪುರಂದರದಾಸರನ್ನು ಕನ್ನಡದ ದೇವರ ನಾಮಗಳನ್ನು ಹಾಡಲು ಕೇಳಿದರಂತೆ. ಪುರಂದರದಾಸರು ಗೆಜ್ಜೆ ಕಟ್ಟಿದ ಕಾಲುಗಳನ್ನು ತಾಳಕ್ಕೆ ತಕ್ಕಂತೆ ಕುಣಿಸುತ್ತಾ ತಾವು ರಚಿಸಿದ ಪದಗಳನ್ನು ಹಾಡಿದಾಗ ಶ್ರೀ ವೆಂಕಟೇಶ್ವರನ ಮಹಾನ್ ಭಕ್ತಶಿರೋ ಮಣಿ ತೊಂಬತ್ತೈದು ವರ್ಷದ ಅನ್ನಮಾಚಾರ್ಯರು ಧಾರಾಕಾರವಾಗಿ ಆನಂದ ಭಾಷ್ಪಗಳನ್ನು ಸುರಿಸುತ್ತಾ 'ಎಂಥ ದಿವ್ಯಗಾನ! ಪಾಂಡುರಂಗ ವಿಠಲನೇ ನನ್ನೆದುರು ನಿಂತಂತಿದೆ ಎಂದು ಉದ್ಗರಿಸಿದರಂತೆ.

ಅನ್ನಮಾಚಾರ್ಯರಿಗೆ ಇನ್ನೊಬ್ಬ ಸಮಕಾಲೀನರು ಶ್ರೀಪಾದರಾಜರು. ಅವರು ಸಾಳುವ ನರಸಿಂಹ ಮಹಾ ಮಂಡಲೇಶ್ವರನ ರಾಜಗುರುಗಳಾಗಿದ್ದರು. ಅವರು ಸಾಳುವ ನರಸಿಂಹನ ರಾಜಧಾನಿಯಾಗಿದ್ದ ಚಂದ್ರಗಿರಿಗೆ ಭೇಟಿ ಕೊಡುತ್ತಿದ್ದ ಸರ್ವೇ ಸಾಮಾನ್ಯ. ಆಗ ತಿರುಪತಿ ಬೆಟ್ಟಕ್ಕೂ ಹೋಗುತ್ತಿದ್ದುದೂ ಉಂಟು. ಅವರೂ ಅನ್ನಮಾಚಾರ್ಯರನ್ನು ಬೇಟಿ ಮಾಡಿ ಭಕ್ತಿ ಕೀರ್ತನೆ ಹಾಗೂ ದೇವರ ನಾಮಗಳನ್ನು ಕುರಿತು ವಿಚಾರ ವಿನಿಮಯ ಮಾಡಿಕೊಳ್ಳುತ್ತಿದ್ದುದೂ ಉಂಟೂ ಎನ್ನಲಾಗಿದೆ.

# ಜ್ಯೋತಿಷ್ಯ ಶಾಸ್ತ್ರ ಒಂದು ವಿಜ್ಞಾನ



– ಡಾ॥ ರಾಮಚಂದ್ರ ದಾಸ್ ಸಿ.ಜೆ.
– 94833 84584

ಜಗತ್ತಿನ ಸೃಷ್ಟಿಯನ್ನು ಅರಿಯುವುದು ಸಾಮಾನ್ಯರಿಗೆ ಎಟುಕದ ವಿಷಯವಾಗಿದ್ದು, ಇದು ವಿಸ್ಮಯಕಾರಿ ಹಾಗೂ ರಹಸ್ಯಪ್ರದವಾಗಿದೆ. ಆದ್ದರಿಂದ ಋಷಿಗಳು ಸೃಷ್ಟಿಯ ರಹಸ್ಯವನ್ನು ಪ್ರಪಂಚ "ಶಬ್ದದಲ್ಲಿ ಅಡಗಿಸಿ ಇಟ್ಟಿದ್ದಾರೆ. ಪ್ರ = ಪ + ರ. 'ಪ' ಕಾರವು ಪ್ರಕೃತಿ ಸೂಚಕವಾಗಿಯೂ 'ರ' ಕಾರವು ಶಕ್ತಿ ಸೂಚಕವಾಗಿಯೂ, ಮತ್ತು "ಪಂಚ" ಶಬ್ದದಲ್ಲಿ ಪಂಚಭೂತಗಳ ಚಿಂತನೆಯನ್ನು ಅಡಗಿಸಿಟ್ಟಿದ್ದಾರೆ. ಈ ಪಂಚಭೂತಗಳು ಸರ್ವಸೃಷ್ಟಿಗೆ ಕಾರಣೀಭೂತವಾಗಿವೆ. ಪರಮಾತ್ಮನ ಸೃಷ್ಟಿಯ ಸಂಕಲ್ಪ ಮಾತ್ರದಿಂದ, ಸೃಷ್ಟಿಗೆ, ಅನುಕೂಲವಾಗುವಂತಹ ಸ್ಥಳದ ಪೂರೈಕೆಗೆ "ಆಕಾಶ ತತ್ವವು ಸೃಷ್ಟಿಯಾಗಿದ್ದು, ಈ ವಿಷಯವು ತೈತ್ತರೀಯ ಉಪನಿಷತ್‌ನಲ್ಲಿ ವರ್ಣಿತವಾಗಿದೆ. ನಂತರದಲ್ಲಿ "...ಆಕಾಶಾದ್ವಾಯುಃ, ವಾಯೋರಗ್ನಿಃ ಆಗ್ನೇರಾಪಃ ಅದ್ಭ್ಯಃಪೃಥಿವೀ.."ಅಂದರೆ ಆಕಾಶ ತತ್ವದಿಂದ ವಾಯುತತ್ವ, ವಾಯುತತ್ವದಿಂದ ಅಗ್ನಿತತ್ವ, ಅಗ್ನಿತತ್ವದಿಂದ ಜಲತತ್ವ, ಜಲತತ್ವದಿಂದ ಭೂತತ್ವ ಉತ್ಪತ್ತಿಯಾಯಿತು. ಈ ಪಂಚ ತತ್ವಗಳ ಸಂಯೋಜನೆಯಿಂದ ಮನುಷ್ಯನ ಶರೀರ ಸೃಷ್ಟಿಯಾಗಿದೆ ತತ್ವಗಳ ಆಧಾರದ ಮೇಲೆ ನಕ್ಷತ್ರಗಳು, ರಾಶಿಗಳು, ಗ್ರಹಗಳು ಇತ್ಯಾದಿಗಳ ಸೃಷ್ಟಿಯೂ ಆಯಿತು.ಇವುಗಳನ್ನು ಸೌರಮಂಡಲದ ಭಾಗವಾಗಿ ಪರಿಗಣಿಸಲಾಗಿದೆ.

ಜೀವಿಗಳ ದಿನನಿತ್ಯದ ಅವಶ್ಯಕತೆಗಳನ್ನು ದಿಕ್ಕು, ದೇಶ, ಕಾಲ, ಆಹಾರ, ಔಷಧಿ, ಆದರ್ಶ, ಅಧ್ಯಾತ್ಮಿಕಗಳನ್ನು ಬೆಳಕಿನ ಸಹಾಯದಿಂದ ಮಾತ್ರ ನೋಡಲು ಸಾಧ್ಯ. ಈ ಬೆಳಕನ್ನು ಆಧರಿಸಿದ ವಿಜ್ಞಾನದ (ವಿಶೇಷ ಜ್ಞಾನ) ಅಧ್ಯಯನವೇ "ಜ್ಯೋತಿಷ್ಯ ಶಾಸ್ತ್ರ" ಆದ್ದರಿಂದ ಎಲ್ಲ ವಿಜ್ಞಾನಗಳು ಜ್ಯೋತಿಷ್ಯ ಶಾಸ್ತ್ರಕ್ಕೆ ಸಂಬಂಧಪಟ್ಟದ್ದಾಗಿವೆ. ಇದು ಒಂದು ವಿಶಿಷ್ಟವಾದಂತಹ ಅಧ್ಯಯನ ಶಾಸ್ತ್ರ, ಈ ಶಾಸ್ತ್ರದ ಅಧ್ಯಯನವು ಕಲಿಕೆಯಲ್ಲಿ ವಿಶೇಷವಾದ ಜ್ಞಾನ ಪೂರ್ವಕ ಅಭಿರುಚಿಯನ್ನು ಹುಟ್ಟಿಸುವುದರಿಂದಲೇ ಪೂರ್ವಿಕರು ಇದನ್ನು "ವಿಜ್ಞಾನಗಳ ರಾಜ" ಎಂಬುದಾಗಿ ಹೆಸರಿಸಿದ್ದಾರೆ. ಭೂಮಿಯ ಜೊತೆಗೆ ಸಂಬಂಧವನ್ನು ಹೊಂದಿರುವ ಸೂರ್ಯ, ಚಂದ್ರ,ಗ್ರಹ ನಕ್ಷತ್ರ, ಧೂಮಕೇತು ಇತ್ಯಾದಿಗಳ ಅಧ್ಯಯನ ಆಧರಿಸಿರುವ ಶಾಸ್ತ್ರ, ಜ್ಯೋತಿಷ್ಯ ಶಾಸ್ತ್ರ. ಇದು ಮಂತ್ರ ತಂತ್ರ ಶಾಸ್ತ್ರವಲ್ಲ. ಮನುಷ್ಯನು ಹುಟ್ಟಿದ ಸಮಯವನ್ನಾಧರಿಸಿ, ಆತನ ಹಿಂದಿನ ಜನ್ಮದ ಕರ್ಮಗಳು. ಜನ್ಮಸಮಯದಲ್ಲಿರುವ ಗ್ರಹಗಳ ಸ್ಥಿತಿಯನ್ನು ಆಧರಿಸಿ ಅಭ್ಯಸಿಸಿ ಭವಿಷ್ಯವನ್ನು ನಿಖರವಾಗಿ ಹೇಳಲಾಗುತ್ತದೆಯೇ ಹೊರತು ಊಹೆಯಿಂದಲ್ಲ.

ಜ್ಯೋತಿಷ್ಯ ಶಾಸ್ತ್ರವು ವೇದಗಳ ಭಾಗವಾಗಿರುವುದರಿಂದ ಇದನ್ನು ವೇದಾಂಗವೆಂದು ಹೆಸರಿಸಲಾಗಿದೆ. ಬೃಹತ್ ಸಂಹಿತದಲ್ಲಿ

" ಪ್ರಥಮ ಮುನಿ ಕಥಿತಮವಿತಥ ಮವಲೋಕ್ಯ ಗ್ರಂಥ ವಿಸ್ತರಸ್ಯಾರ್ಥಮ್!
ನಾತಿಲಘು ವಿಪುಲ ರಚನಾಭಿರುದ್ಯತಹ ಸ್ಪಷ್ಟಮಭಿಧಾತಮ್

ಜ್ಯೋತಿಷ್ಯ ಶಾಸ್ತ್ರವು ದೈವೀ ಉಗಮ ಹೊಂದಿದೆಯೇ ಹೊರತು ಇದರ ಸೃಷ್ಟಿಯಲ್ಲಿ ಮನುಷ್ಯನ ಪಾತ್ರವಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಹೀಗೆ ಸೃಷ್ಟಿಸಲ್ಪಟ್ಟ ಜ್ಯೋತಿಷ್ಯ ಶಾಸ್ತ್ರದ ನಿಯಮಗಳನ್ನು ಆಯಾಕಾಲದ ವ್ಯಕ್ತಿಗಳು, ದೇಶ ಮತ್ತು ಕಾಲವನ್ನಾಧರಿಸಿ ಹೇಳುವುದು ವಾಡಿಕೆಯಾಗಿದೆ. ಈ ಶಾಸ್ತ್ರವು ಲಕ್ಷಾಂತರ ವರ್ಷಗಳಿಂದಲೂ ಅಸ್ತಿತ್ವದಲ್ಲಿತ್ತೆಂದು ಪುರಾಣಗಳಲ್ಲಿ ಉಲ್ಲೇಖವಿದೆ. ಜ್ಯೋತಿಷ್ಯ ಶಾಸ್ತ್ರದಲ್ಲಿ ಮಾಡಲಾಗುವ ಲೆಕ್ಕಾಚಾರಗಳು ವೈಜ್ಞಾನಿಕ ಯೋಚನಾ ಕ್ರಮಗಳನ್ನು ಮತ್ತು ಸಾಬೀತಾಗಿರುವ ನಿಯಮಗಳನ್ನು ಆಧರಿಸಿದ್ದು. ಸೌರ ಮಂಡಲದಲ್ಲಿ ಉಂಟಾಗುವ ಗ್ರಹಣ ಇತ್ಯಾದಿಗಳ ನಿಖರವಾದ ಕಾಲಮಾನದ ಲೆಕ್ಕಾಚಾರವೇ ಸಾಕ್ಷಿಯಾಗಿದೆ.

ಜ್ಯೋತಿಷ್ಯ ಶಾಸ್ತ್ರದಲ್ಲಿ ಗ್ರಹ -ಚಾರದ ಲೆಕ್ಕಾಚಾರವನ್ನು ಪಂಚಾಂಗದ ಆಧಾರದನ್ವಯ ಮಾಡಲಾಗುತ್ತದೆ. ತಿಥಿ, ವಾರ ನಕ್ಷತ್ರ,ಯೋಗ ಮತ್ತು ಕರಣ ಇವುಗಳು ಸೂಕ್ಷ್ಮ ರೂಪದ್ದಾಗಿದ್ದು. ಸಂವತ್ಸರ, ಆಯನ, ಋತು, ಮಾಸ ಮತ್ತು ಪಕ್ಷಗಳೆಂಬುದು ಸ್ಥೂಲ ರೂಪದ್ದಾಗಿರುತ್ತದೆ. ಇವೆಲ್ಲವೂ ಸೇರಿ ಪಂಚಾಂಗವೆಂದು ಪ್ರಸಿದ್ಧಿಯಾಗಿದೆ. ಇವುಗಳ ಸ್ಮರಣೆಯಿಂದ ದೊರೆಯುವ ಫಲದ ಬಗ್ಗೆ ಅರಿವಾದಾಗ ಪಂಚಾಂಗದ ಶ್ರೇಷ್ಠತೆ ಏನು ಎಂಬುದು ಈ ಶ್ಲೋಕದ ಮೂಲಕ ತಿಳಿಯಬಹುದು.

ತಿಥೇತ್ಚಶ್ರಿಯಮಾಪ್ನೋತಿ । ವಾರಾದಾಯುಷ್ಯ ವರ್ಧನಂ ।
ನಕ್ಷತ್ರಾದ್ಧರತೇ ಪಾಪಂ । ಯೋಗಾದ್ರೋಗ ನಿವಾರಣಂ
ಕರಣಾತ್ಕಾರ್ಯ ಸಿದ್ಧ್ಯರ್ಥಂ। ಪಂಚಾಂಗ ಫಲಮುತ್ತಮಂ ॥

ಪಂಚಾಂಗದಲ್ಲಿನ ಸೂಕ್ಷ್ಮ ರೂಪಗಳಾದ ತಿಥಿಯಿಂದ ಧನಲಾಭವನ್ನು ವಾರದಿಂದ ಆಯುಷ್ಯ ವೃದ್ಧಿಯನ್ನು, ನಕ್ಷತ್ರಗಳಿಂದ ಪಾಪಗಳ ಹರಣವನ್ನು, ಯೋಗಗಳಿಂದ ರೋಗ ನಿವಾರಣೆಯನ್ನು ಮತ್ತು ಕರಣಗಳಿಂದ ಕಾರ್ಯಸಿದ್ಧಿಯನ್ನು ಪಡೆಯಬಹುದು.ಇವುಗಳ ಆಧಾರದ ಮೇಲೆ ಮೂಹೂರ್ತ ಜ್ಯೋತಿಷ್ಯ ನಿಂತಿರುವುದು. ಜಾತಕದಲ್ಲಿ 1) ಶಕ್ತಿರೂಪ ಮತ್ತು 2) ವಸ್ತುರೂಪಗಳ ಮೂಲಕ ತಂದೆ ಮತ್ತು ತಾಯಿಯ ಅನುವಂಶಿಕ ಗುಣ ದೋಷಗಳನ್ನು ಸೂಚಿಸುತ್ತವೆ. ಇವುಗಳನ್ನು ವಿವರವಾಗಿ ತಿಳಿಯಲು ಜ್ಯೋತಿಷ್ಯದಲ್ಲಿ ಮೂರು ಅಂಶಗಳನ್ನು ಗಮನಿಸಬೇಕು.

ಅವುಗಳು 1. ರಾಶಿ 2. ಗ್ರಹ 3. ನಕ್ಷತ್ರ.ಇವುಗಳನ್ನು ಪಂಚಭೂತಗಳಲ್ಲಿ, ತತ್ವ, ಅಂಗ ಭೇದ, ಗುಣ, ಸ್ವಭಾವಗಳ ಆಧಾರದ ಮೇಲೆ ಮಹರ್ಷಿಗಳು ಹಂಚಿಕೆ ಮಾಡಿದ್ದಾರೆ. ಈ ಅಂಶಗಳು ದೋಷ ನಿರ್ಣಯದಲ್ಲಿ ಪ್ರಧಾನ ಪಾತ್ರವಹಿಸುತ್ತವೆ. ಈ ದೋಷಗಳು, 1. ಆದಿ ಭೌತಿಕ, 2. ಆದಿದೈವಿಕ 3. ಅಧ್ಯಾತ್ಮಿಕ ಎಂಬ ಮೂರು ತ್ರಿತಾಪಗಳ ಮೂಲವಾಗಿರುತ್ತದೆ. ಭಚಕ್ರ (ಕುಂಡಲಿ) ದಲ್ಲಿನ ಮೇಷಾದಿ ಹನ್ನೆರಡು ರಾಶಿಗಳು ಕಾಲಪುರುಷನ ಪ್ರಧಾನ ಅಂಗಗಳಾಗಿದೆ ,ಹಾಗೂ ಗ್ರಹಗಳು ಈ ಅಂಗ ಮತ್ತು ಪ್ರತ್ಯಂಗಗಳಿಗೆ ಬಲವನ್ನು ನಕ್ಷತ್ರಗಳ ಮೂಲಕ ನೀಡುತ್ತದೆ. ಪಂಚಾಂಗದಲ್ಲಿ ಪ್ರಧಾನವಾಗಿ ಒಟ್ಟು ಹತ್ತು ಕಾಲ ವ್ಯವಸ್ಥೆಗಳನ್ನು ವಿಂಗಡಿಸಿ ನಿರ್ಧರಿಸಲಾಗಿದೆ.

1. ಸಂವತ್ಸರಗಳು : ಪ್ರಭವಾದಿ ಅಕ್ಷಯನಾಮ ಪರ್ಯಂತ ಒಟ್ಟು 60 ಸಂವತ್ಸರಗಳಿದ್ದು 12 ರಾಶಿಗಳಿಗೆ ತಲಾ 5 ಸಂವತ್ಸರಗಳಂತೆ ಹಂಚಲಾಗಿದೆ.

2. ಆಯನಗಳು : ಪ್ರತಿ ಸಂವತ್ಸರಕ್ಕೆ ಎರಡು ಆಯನಗಳಿದ್ದು 1) ಉತ್ತರಾಯಣ 2) ದಕ್ಷಿಣಾಯನ, ಇವುಗಳು ಕಣ್ಣುಗಳಿದ್ದಂತೆ ಇದ್ದು, ಉತ್ತರಾಯಣವು ಶಕ್ತಿ ಸೂಚಕ, ಸೂರ್ಯ ಅಧಿಪತಿ, ದಕ್ಷಿಣಾಯವು ವಸ್ತು ಸೂಚಕ ಕುಜಾದಿ ಪಂಚಗ್ರಹರು ಅಧಿಪತಿಗಳು.

3) ಋತುಗಳು : ಋತುಗಳು ನಿಸರ್ಗದಲ್ಲಿ ಬದಲಾವಣೆಗಳನ್ನು ಸೂಚಿಸುತ್ತವೆ. ವಸಂತಾದಿ ಶಿಶಿರ ಋತು ಪರ್ಯಂತ ಒಟ್ಟು ಆರು ಋತುಗಳಿದ್ದು ಉತ್ತರಾಯಣ ಮತ್ತು ದಕ್ಷಿಣಾಯಣಕ್ಕೆ ತಲಾ 3 ಋತುಗಳಂತೆ ವಿಂಗಡಿಸಲಾಗಿದೆ.

4) ಮಾಸಗಳು: ಚೈತ್ರಾದಿ ಫಾಲ್ಗುಣ ಪರ್ಯಂತ ಚಂದ್ರನ ಗತಿಯಾಧಾರಿತ 12 ಚಾಂದ್ರಮಾನ ಮಾಸಗಳು, ಹಾಗೆಯೇ ಸೂರ್ಯನ ಗತಿಯಾಧಾರಿತ ಮೇಷಾದಿ ಮೀನ ಪರ್ಯಂತ 12 ಸೌರಮಾನ ಮಾಸಗಳಾಗಿ ವಿಂಗಡಿಸಿದೆ. ಎರಡು ಮಾಸಗಳಿಗೊಮ್ಮೆ ಋತು ಬದಲಾಗುತ್ತದೆ.

5) ಪಕ್ಷಗಳು : ಪ್ರತಿ ಮಾಸದಲ್ಲಿ ಶುಕ್ಲಪಕ್ಷ (ಶುದ್ಧ) ವು ಶಕ್ತಿ ಸ್ವರೂಪವಾಗಿದ್ದು ವೃದ್ಧಿ ಚಂದ್ರನನ್ನು ಹೊಂದಿದ್ದರೆ, ಕೃಷ್ಣ ಪಕ್ಷವು (ಬಹುಳ) ಕ್ಷೀಣ ಚಂದ್ರನನ್ನು ಹೊಂದಿರುತ್ತದೆ.

6) ತಿಥಿ: (ತಿಥೇಶ್ಚ ಶ್ರಿಯ ಮಾಪ್ನೋತಿ) ಪ್ರತಿಯೊಂದು ಪಕ್ಷದಲ್ಲಿಯೂ ಪ್ರತಿಪದಾದಿ 15 ತಿಥಿಗಳಿದ್ದು ಶುಕ್ಲಪಕ್ಷದ ಕೊನೆಯ ತಿಥಿ ಹುಣ್ಣಿಮೆಯೆಂದೂ ಕೃಷ್ಣಪಕ್ಷದ ಕೊನೆಯ ತಿಥಿ ಅಮಾವಾಸ್ಯೆಯೆಂದೂ ಗುರುತಿಸಲಾಗಿದೆ. ತಿಥಿಗಳಲ್ಲಿ ನಂದ, ಭದ್ರ, ಪೂರ್ಣ, ರಿಕ್ತ ಎಂಬ ನಾಲ್ಕು ಭಾಗಗಳಿವೆ.

7) ವಾರ : (ವಾರಾದಾಯುಷ್ಯ ವರ್ಧನಂ)

ಭಾನುವಾರಾದಿ ಶನಿವಾರದವರೆಗಿನ ಸಪ್ತವಾರಗಳಿಗೆ ಗ್ರಹಗಳೇ ಅಧಿಪತಿಗಳಾಗಿರುವುದರಿಂದ ಅದೇ ಹೆಸರೇ ರೂಢಿಯಲ್ಲಿದೆ.

8) ನಕ್ಷತ್ರ : (ನಕ್ಷತ್ರಾದ್ಧರತೇ ಪಾಪಂ): ನಕ್ಷತ್ರ ಎಂದರೆ ಸ್ಥಿತವಾಗಿರುವುದು, ಸ್ಥಾನಬದಲಾಗದ, ಚಲಿಸದ ಅಸ್ತಿತ್ವ, (ಈ ನಕ್ಷತ್ರಗಳಿಗೆ ಉಪನಕ್ಷತ್ರಗಳಿರುತ್ತವೆ.) ಹೀಗೆ ಸ್ಥಿರವಾಗಿ ನೆಲೆಸಿರುವುದರಿಂದ ವಿಶ್ವವನ್ನು ಸುತ್ತಲೂ ಬಂಧಿಸಿ ಹಿಡಿದುಕೊಂಡಿರುತ್ತವೆ. ಗ್ರಹಗಳು ಮುಂದಕ್ಕೆ ಚಲಿಸಿ ಹೋಗಲು ಇವುಗಳು ತಮ್ಮ ಶಕ್ತಿಯಿಂದ ಮುಂದಕ್ಕೆ ತಳ್ಳಿಕೊಡಲು ಸಹಾಯ ಮಾಡುವುವು.ನಕ್ಷತ್ರಗಳು ಫಲದಾಯಕರೂ ಆಗಿದ್ದಾರೆ. ಅಶ್ವಿನಿಯಿಂದ ರೇವತಿವರೆಗೆ 27 ನಕ್ಷತ್ರಗಳಿವೆ.

9) ಯೋಗ: (ಯೋಗಾದ್ರೋಗ ನಿವಾರಣಂ) : ಯೋಗಗಳಲ್ಲಿ 2 ವಿಧ 1) ಜಾತಕವನ್ನು ಅವಲಂಭಿಸಿದ್ದು, 2) ಸೂರ್ಯ ಚಂದ್ರರ ಗತಿಯನ್ನು ಅವಲಂಭಿಸಿದ್ದು. 27 ನಕ್ಷತ್ರಗಳಲ್ಲಿ 27 ಯೋಗಗಳು ಉತ್ಪನ್ನವಾಗುತ್ತವೆ. ಈ ಯೋಗಗಳಿಗೆ ನವಗ್ರಹರು ನಾಯಕರಾಗುತ್ತಾರೆ. ವಿಷ್ಕಂಭಕ ಯೋಗದಿಂದ ವೈಧೃತಿ ಯೋಗದವರೆಗೆ 27 ಯೋಗಗಳಿವೆ.

10) ಕರಣ : (ಕರಣಾತ್ಕಾರ್ಯ ಸಿದ್ಧಿ) ತಿಥಿಯ ಅರ್ಧ ಭಾಗವು ಕರಣವೆನಿಸಿಕೊಳ್ಳುವುದು. ಇದು ಕಾಲಗಳಲ್ಲಿ ಸೂಕ್ಷ್ಮವಾದುದು. ಇದರಿಂದ ಕಾರ್ಯಸಿದ್ಧಿಗೆ ಅನುಕೂಲವಾಗುವುದು. ಬವಕರಣದಿಂದಾರಂಭಿಸಿ ಕಿಂಸ್ತುಘ್ನ ಕರಣದವರೆಗೆ ಒಟ್ಟು 11 ಕರಣಗಳಿವೆ.

ಭಾರತ ದೇಶದಲ್ಲಿ ಮುಖ್ಯವಾಗಿ ಮೂರು ಜ್ಯೋತಿಷ್ಯ ಶಾಸ್ತ್ರದ ಅವಲೋಕನ ಮತ್ತು ಚಿಂತನಾ ಕ್ರಮಗಳಿದ್ದು, ಅವುಗಳು 1) ಪರಾಶರ, 2) ಜೈಮಿನಿ ಮತ್ತು 3) ನಾಡಿ ಜ್ಯೋತಿಷ್ಯ, ಪರಾಶರ ಕ್ರಮವು ಹೆಚ್ಚಾಗಿ ಉಪಯೋಗಿಸಲ್ಪಡುವ ಕ್ರಮವಾಗಿದೆ.

ಜೈಮಿನಿ ಕ್ರಮವು ಅರ್ಥೈಸಲು ಸ್ವಲ್ಪ ಕಷ್ಟವಾಗಿದ್ದು ಕೆಲವು ಆಯ್ದಜ್ಯೋತಿಷ್ಯರು ಮಾತ್ರ ಅನುಸರಿಸುತ್ತಾರೆ. ನಾಡೀ ಜ್ಯೋತಿಷ್ಯ ವ್ಯವಸ್ಥೆಯು ಅದರದ್ದೇ ಆದ ಮಹತ್ವ ಹೊಂದಿದ್ದು, ಮನುಷ್ಯನ ಪ್ರತಿಕ್ಷಣದ ಆಗು ಹೋಗುಗಳನ್ನು ನಿರ್ಧಿಷ್ಟವಾಗಿ ಹೇಳಬಹುದಾಗಿರುವುದರಿಂದ ಇದನ್ನು ಪ್ರಪಂಚದ ಅದ್ಭುತಗಳಲ್ಲೊಂದು ಎನ್ನಬಹುದಾಗಿದೆ. ಸತ್ಯಚಾರ್ಯ ಋಷಿವರ್ಯರು ಈ ಬಗ್ಗೆ ಬರೆದಿರುವ ಧೃವನಾಡೀ ಗ್ರಂಥವು ವಿಶಿಷ್ಟ ಸ್ಥಾನವನ್ನು ಪಡೆದಿದೆ.

ಸಾಮಾನ್ಯವಾಗಿ ಸಾಂಪ್ರದಾಯಿಕ ಜ್ಯೋತಿಷಿಗಳು ಗ್ರಹಗಳಿಗೆ ಮತ್ತು ರಾಶಿಚಕ್ರದಲ್ಲಿನ ಅವುಗಳ ಸ್ಥಾನಗಳಿಗೆ ಮಹತ್ವವನ್ನು ಕೊಡುತ್ತಾರೆ. ನಕ್ಷತ್ರ ಸಿದ್ಧಾಂತದ ಪ್ರಕಾರ ಗ್ರಹಗಳ ಸ್ಥಿತಿಗಿಂತ ಅವುಗಳ ನಕ್ಷತ್ರಾಧಿಪತಿಯ ಸ್ಥಾನವನ್ನಾಧರಿಸಿ ಭವಿಷ್ಯ ನಿರ್ಧರಿಸಲಾಗುತ್ತದೆ. ಈ ವಿಷಯಗಳ ಬಗ್ಗೆ ಬೃಹಜ್ಜಾತಕ, ಜಾತಕಮಾರ್ತಂಡ, ಕಾಳಿದಾಸನ ಕಾಲಾಮೃತ ಮುಂತಾದ ಗ್ರಂಥಗಳು ಬೆಳಕು ಚೆಲ್ಲುತ್ತವೆ. ಕುಂಡಲಿಗಳಲ್ಲಿ, ರಾಶಿ ಕುಂಡಲಿಯಲ್ಲಿ ಅಡಕವಾಗದೆ. ಇರುವ ವಿಷಯಗಳೇ ಇಲ್ಲಿ, ಕಾರಕತ್ವದ ಮಹಾಸಾಗರವೆ ಇದೆ. ರಾಶಿಗಳಲ್ಲಿ ಸಾತ್ವಿಕ, ರಾಜಸ ಮತ್ತು ತಾಮಸಗಳೆಂಬ ಗುಂಪುಇದೆ.ಹಾಗೆಯೇ ಚರ, ಸ್ಥಿರ, ದ್ವಿಸ್ವಭಾವವೆಂದೂ ವಿಂಗಡಿಸಿದೆ.ಶೀರ್ಷೋದಯ ರಾಶಿಗಳು ಹಗಲಿನಲ್ಲಿ ಜನಿಸಿದವರಿಗೆ ಬಲವಾಗಿರುತ್ತದೆ ಹಾಗೆಯೇ ಪೃಷ್ಟೋದಯ ರಾಶಿಗಳು ರಾತ್ರಿಗಳು ಬಲವಾಗಿರುತ್ತವೆ. ಒಂದು ರಾಶಿಗೆ 30 ಡಿಗ್ರಿ ಇರುತ್ತದೆ. ಹಾಗೆಯೇ ನಕ್ಷತ್ರಗಳ ಒಂಬತ್ತು ಪಾದಗಳು ಇರುತ್ತದೆ. ಉದಾ ಮೇಷರಾಶಿಗೆ ಅಶ್ವಿನಿ- 4 ಪಾದ, ಭರಣಿ - 4 ಪಾದ, ಕೃತ್ತಿಕೆ - 1 ಪಾದ ಇರುತ್ತದೆ. ಹೀಗೆಯೇ 12 ರಾಶಿಗೂ ಹಂಚಿಕೆಯಾಗಿರುತ್ತದೆ.

ಜನ್ಮನಕ್ಷತ್ರವನ್ನನುಸರಿಸಿ ಒಂದು ಸ್ಥೂಲ ಕಾಲವನ್ನು ಮೊದಲು ನಿರ್ಣಯಿಸಿ, ನಂತರ ಅದನ್ನು ಸೂಕ್ಷ್ಮದವರೆಗೂ ತೆಗೆದುಕೊಂಡು ಹೋಗಿ ಘಟನೆಯು ನಡೆಯುವ ಕಾಲವನ್ನು ನಿರ್ಧರಿಸಲಾಗುತ್ತದೆ. ಈ ಕಾಲದಲ್ಲಿ 1) ಭೂತಕಾಲ, 2) ವರ್ತಮಾನಕಾಲ 3) ಭವಿಷ್ಯ ಸೂಚಕ ಕಾಲವಿರುತ್ತದೆ.ಜನನ ಕಾಲದ ಆಧಾರದ ಮೇಲೆ ದಶಾ, ಭುಕ್ತಿಗಳನ್ನು ನಿರ್ಣಯಿಸಲಾಗುವುದು ದಶಾ, ಭುಕ್ತಿ ಇವುಗಳು ಸ್ಥೂಲರೂಪವಾದರೆ, ಗೋಚಾರವು ಸೂಕ್ಷ್ಮರೂಪದ್ದಾಗಿರುತ್ತದೆ. ಕಾಲಕ್ಕನುಸಾರವಾಗಿ ಹಲವಾರು ಬಗೆಯ ದಶಾಗಳನ್ನು ಅಂದರೆ ವಿಂಶೋತ್ತರಿ, ಅಷ್ಟೋತ್ತರಿ, ದ್ವಾದಶೋತ್ತರಿ, ಕಾಲಚಕ್ರದಶಾ, ಚರದಶಾ, ಸ್ಥಿರದಶಾ, ಮಂಡೂಕದಶಾ ಇತ್ಯಾದಿಗಳನ್ನು ಲೆಕ್ಕಾಚಾರ ಹಾಕಲಾಗುತ್ತದೆ. ಇದನ್ನು "ಉಡುದಶಾ ಭುಕ್ತಿ"ಎಂದೂ ಕರೆಯಲಾಗುವುದು ಒಂದೊಂದು ಗ್ರಹಕ್ಕೂ ವಿಂಶೋತ್ತರಿಯ ಪ್ರಕಾರ ದಶಾಭುಕ್ತಿಗಳು ನಡೆಯುತ್ತವೆ. ಉದಾ: ರವಿಗೆ 6 ವರ್ಷ, ಚಂದ್ರನಿಗೆ 10 ವರ್ಷ ಇತ್ಯಾದಿ.

ವಿಂಶೋತ್ತರಿ ದಶೆಯಲ್ಲಿ 9 ಗ್ರಹಗಳಿರುವುದರಿಂದ ಪ್ರತಿಯೊಂದು ಗ್ರಹದ ದೆಶೆಯನ್ನು 9 ಭಾಗಗಳನ್ನಾಗಿ ಮಾಡಿ ಯಾವ ದೆಶೆ ನಡೆಯುತ್ತಿರುವುದೋ ಆ ಗ್ರಹದ ದೆಶೆಯನ್ನು 9 ಭಾಗ ಮಾಡಿ ಭುಕ್ತಿಯನ್ನಾಗಿಯೂ, ಆ ಭುಕ್ತಿಯನ್ನು 9 ಭಾಗ ಮಾಡಿ ಅಂತರವಾಗಿಯೂ, ಆ ಅಂತರವನ್ನು 9 ಭಾಗಮಾಡಿ ಸೂಕ್ಷ್ಮವನ್ನಾಗಿಯೂ (ಅಂತರಾಂತರ), ಸೂಕ್ಷ್ಮವನ್ನು 9 ಭಾಗಮಾಡಿ ಪ್ರಾಣವನ್ನಾಗಿಯೂ ವಿಭಾಗಿಸಿ ಭವಿಷ್ಯದ ದೋಷದ ಕಾಲವನ್ನು ನಿಖರವಾಗಿ ನಿರ್ಣಯಿಸಲಾಗುವುದು. ಅಂದರೆ ಒಟ್ಟಾಗಿ ಸ್ಥೂಲ ದೆಶೆಯನ್ನು 5 ಭಾಗಮಾಡಿ ಕಾಲವನ್ನು ತಿಳಿಯಲಾಗುತ್ತದೆ. ಇದರ ಆಧಾರದ ಮೇಲೆ ಭವಿಷ್ಯದ ಆಗು ಹೋಗುಗಳನ್ನು ನಿಖರವಾಗಿ ನಿರ್ಧರಿಸಲಾಗುತ್ತದೆ.

ಈ ಜ್ಯೋತಿಷ್ಯ ಶಾಸ್ತ್ರವು ವಿಸ್ಮಯಕಾರಿ ವಿಜ್ಞಾನವಾಗಿದೆ. ಒಂದು ಕುಂಡಲಿಯನ್ನಾಧರಿಸಿ ವ್ಯಕ್ತಿಯ ಕುಟುಂಬ ಬಂಧು ಒಳಗದವರ ಬಗ್ಗೆಯೂ ತಿಳಿದುಕೊಳ್ಳಬಹುದೆಂದರೆ ಇದು ಅತ್ಯಂತ ನಿಖರವಾದ ವಿಜ್ಞಾನವೆಂಬುದು ಸಿದ್ಧವಾಗುತ್ತದೆ. ಈ ಶಾಸ್ತ್ರವನ್ನು ಜಗತ್ತಿನ ಒಳಿತಿಗಾಗಿ ಮಾತ್ರ ಬಳಸಿದ್ದರೆ ಸುಭಿಕ್ಷೆ ನೆಲೆಸುತ್ತದೆ.

# ಪಾಲಿಸೋ ನರಸಿಂಹ

- ಶ್ರೀಮತಿ.ಸುಮಾಚಂದ್ರಶೇಖರ್
98800 60354



ಭಾರತೀಯ ಸಂಸ್ಕೃತಿಯ ಅಧ್ಯಯನದಲ್ಲಿ ಧರ್ಮ, ದರ್ಶನ, ಕಲೆ, ಸಾಹಿತ್ಯಗಳು ವಿಶಿಷ್ಟ ಸ್ಥಾನವನ್ನು ಅಲಂಕರಿಸಿದೆ. ಕರ್ನಾಟಕದ ಸಂತರು ತಮ್ಮ ಪ್ರಾಂತ ಭಾಷೆಯ ಮೂಲಕವಾಗಿ ದೈವಭಕ್ತಿ, ಶ್ರದ್ಧೆಗಳನ್ನು ಪ್ರಕಟಿಸಿರುತ್ತಾರೆ. ಹೃದಯ ಸ್ಪರ್ಶಿಯಾದ ರೀತಿಯಲ್ಲಿ ಸಂಗೀತ ಸವಿಯಿಂದ ತುಂಬಿದ ಕೀರ್ತನೆಗಳನ್ನು ಹಾಡಿ, ಜನರ ಆತ್ಮೋದ್ಧಾರಕ್ಕೆ ಪ್ರಬಲವಾದ ಅಸ್ತ್ರವನ್ನಾಗಿ ಸಂಕೀರ್ತನ ಪರಂಪರೆಯನ್ನು ಬೆಳೆಸಿದ್ದಾರೆ. ಸಂಸ್ಕೃತ ತಿಳಿಯದ ಸಾಮಾನ್ಯ ವರ್ಗದವರಿಗೆ, ಹುಲು ಮನುಜರಿಗೆ, ಸ್ತ್ರೀಯರಿಗೆ ಸಹ ಇವರ ದಿವ್ಯವಾಣಿಯಿಂದ ಆಧ್ಯಾತ್ಮಿಕ ಶ್ರೇಯಸ್ಸುಂಟಾಗಿದೆ. ಇದೆಲ್ಲಾ ಅಂಶಗಳು ದಾಸಕೂಟಕ್ಕೆ ದಖನ್ನಿನ ಧಾರ್ಮಿಕ ಭಕ್ತಪಂಥದ ಪ್ರಾಚೀನತಮ ಚಳವಳಿಯೆಂಬ ಪ್ರಶಸ್ತಿಯನ್ನು ದೊರಕಿಸಿಕೊಟ್ಟಿದೆ.

ದಾಸಸಾಹಿತ್ಯವು ಕೀರ್ತನೆ, ಸುಳಾದಿ, ಉಗಾಭೋಗ ಎಂಬ ಮುಖ್ಯವಾದ ಮೂರು ರೂಪಗಳಲ್ಲಿ ಹರಿದು ಬಂದಿದೆ. ಸಾಮಾನ್ಯವಾಗಿ ಕೊನೆಯ ನುಡಿಯು ಅದನ್ನು ರಚಿಸಿದ ಕೃತಿಕಾರರ ಅಂಕಿತವನ್ನು ಹೊಂದಿರುತ್ತದೆ.

ದಾಸಸಾಹಿತ್ಯ ಕನ್ನಡದ ತವನಿಧಿ. ಓದು ಬಾರದ ಕನ್ನಡ ಜನಕ್ಕೆ ಪರಿಪಾಠಗಳು ಗೊತ್ತಿಲ್ಲದಿರಬಹುದು ಆದರೆ ಶರಣರ ಸೂಳ್ನುಡಿಗಳು, ದಾಸರ ಕೀರ್ತನೆ,ಸುಳಾದಿಗಳು ಗೊತ್ತಿಲ್ಲದವರು ಅಪರೂಪ. 'ದಾಸ ವಾಙ್ಮಯ ಮಂದಿರಕ್ಕೆ ಭದ್ರವಾದ ಬುನಾದಿಯನ್ನು ಹಾಕಿದ ಶ್ರೀಶ್ರೀಪಾದರಾಜರು ಆಚಾರ್ಯ ಮಧ್ವರ ಸಾಕ್ಷಾತ್ ಶಿಷ್ಯರಾದ ಶ್ರೀಪದ್ಮನಾಭತೀರ್ಥರ ಪರಂಪರೆಯಲ್ಲಿ ಬಂದರು. ಮುಳಬಾಗಲಿನಲ್ಲಿ ಇರುವ ಇವರ ಬೃಂದಾವನ ಸ್ಥಳವನ್ನು 'ನರಸಿಂಹತೀರ್ಥ' ಎಂದು ಕರೆಯುತ್ತಾರೆ.

ಶ್ರೀಪಾದರಾಜರ ಕೃತಿಗಳಲ್ಲಿ ವಿಶಿಷ್ಟವಾದ ಅಪೂರ್ವವಾದ ಶ್ರೀ ಲಕ್ಷ್ಮೀನೃಸಿಂಹ ಪ್ರಾದುರ್ಭಾವದಂಡಕವು ಭಾಗವತದ ಸಪ್ತಮ ಸ್ಕಂದದ ಎಂಟನೆ ಅಧ್ಯಾಯದ ಶ್ರೀನರಸಿಂಹಾವತಾರದ ಕತೆಯನ್ನು ಸುಂದರವಾಗಿ ಕನ್ನಡಕ್ಕೆ ದಂಡಕವೆಂಬ ಧಾಟಿಯಲ್ಲಿ ಶ್ರೀಪಾದರಾಜರು ರೂಪಾಂತರ ಮಾಡಿ ನೀಡಿರುತ್ತಾರೆ. ಭಾಗವತ ನಿಷ್ಠೆಯೊಂದಿಗೆ ದೇಶಿ ಭಾಷೆಯ ಅಭಿಮಾನವನ್ನು ಹೊರಚೆಲ್ಲಿದ್ದಾರೆ.

ನೃಸಿಂಹದೇವರ ಸ್ತೋತ್ರ ಮಾಡುವಾಗ ದಾಸರು ನೃಸಿಂಹ ಪೂರ್ವತಾಪನಿ ಉಪನಿಷತ್ತುಗಳ ವಿಷಯಗಳನ್ನು ಆಯ್ದುಕೊಂಡಿರುವರು. ಮುನಿತ್ರಯರೆಂದು ಪ್ರಸಿದ್ಧರಾದ ಆಚಾರ್ಯ ಮಧ್ವರು, ಜಯತೀರ್ಥರು ಮತ್ತು ವ್ಯಾಸರಾಜರ ನಂತರ ಅಗ್ರಮಾನ್ಯರಾದವರು ಶ್ರೀವಾದಿರಾಜರು. ವಾದಿರಾಜರ ನರಸಿಂಹಪರವಾದ ಕೃತಿಗಳಲ್ಲಿ ಎರಡು ಸುಳಾದಿಗಳು, 'ದಶಾವತಾರಸ್ತುತಿ' ಗಳು ಗಮನಾರ್ಹವಾದದ್ದು.

ವ್ಯಸನಾದಿಗಳಿಂದ ದೂರ ಮಾಡಬೇಕೆಂಬ ಸರಳವಾದ ಬೇಡಿಕೆ ಇದೆ. ಅವರ ರಚನೆಯಲ್ಲಿ ಭಕ್ತಿ ಪಾರಮ್ಯದ ವಿವರಣೆಯಿದೆ. ಮುಕ್ತಿಪಥದ ದಾರಿ ಕಾಣಿಸಲಾಗಿದೆ. 'ದಾಸರೆಂದರೆ ಪುರಂದರದಾಸರಯ್ಯ, ಎಂಬ ಹೆಗ್ಗಳಿಕೆ ಪಾತ್ರರಾಗಿ ವಾಗ್ಗೇಯಕಾರರ ಸಾಲಿನಲ್ಲಿ ಮೊದಲಿಗೆ ಕಂಡು ಬರುವ ಪುರಂದರದಾಸರು ಭಾಗವತ ಧರ್ಮವನ್ನು ಪ್ರಚಾರ ಮಾಡಿದ ಹರಿದಾಸರಲ್ಲಿ ಅಗ್ರಗಣ್ಯರು.

ಪ್ರಹ್ಲಾದವರದನೆಂದು ಖ್ಯಾತಿವೆತ್ತ ನರಸಿಂಹ ಸ್ವಾಮಿಯ ಹಿರಣ್ಯಕಶ್ಯಪನ ಸುತನನ್ನು ಕಾಯ್ದ ಘಟನೆಯ ಹಿನ್ನೆಲೆಗೆ ದುಷ್ಟಶಿಕ್ಷಣ - ಶಿಷ್ಟರಕ್ಷಣಗಳ ಉದ್ದೇಶವಿರುವುದು ಸಾಮಾನ್ಯ ಸಂಗತಿ. ಆದರೆ ಈ ವಿಚಾರದಲ್ಲಿ ದಾಸರ ವಿವೇಚನೆ ಬೇರೆ ರೀತಿಯದ್ದು.ತಮ್ಮ ಕೀರ್ತನೆಯ ಪ್ರಾರಂಭದಲ್ಲೆ 'ದಾನವನ ಕೊಂದದ್ದಲ್ಲ ಕಾಣಿರೋ ಗಾನವಿನೋದಿ ನಮ್ಮ ತೊರವೆಯ ನರಸಿಂಹ ಎಂಬುದಾಗಿ ಸ್ಪಷ್ಟಪಡಿಸುತ್ತಾರೆ. 'ಅಚ್ಚ ಪುರುಷನೆಂಬ ರತ್ನವಿವೊಡಲಲ್ಲಿ ಬಿಚ್ಚಿ ಬೆದಕಿ ನೋಡಿದರಿನೆಷ್ಟು ಇದ್ದಾವೋ ಎಂಬ ಅನ್ವೇಷಕ ದೃಷ್ಟಿಯನ್ನು ಇಲ್ಲಿ ತುಂಬಿದ್ದಾರೆ. ಸಂಹಾರದ ಕ್ರಿಯೆಗೆ ಹೊಸತನದ ಮೆರಗನ್ನು ಈ ಮೂಲಕವಾಗಿ ತೊಡಿಸಿದ್ದಾರೆ.

ನರಸಿಂಹ ಮೊದಲೆ ಸಾಲಂಕೃತನದವನಾಗಿದ್ದಾನೆ. ಶ್ರೇಷ್ಠವಾದ ಮುತ್ತು ಮಾಣಿಕ್ಯ ಹಾರ ಧರಿಸಿಯೇ ಕಂಭದಿಂದ ಹೊರಬಂದಿದ್ದಾನೆ. ಅವೆಲ್ಲ ಇದ್ದರೂ ಕರುಳ ಹನಿಯ ಬಿಸಿರಕ್ತದಿಂದ ಕೂಡಿದ ಹಾರವನ್ನು ಧರಿಸಿರುವುದು ಸರಿಯೇ? ಶ್ರೀದೇವಿ ಲಕ್ಷ್ಮೀಯು - ಸ್ವಾಮಿಯ ತೊಡೆಯ ಮೇಲೆ ಸದಾಕಾಲ ನೆಲೆಸಿದ್ದಾಳೆ. ನಿತ್ಯ ಅಲಂಕರಿಸಿ ಆಸೀನಳಾಗಿರುತ್ತಾಳೆ. ಅಂತಹ ತೊಡೆಯ ಮೇಲೆ ಶತ್ರುವನ್ನು ಮಲಗಿಸಿಕೊಂಡಿರುವುದಾದರು ಹೇಗೆ? ಇದು ಯಾವ ಭಂಗಿಯೋ ಮೋಹನಾಂಗ? ಎಂದು ಕೇಳಿರುವಲ್ಲಿ ಪುರಾಣ ಚರಿತೆಯೊಂದಿಗೆ ಪ್ರಾಚೀನ ನಂಬಿಕೆಯು ಸೇರಿಕೊಂಡು ಹೊಸತನದ ಹೊನಲನ್ನುಂಟುಮಾಡಿದೆ.

ದಾಸಸಾಹಿತ್ಯದ ಮೊದಲ ಘಟ್ಟವನ್ನು ಉಜ್ವಲವಾಗಿ ಬೆಳಗಿಸಿ ಮರೆಯಾದ ಪುರಂದರ, ಕನಕದಾಸರ ತರುವಾಯ ಬಂದವರೇ ವಿಜಯದಾಸರು. ಪ್ರಹ್ಲಾದ ದೇವನ ಆಹ್ಲಾದ ನೋಡಯ್ಯ ಎಂಬ ನುಡಿಯಲ್ಲಿ ನರಸಿಂಹನ ಆಶ್ಚರ್ಯಕರ ರೂಪದ ವಿವರಣೆಯಿದೆ.





'ರಂಗ ನೋಡಿರೋ ಸಿರಿನರಸಿಂಹನ ಪಾಡಿರೋ ಮಂಗಳ ಮೂರುತಿ ಡಿಂಗರಿಗರ ಹೃತ್ಸಂಗ ಕರುಣಾಂತರಂಗ' ಎಂಬ ಪಲ್ಲವಿಯಿಂದ ಮೊದಲಾಗುವ ಕನಕಗಿರಿಯ ನರಸಿಂಹ ಸ್ತುತಿಯು ವಿಜಯದಾಸರ ಇನ್ನೊಂದು ಕೀರ್ತನೆಯ ಮೂಲಕ ಹರಿದು ಬಂದಿದೆ.

ಭಕ್ತಿಯಲ್ಲಿ ಭಾಗಣ್ಣ ಎಂದು ಪ್ರಸಿದ್ಧ ಗೋಪಾಲ ದಾಸರು ವಿಜಯದಾಸರ ಶಿಷ್ಯರು. ಅಹೋಬಿಲ ನಾರಸಿಂಹನ ಬಗ್ಗೆ ಸುಳಾದಿಯೊಂದನ್ನು ದಾಸರು ರಚಿಸಿರುತ್ತಾರೆ. ನರಸಿಂಹನ ನಾನಾ ಬಗೆಯ ಅಲಂಕಾರಗಳು, ಆತನ ಆಯುಧವಿಶೇಷಗಳು, ಆಭರಣಗಳಿಂದ ಕೂಡಿ ಮರುಳು ಗೋಳಿಸುವ ರೂಪದ ವಿಶ್ಲೇಷಣೆಯಿದೆ.

ಮಧ್ವಮತದ ತತ್ವಗಳನ್ನು ಕನ್ನಡದಲ್ಲಿ ಬೋಧಿಸಿದ ಹರಿದಾಸರಲ್ಲಿ ಆ ಗುರಿಯನ್ನು ಅತ್ಯಂತ ಸಮರ್ಥವಾಗಿ, ಶಕ್ತಿ ಯುತವಾಗಿ ಸಾಧಿಸಿದ ಕೀರ್ತಿಯು ಜಗನ್ನಾಥ ದಾಸರ ದ್ದಾಗಿದೆ. "ನಮೋ ನಮಸ್ತೆ ನರಸಿಂಹದೇವ" ಎಂದು ಆರಂಭ ಗೊಳ್ಳುವ ದಾಸರ ಕೀರ್ತನೆಯಲ್ಲಿ ಸ್ಮರಿಸುವವರನ್ನು ಕಾಯ ಬೇಕೆಂಬ ಬೇಡಿಕೆಯಿದೆ.

ದಾಸರ ಕೀರ್ತನೆಗಳಲ್ಲಿ ತೊರವೆಯ ನರಸಿಂಹನನ್ನು ಕುರಿತು ಕೀರ್ತನೆಯು ಪ್ರಸಿದ್ಧವಾದದ್ದು 'ಪಾಲಿಸೋ ನರ ಸಿಂಹ..' ಎಂಬ ಕೀರ್ತನೆಯಲ್ಲಿ ತನ್ನ ರೂಪವನ್ನು ತೋರಿ ಪಾಪಗಳನ್ನು ಪರಿಹರಿಸಬೇಕೆಂದು ಯಾಚನೆಯ ಧ್ವನಿಯ ಈ ಕೀರ್ತನೆಯಲ್ಲಿದೆ. 'ರುದ್ರಾಂತರ್ಗತ ಪಾಹಿ ನರಸಿಂಹ' ಎಂಬುದರಲ್ಲಿ ಅವರ ಇತರ ಕೃತಿಗಳಿಗಿಂತ ತುಸು ಭಿನ್ನವೂ ವಿಚಾರಪೂರ್ಣವೂ ಆಗಿದೆ. ಅವರ ಸಮರ್ಪಣಾ ಭಾವವು ತುಂಬ ಅರ್ಥಗರ್ಭಿತವಾದ ರೀತಿಯಲ್ಲಿ ಹೊರಹೊಮ್ಮಿರುತ್ತದೆ.

ಭಾಗವತ ಪುರಾಣವನ್ನು ಮೊತ್ತಮೊದಲಿಗೆ ಕನ್ನಡ ಭಾಷೆಯಲ್ಲಿ ಬರೆದ ಕವಿ ನಿತ್ಯಾತ್ಮಶುಕಯೋಗಿ. ಇದು ಇವನ ಬಿರುದಾಗಿತ್ತೆ ಹೊರತು ನಿಜವಾದ ಹೆಸರಲ್ಲ. ಸದಾನಂದ ಎಂಬುದು ಇವನ ಹೆಸರಿರಬಹುದು. ಈ ಕೃತಿಯಲ್ಲಿ ಬರುವ ನರಸಿಂಹಾವತಾರದ ಕಥೆಯ ಮೂಲ ರಚನೆಗೆ ಹತ್ತಿರವಾಗಿದೆ. ಮೂಲಕೃತಿಯ ಭಾವವನ್ನು ಸರಳವಾದ, ಸುಂದರವಾದ ಭಾಮಿನಿಷಟ್ಪದಿಯಲ್ಲಿ ನೀಡಲಾಗಿದೆ.

ಮಹಾವಿಷ್ಣುವಿನ ಜನಪ್ರಿಯ ಅವತಾರ ರೂಪನಾದ ನರಸಿಂಹನನ್ನು ಆರಾಧಿಸಿದ ಹರಿದಾಸರು ಯಾರೂ ಇಲ್ಲವೆಂದು ಹೇಳುವಷ್ಟರ ಮಟ್ಟಿಗೆ ಕೀರ್ತನೆ ಸ್ತೋತ್ರ ಸಾಹಿತ್ಯವು ಹುಲುಸಾಗಿ ಬೆಳೆದಿದೆ. ಈ ಸಂಪ್ರದಾಯಕ್ಕೆ ಸೇರುವ ಪ್ರಸನ್ನವೆಂಕಟ ದಾಸರನ್ನು ವಿಜಯದಾಸರ ಸಮಕಾಲೀನರೆಂದು ಹೇಳಬಹುದು. ಭಾಗವತದ ಅದ್ಯಂತವನ್ನು ವೃತ್ತವಾಗಿ ದ್ವಿಪದಿಯಾಗಿ ಸಂಪೂರ್ಣವಾಗಿ ಕನ್ನಡಿಸಿದ ಕೀರ್ತಿಯು ಪ್ರಸನ್ನ ವೆಂಕಟದಾಸರಿಗೆ ನಿಸ್ಸಂದೇಹವಾಗಿ ಸಲ್ಲುತ್ತದೆ.

ಕನ್ನಡ ನಾಡಿನ ಮೀರಾಬಾಯಿ ಎಂದು ಖ್ಯಾತರಾಗಿದ್ದ ಹೆಳವನಕಟ್ಟೆ ಗಿರಿಯಮ್ಮ ಸಾಹಿತ್ಯದಲ್ಲಿಯೂ ನರಸಿಂಹ ವರ್ಣನೆ ಕಾಣಬಹುದಾಗಿದೆ. "ಖಳನ ಮರ್ದಿಸಿ ಬಹು ಇಳೆಯಿಂದ ಅಜನಿಗೆ ಬಲು ಹರುಷವನಿತ್ತ ಹೆಳವನಕಟ್ಟೆ ಶ್ರೀವಲ್ಲಭದಾಗಿನ ಕಟ್ಟೆ ನೆಲೆವಾಸ ಕಂಭದನರಸಿಂಹ ದೇವಾಜ

ಭಾಗವತ ಪಂಥದ ಸುಪ್ರಸಿದ್ಧ ಕವಿಯಾದ ಕುಮಾರವ್ಯಾಸನು ಕಲಿಯುಗವನ್ನು ದ್ವಾಪರಯುಗವನ್ನಾಗಿ ಮಾಡಿದ್ದಾನೆ. ಕುಮಾರವ್ಯಾಸ ಭಾರತದಲ್ಲಿ ನರಸಿಂಹನ ಪ್ರಸಕ್ತಿಯನ್ನು ತಿಳಿಸುವ ಮೂರು ಪದ್ಯಗಳು ಇವೆ. ಸಭಾಪರ್ವದಲ್ಲಿ ಬಂದಿರುವ ಈ ಮೂರು ಪದ್ಯಗಳು ಮೇಲುನೋಟಕ್ಕೆ ಸ್ಪಷ್ಟಗೊಳ್ಳುತ್ತಿವೆ. ನರಸಿಂಹಾವತಾರದ ಸನ್ನಿವೇಶವನ್ನು ಸೊಗಸಾಗಿ ತಿಳಿಸುತ್ತದೆ.

ಗದುಗಿನ ಭಾರತದಂತೆ ಕನ್ನಡ ತೊರವೆ ರಾಮಾಯಣವೂ ಪ್ರಸಿದ್ಧವಾದದ್ದು. ತೊರವೆ ನರಹರಿಯೆಂಬ ನಿಜನಾಮಧೇಯವನ್ನು ಕವಿಯು ಇದ್ದ ಬಿರುದು. ಕುಮಾರ ವಾಲ್ಮೀಕಿ ಗ್ರಂಥದ ಆರಂಭದಲ್ಲೇ ನರಸಿಂಹನ ಸ್ತುತಿ ಇದೆ.

ಕನ್ನಡ ಶ್ರೇಷ್ಠ ಕವಿಯಾಗಿ ಪ್ರಖ್ಯಾತವಾದ ಲಕ್ಷ್ಮೀಶನು 'ಜೈಮಿನಿ ಭಾರತ'' ದ ಕರ್ತೃ. ಈತನ ಒಂದು ಪದ್ಯ ನರಸಿಂಹನ ಪ್ರಹ್ಲಾದ ಪರಿಪಾಲನಾ ರೀತಿಯಿಂದ ಆರಂಭಗೊಂಡಿದ್ದರೂ ಅಂತ್ಯದಲ್ಲಿ ಕೃಷ್ಣನ ಧ್ಯಾನದಿಂದ ಮುಕ್ತಾಯ ಗೊಂಡಿದೆ.

ಹದಿನೆಂಟನೆಯ ಶತಮಾನಕ್ಕೆ ಸೇರಿದ ಚೆನ್ನಿಗ ಎಂಬ ಕವಿಯು ತನ್ನ ಕುಲದೈವವಾದ ನರಸಿಂಹನ ಬಗೆಗಿನ ಭಕ್ತಿ ಭಾವುಕತೆಗಳು ಅವನ ಕೃತಿಯಲ್ಲಿ ವ್ಯಕ್ತವಾಗಿದೆ. ನರಸಿಂಹನ ಗುಣಗಣವನ್ನು ಸ್ತುತಿಸುತ್ತ ಭಗವಂತನು ಎಸಗಿದ ಅಸುರ ಸಂಹಾರ ಕ್ರಿಯೆಯನ್ನು ಸರಳ ಸುಂದರವಾದ ಮಾತುಗಳಲ್ಲಿ ತಿಳಿಸಿಕೊಟ್ಟಿದ್ದಾರೆ.

ಭಾಗವತ ಸಂಪ್ರದಾಯಕ್ಕೆ ಸೇರಿದವನಾಗಿ ದಶಾವತಾರ ಚರಿತೆಯನ್ನು ಬರೆದು ಕನ್ನಡ ಕವಿ ಮಲ್ಲರಸ. ನರಸಿಂಹಾವತಾರಕ್ಕೆ ತನ್ನ ಕೃತಿಯ ಮೂಲಕ ಗೌರವ ಸಲ್ಲಿಸಿದವನಾಗಿದ್ದಾನೆ.

ಭಗವಂತನ ವಿಚಾರದ ತಾತ್ವಿಕ ವಿವೇಚನೆಯು ಪ್ರಜ್ಞಾವಂತರ ಬೌದ್ಧಿಕ ಪರಿಧಿಗೆ ಸೀಮಿತವಾಗಿರಬಹುದು. ಆದರೆ ಸಾಮಾನ್ಯ ಜನವರ್ಗದವರ ಬುದ್ಧಿಮಟ್ಟಕ್ಕೆ ಎಟುಕುತ್ತಿರುವುದು ಕಣ್ಣಿಗೆ ಕಾಣುವ ಆ ದಯಾಮಯನಾದವನ ರೂಪ, ಆಕಾರಗಳು ಮಾತ್ರ.

ನಂಬಿದಿದ್ದನು ತಂದೆ, ನಂಬಿದನು ಪ್ರಹ್ಲಾದ

ನಂಬಿಯುಂ ನಂಬದಿರುವಿಬ್ಬಂದಿ ನೀನು

ಕಂಬದಿನೋ ಬಿಂಬದಿನೋ ಮೋಕ್ಷವವರಿಂಗಾಯ್ತು

ನಿಂಬಳದಿ ನೋಣನೀನು - ಮಂಕುತಿಮ್ಮ

(ಆಧಾರ: ಡಿ.ವಿ.ಜಿ ಯವರ ಮಂಕುತಿಮ್ಮನ ಕಗ್ಗ)




ಕರ್ನಾಟಕದ ವೈಷ್ಣವ ದೇವಾಲಯಗಳು

# ಅಕ್ಕಿರಾಂಪುರದ ಶ್ರೀ ಲಕ್ಷ್ಮೀವೆಂಕಟೇಶ್ವರ ದೇವಾಲಯ

- ಕೆಂಗೇರಿ ಚಕ್ರಪಾಣಿ
94483 86886

ಕಲಿಯುಗದ ದೈವ ಶ್ರೀವೆಂಕಟೇಶ್ವರ ದೇವಾಲಯಗಳು ನೆರೆಯ ಆಂಧ್ರ ಪ್ರದೇಶದ ಗಡಿಯಂಚಿನಲ್ಲಿರುವ ಜಿಲ್ಲೆಗಳಾದ ತುಮಕೂರು, ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳಲ್ಲಿ ಅನೇಕವು ಸಿಗುವುದು.ಕೋಲಾರ ಜಿಲ್ಲೆಯ ಚಿಕ್ಕ ತಿರುಪತಿ,ಬಂಗಾರು ತಿರುಪತಿ, ಚಿಕ್ಕಬಳ್ಳಾಪುರ ಜಿಲ್ಲೆಯ ಕೊನೆಕೊಂಡ್ಲು, ಗಡಿದಂ, ಆಲಂಬಗಿರಿ, ತುಮಕೂರು ಜಿಲ್ಲೆಯ ಮಧುಗಿರಿ ಮಿಡಿಗೇಶಿ, ಅಕ್ಕಿರಾಂಪುರ ಮುಂತಾದ ಪ್ರದೇಶಗಳ ಶ್ರೀನಿವಾಸ ದೇವಾಲಯಗಳನ್ನು ಉದಹರಿಸಬಹುದು.

ತುಮಕೂರು - ಗೌರಿಬಿದನೂರು ರಸ್ತೆಯಲ್ಲಿರುವ ಅಕ್ಕಿರಾಂಪುರ ಎಂಬ ಗ್ರಾಮದಲ್ಲಿ ಪುರಾಣ ಪ್ರಸಿದ್ಧವಾದ ಶ್ರೀ ಲಕ್ಷ್ಮೀವೆಂಕಟೇಶ್ವರ ದೇವಾಲಯವಿದೆ. ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕಿಗೆ ಸೇರುವ ಪ್ರಸ್ತುತ ಗ್ರಾಮದಲ್ಲಿರುವ ಶ್ರೀಲಕ್ಷ್ಮೀವೆಂಕಟೇಶ್ವರ ದೇವಾಲಯವು ಎರಡು ಗರ್ಭಗೃಹ, ಅಂತರಾಳ, ನವರಂಗ ಸಣ್ಣ ತೆರೆದ ಮುಖಮಂಟಪ, ವಿಶಾಲವಾದ ಹಜಾರ ಹಾಗೂ ಅಂದವಾದ ರಾಜಗೋಪುರಗಳನ್ನೊಳಗೊಂಡ ಬೃಹತ್ ರಚನೆಯಾಗಿದೆ. ರಾಜಗೋಪುರವು ಮೂರು ಸ್ತರಗಳನ್ನು ಹೊಂದಿದ್ದು ಶಿರದಲ್ಲಿ ಪಂಚ ಕಳಶಗಳಿಂದ ಶೋಭಿಸುತ್ತಿದೆ. ಪ್ರವೇಶದ್ವಾರದ ಇಕ್ಕೆಡೆಗಳಲ್ಲಿ ವಿಷ್ಣುವಿನ ದ್ವಾರಪಾಲಕರಾದ ಜಯ - ವಿಜಯರಿರುವರು. ವೆಂಕಟೇಶ್ವರ ಸ್ವಾಮಿಯ ದೇವಾಲಯದ ಮುಖಮಂಟಪದ ಕಂಬಗಳಲ್ಲಿ ರಂಗನಾಥ, ಹನುಮಂತ, ಬಾಲ ಕೃಷ್ಣನ ಬಾಲ ಲೀಲೆಗಳು ಮುಂತಾದ ಉಬ್ಬು ಶಿಲ್ಪಗಳು ಗಮನ ಸೆಳೆಯುವುದು.

ಈ ದೇವಾಲಯದ ನವರಂಗದ ಕಂಬಗಳ ಬುಡದಲ್ಲಿ ಚೌಕ, ನಂತರ ಬಹುಕೋನ, ನಂತರ ಗುಂಡಾದ ಹಂತಗಳನ್ನು ಹೊಂದಿದೆ. ನವರಂಗದಲ್ಲಿ ಆಳ್ವಾರರು, ಚಕ್ರ, ಶಂಖ,ಗದಾ, ಪದ್ಮಧಾರಿಯಾಗಿ ಉಬ್ಬು ಶಿಲ್ಪದ ಮಾದರಿಯಲ್ಲಿರುವ ಜನಾರ್ದನನ ಅಂದವಾದ ಮೂರ್ತಿಯಿದೆ. ಗರ್ಭಗುಡಿಯಲ್ಲಿ ಚಕ್ರ, ಶಂಖಗಳನ್ನು ಧರಿಸಿರುವ ವೆಂಕಟೇಶ್ವರನ ಕೆಳಗಿನ ಎಡಗೈ ಕಟೀ ಹಸ್ತ ಮತ್ತು ಬಲಗೈ ವರದ ಹಸ್ತದಲ್ಲಿದೆ. ಹಸನ್ಮುಖಿಯಾದ ದೇವನು ಕಿರೀಟಮಕುಟವನ್ನು ಧರಿಸಿದ್ದು, ನೋಡಲು ಬಹಳ ಭವ್ಯವಾಗಿರುವನು. ವೆಂಕಟೇಶ್ವರ ದೇವಾಲಯವನ್ನು ಹೊಂದಿಕೊಂಡಂತೆ ಸ್ವಾಮಿಯ ಬಲಭಾಗದಲ್ಲಿ ಶ್ರೀಮಹಾಲಕ್ಷ್ಮೀದೇವಿಯ ಗುಡಿಯಿದ್ದು, ವೆಂಕಟೇಶ್ವರನ ಗುಡಿಯಿಂದಲೇ ಲಕ್ಷ್ಮೀದೇವಿಗೆ ಪ್ರವೇಶವನ್ನು ಕಲ್ಪಿಸಲಾಗಿದೆ. ಲಕ್ಷ್ಮೀದೇವಿಯ ಗರ್ಭಗೃಹವು ಶ್ರೀನಿವಾಸ ಸ್ವಾಮಿಯ ಗರ್ಭಗೃಹದ ಬಲಬದಿಗೆ ಇರುವುದು ಇಲ್ಲಿಯ ವಿಶೇಷ. ಶ್ರೀಮಹಾಲಕ್ಷ್ಮೀದೇವಿಯು ಎರಡು ಬಾಹುಗಳಲ್ಲಿ ಕಮಲಾಧಾರಿಯಾಗಿ, ಕುಳಿತ ಭಂಗಿಯಲ್ಲಿ ಶೋಭಿತಳಾಗಿರುವಳು. ಜಯಮಂಗಲಿ ಮತ್ತು ಸುವರ್ಣಮುಖಿ ನದಿಗಳ ಸಂಗಮ ಕ್ಷೇತ್ರವಾದ ಅಕ್ಕಿರಾಂಪುರವು ಪೌರಾಣಿಕ ಹಿನ್ನೆಲೆಯಲ್ಲಿ ಪುರಾಣ ಪ್ರಸಿದ್ಧ ಕ್ಷೇತ್ರ.ಇದು ಭೃಗು,ಮೌನಭಾರ್ಗವ,ವೈಖಾನಸ ಮುನಿಗಳ ತಪೋಭೂಮಿ. ಇಲ್ಲಿಯ ಸ್ಥಳಪುರಾಣದ ಪ್ರಕಾರ ಭೃಗು ಮಹರ್ಷಿಗಳು ದೀರ್ಘಕಾಲದ ತಪಸ್ಸಿನಿಂದ ವೆಂಕಟೇಶ್ವರ ಮತ್ತು ಮಹಾಲಕ್ಷ್ಮೀ ದೇವಿಯರು ಇಲ್ಲಿ ನೆಲೆಸಿದರು. ನಂತರ ಭಾರದ್ವಾಜ ಮುನಿ ಪರಂಪರೆಯ ಮೌನ ಭಾರ್ಗವ ಮುನಿಗಳು ಸ್ವಾಮಿಯನ್ನು ಆರಾಧಿಸಿದರು. ಮೌನ ಭಾರ್ಗವ ಶಿಷ್ಯರಾದ ವೈಖಾನಸರು ಒಮ್ಮೆ ತಮ್ಮ ಗುರುಗಳನ್ನು ನಿಂದಿಸಿದ್ದರಿಂದ ಆನೆಯ (ಕರಿ) ರೂಪವನ್ನು ತಾಳಿದರು.ವೈಖಾನಸರು ತಮ್ಮ ಗುರುಗಳನ್ನು ಪ್ರಾರ್ಥಿಸಲಾಗಿ ರಾಂಪುರದಲ್ಲಿ ಶ್ರೀವೆಂಕಟೇಶ್ವರನು ವಲ್ಮೀಕದಲ್ಲಿ (ಹುತ್ತದಲ್ಲಿ) ನೆಲೆಸಿರುವನು. ಸಂಗಮ





ಕ್ಷೇತ್ರದಲ್ಲಿರುವ ಜಲದಿಂದ ನಿರಂತರವಾಗಿ ಅರ್ಚಿಸಿ ಶಾಪ ವಿಮೋಚನೆ ಹೊಂದಿ, ನಿಜರೂಪವನ್ನು ತಾಳುವೆಯೆಂದು ಶಾಪ ವಿಮೋಚನೆಯ ಮಾರ್ಗವನ್ನು ತೋರಿದರು.ಗಜ ರೂಪದ ವೈಖಾನಸರು ನಿರಂತರವಾಗಿ ಸ್ವಾಮಿಯನ್ನು ಅರ್ಚಿಸುತ್ತಿರಲು ಹಂಪಾರ್ಯ ಮತ್ತು ರಾಮದಾಸರೆಂಬ ಯುವಕರಿಗೆ ಸ್ವಪ್ನದಲ್ಲಿ ಶ್ರೀನಿವಾಸನು ಕಾಣಿಸಿಕೊಂಡು, ಅಕ್ಕಿರಾಂಪುರದಲ್ಲಿ ಹುತ್ತದಲ್ಲಿರುವ ತನ್ನನ್ನು ತೆಗೆದು ದೇವಾಲಯ ನಿರ್ಮಿಸಬೇಕೆಂದು ಅಪ್ಪಣೆ ಕೊಡಿಸಿದನು. ನಂತರ ಸಹೋದರರು ಕ್ಷೇತ್ರಕ್ಕೆ ಬಂದು ಆನೆಯಿಂದ ಅರ್ಚಿಸುತ್ತಿರುವ ಹುತ್ತವನ್ನು ಜಲದಿಂದ ತೊಳೆಯಲಾಗಿ ಶ್ರೀಲಕ್ಷ್ಮೀ ವೆಂಕಟೇಶ್ವರ ಶಿಲಾಮೂರ್ತಿಗಳು ಕಾಣಿಸಿಕೊಂಡಿತು. ಹಂಪಾರ್ಯ ಸಹೋದರರು ಅಭಿಷೇಕದ ಜಲದಿಂದ ಆನೆಯ



ರೂಪದಲ್ಲಿರುವ ವೈಖಾನಸರಿಗೆ ಸಂಪ್ರೋಕ್ಷಣೆ ಮಾಡಲಾಗಿ ಅವರು ನಿಜರೂಪವನ್ನು ತಾಳಿ ಶಾಪವಿಮೋಚಿತರಾದರು. ಹೀಗಾಗಿ ಕರೀಂದ್ರ (ಆನೆಯು) ಅರ್ಚಿಸಿರುವುದರಿಂದ ಕರಿ ಶ್ರೀವೆಂಕಟೇಶ್ವರ ಎಂತಲೂ ಸ್ವಾಮಿಗೆ ಹೆಸರಿರುವುದು ಇಲ್ಲಿನ ಸ್ಥಳ ಪುರಾಣದಿಂದ ತಿಳಿದು ಬರುವುದು. ಅಕ್ಕಿರಾಂಪುರದ ದೇವಾಲಯದ ವಿನ್ಯಾಸವನ್ನು ಗಮನಿಸಿದರೆ ಸುಮಾರು 300 ವರ್ಷಗಳ ಹಿಂದೆ ಸ್ಥಳೀಯ ಪಾಳೆಯಗಾರರಿಂದ ನಿರ್ಮಿತವಾಗಿರಬಹುದೆಂದು ನಿರ್ಧರಿಸಬಹುದು.ದೇವಾಲಯವು ಸುಮಾರು 20 ವರ್ಷಗಳಿಂದ ಅಭಿವೃದ್ಧಿಯತ್ತ ಸಾಗಿದೆ. ಶ್ರೀಲಕ್ಷ್ಮೀವೆಂಕಟರಮಣ (ಕರಿತಿಮ್ಮಪ್ಪ) ವಿಪ್ರ ಸೇವಾ ಟ್ರಸ್ಟ್ ವತಿಯಿಂದ ಸಾಕಷ್ಟು ಅಭಿವೃದ್ಧಿಯನ್ನು ಹೊಂದಿರುವುದು. ದೇವಾಲಯ ಬದಿಯಲ್ಲಿ ಸ್ವಾಮಿಯ ಸೇವಾ ಕೈಂಕರ್ಯವು ನಿರಂತರವಾಗಿ ಜರಗಲು ಹಾಗೂ ಕಲ್ಯಾಣ ಕಾರ್ಯಗಳು ಜರಗಲು ಸುಸಜ್ಜಿತವಾದ ಕಲ್ಯಾಣ ಮಂಟಪವು ನಿರ್ಮಾಣವಾಗಿದೆ. ದೇವಾಲಯದ ಆವರಣದಲ್ಲಿ ಕೈತೋಟ, ನವಗ್ರಹ, ವನ ನಿರ್ಮಿತವಾಗಿದ್ದು ವೈಭವದ ರಥೋತ್ಸವ ಕಾರ್ಯಕ್ರಮಗಳನ್ನು ಬಹು ಪಾಂಗಿತವಾಗಿ ನಡೆಸಿಕೊಂಡು ಬರುತ್ತಿರುವುದು ಅಭಿವಂದನೀಯ.

ಅಕ್ಕಿರಾಂಪುರದ ಕರಿತಿಮ್ಮಪ್ಪ ಸ್ವಾಮಿಯ ಬ್ರಹ್ಮ ರಥೋತ್ಸವವು ಪ್ರತಿ ವರ್ಷ ವೈಶಾಖ ಮಾಸದ ಶುಕ್ಲ ಪಕ್ಷ ಪೂರ್ಣಿಮೆ ದಿನದಂದು ಪ್ರತಿ ವರ್ಷ ಬಹಳ ವೈಭವವಾಗಿ ನೆರವೇರುವುದು.ಉತ್ಸವದ ಅಂಗವಾಗಿ ದ್ವಾದಶಿಯ ದಿನ ಅಂಕುರಾರ್ಪಣೆ ಸೂರ್ಯ ಮಂಡಳೋತ್ಸವ, ನಂತರ ದ್ವಿತಿಯ ದಿನ ಗಜೇಂದ್ರಮೋಕ್ಷ , ಕಲ್ಯಾಣೋತ್ಸವ ನಂತರ ಮೂರನೆಯ ದಿನ ಬ್ರಹ್ಮ ರಥೋತ್ಸವ ಸ್ವಾಮಿಗೆ ಹೂವಿನ ಪಲ್ಲಕ್ಕಿ, ಪ್ರಾಕಾರೋತ್ಸವ ನಂತರ ದಿನಗಳಲ್ಲಿ ಗರುಡೋತ್ಸವ, ಉಯ್ಯಾಲೋತ್ಸವ, ವಸಂತೋತ್ಸವ, ಧವನೋತ್ಸವ, ನವಿಲೋತ್ಸವ, ಹನುಮಂತೋತ್ಸವ, ಚಂದ್ರಮಂಡಳೋತ್ಸವ, ಶಯನೋತ್ಸವ ಮತ್ತು ಪಂಚಾಮೃತ ಅಭಿಷೇಕಗಳು ಸಹಸ್ರಾರು ಭಕ್ತರು ಸಮ್ಮುಖದಲ್ಲಿ ಬಹು ವಿಜೃಂಭಣೆಯಿಂದ ಬಹು ಪಾಂಗಿತವಾಗಿ ನೆರವೇರುವುದು. ಉತ್ಸವದ ಅಂಗವಾಗಿ ಪ್ರತಿ ದಿನವೂ ನಿತ್ಯ ಅನ್ನದಾನದ ಸೇವೆಯು ಭಕ್ತಾದಿಗಳಿಂದ ಜರುಗುವುದು ಉಲ್ಲೇಖನೀಯ. ಅಕ್ಕಿರಾಂಪುರದ ನದಿಯ ಪಾತ್ರದಲ್ಲಿ ಮೈಲ್ಲಾರಲಿಂಗೇಶ್ವರ ಮುಂತಾದ ಪಂಚ ಶಿವಾಲಯಗಳಿವೆ.

ಹೀಗೆ ಬನ್ನಿ

ತುಮಕೂರು ಜಿಲ್ಲೆ, ಕೊರಟಗೆರೆ ತಾಲ್ಲೂಕು ಅಕ್ಕಿರಾಂಪುರವು ಜಿಲ್ಲಾ ಕೇಂದ್ರದಿಂದ 35 ಕಿ.ಮೀ. ಹಾಗೂ ತಾಲ್ಲೂಕು ಕೇಂದ್ರದಿಂದ 10 ಕಿ.ಮೀ ದೂರದಲ್ಲಿ. ತುಮಕೂರು ಗೌರಿಬಿದನೂರು ರಸ್ತೆಯಲ್ಲಿದೆ. ತುಮಕೂರಿನಿಂದ ಕೊರಟಗೆರೆಗೆ ಬಂದು ಹೊಳವನಹಳ್ಳಿಯ ಮೂಲಕ ಅಕ್ಕಿರಾಂಪುರವನ್ನು ಸೇರಬಹುದು.ಗೌರಿಬಿದನೂರಿನಿಂದ ಬರುವ ಪ್ರವಾಸಿಗರಿಗೆ ಅದೇ ಗೌರಿಬಿದನೂರು - ತುಮಕೂರು ರಸ್ತೆಯಲ್ಲಿ 27 ಕಿ.ಮೀ. ದೂರದಲ್ಲಿ ಅಕ್ಕಿರಾಂಪುರವು ಸಿಗುವುದು. ದೇವಾಲಯವು ರಸ್ತೆಯ ಬದಿಯಲ್ಲಿಯೇ ಇದೆ. ಕ್ಷೇತ್ರಕ್ಕೆ ಬರುವ ಪ್ರವಾಸಿಗರು ಸಮೀಪದ ಹೊಳವನಹಳ್ಳಿಯ ಶಂಖ , ಚಕ್ರಧಾರಿಯಾದ ಶ್ರೀರಾಮ ದೇವಾಲಯ, ಕ್ಯಾಮೇನಹಳ್ಳಿಯ ಆಂಜನೇಯ ದೇವಾಲಯ ಗೊರವನಹಳ್ಳಿಯ ಲಕ್ಷ್ಮೀದೇವಾಲಯ ಮತ್ತು ದೇವರಾಯನ ದುರ್ಗದ ನರಸಿಂಹ ದೇವಾಲಯಗಳನ್ನೂ ದರ್ಶಿಸಬಹುದು.

# ಕರೋನಾ ಮೇಲಿನ ಬ್ರಹ್ಮಾಸ್ತ್ರ ನಮ್ಮ ಪ್ರತಿಬಂಧಕ ಶಕ್ತಿಯೇ

- ಮೂಲ : ಡಾ ॥ ಸಿ. ಮಧುಸೂದನಶರ್ಮ
9000761390
ಅನುವಾದ - ಶ್ರೀಮತಿ

ಇಡೀ ಜಗತ್ತನ್ನೇ ಗಡಗಡ ನಡುಗಿಸುತ್ತಿರುವ ಮಹಾಮಾರಿ ಕರೋನಾ. ಈ ರಾಕ್ಷಸ ಕಬಂಧ ಬಾಹು ಗಳಿಂದ ಕ್ರಮೇಣ ಹೊರ ಬರುತ್ತಿದ್ದೀವೇನೋ ಎಂಬ ಸಂತೋಷವನ್ನು ಬಹಳ ಕಾಲ ನಿಲ್ಲದೇ ಮಾಡಿ ಸೆಕೆಂಡ್ ವೇವ್ ರೂಪದಲ್ಲಿ ತನ್ನ ಮುಷ್ಠಿ ಪ್ರಹಾರವನ್ನು ತೀವ್ರಗತಿಯಲ್ಲಿ ಬೀಸುತ್ತಾ ಇಡೀ ಮನುಕುಲವನ್ನೇ ಭಯಭೀತರನ್ನಾಗಿ ಮಾಡುತ್ತಿದೆ .

ಯಾವಾಗ ಎಷ್ಟು ದಿನಕ್ಕೆ ಹೇಗೆ ಪರಿಹಾರ ದೊರ ಕುತ್ತದೆಂದು ಅಸ್ಪಷ್ಟವಾದ ಪ್ರಶ್ನೆಗೆ ಉತ್ತರ ಹುಡುಕುವ ಆಶಾ ವಾದದಿಂದ ನಿರೀಕ್ಷಣೆ ಮಾಡುತ್ತಲೇ ಇದ್ದೇವೆ.

ಕರೋನಾ ಎಂಬ ವೈರಸ್ಸಿನಿಂದ ಈ ವ್ಯಾಧಿಯುಂಟಾ ಗುತ್ತದೆ. ಅದಕ್ಕೆ ಈ ವ್ಯಾಧಿಗೆ ಕರೋನಾ ವೈರಸ್ ಡಿಸೀಸ್ ಅಥವಾ Covid ಎಂದು ಕೂಡಾ ಕರೆಯುತ್ತಾರೆ. ಇತರ ಭಾಷೆ ಗಳಲ್ಲಿ ಕರೋನ ಎಂದರೆ 'ಕಿರೀಟ' ಎಂದು ಅರ್ಥ. ಈ ವೈರಸ್ ಹೊರನೋಟಕ್ಕೆ ಕಿರೀಟದಂಥ ಮೇಲ್ಮೈಯನ್ನು ಹೊಂದಿರುವುದರಿಂದ ಇದಕ್ಕೆ ಆ ಹೆಸರು ಸಂದಿದೆ.

ಬರಿಗಣ್ಣಿಗೆ ಕಾಣಿಸದ ಅತ್ಯಂತ ಸೂಕ್ಷ್ಮಾತಿ ಸೂಕ್ಷ್ಮ ವಾದ ಕ್ರಿಮಿ ಈ ವೈರಸ್ ಇಂತಹ ಕ್ರಿಮಿಗಳು, ಬ್ಯಾಕ್ಟೀರಿಯಾ ಗಳು. ಫಂಗಸ್‌ಗಳು ಹುಟ್ಟಿ ವ್ಯಾಪಿಸಿ,ನಮಗೆ ಉಂಟು ಮಾಡುವ ತೊಂದರೆಗಳು, ಚಿಕಿತ್ಸಾ ವಿಧಾನಗಳು, ವ್ಯಾಧಿ ಗಳಿಗೆ ಸಂಬಂಧಿಸಿದ ಯಥೋಚಿತ ಸಮಗ್ರ ಪರಿಹಾರಗಳು ನಮಗೆ ಅತ್ಯಂತ ಪ್ರಾಚೀನ ಕಾಲದಿಂದಲೇ ನಮ್ಮ ಭಾರ ತೀಯ ವಾಙ್ಮಯ. ವೇದ, ವೈದ್ಯಕೀಯ ಗ್ರಂಥಗಳಲ್ಲಿ ಸಂಗ್ರಹಿ ಸಿಟ್ಟಿರುವುದು ತಿಳಿದು ಬರುತ್ತದೆ.

ಈ ಬಗೆಯ ಕ್ರಿಮಿಗಳ ಕಾರಣದಿಂದ ಅನಾರೋಗ್ಯ ಸಮಸ್ಯೆಗಳು ವ್ಯಾಧಿಗಳು,ಒಬ್ಬರಿಂದ ಮತ್ತೊಬ್ಬರಿಗೆ ಹರಡು ವುದರಿಂದ ಇವನ್ನು ಸಾಂಕ್ರಾಮಿಕ ರೋಗಗಳೆಂದು, ಅಸಂಖ್ಯಾತ ಜನಗಳನ್ನು ಕಬಳಿಸುತ್ತಿರುವುದರಿಂದ ಜನೋ ಧ್ವಂಸಕ ವ್ಯಾಧಿಯೆಂದು ನಮ್ಮ ಚಿರಸ್ಮರಣೀಯ ಮಹರ್ಷಿ ಗಳು ತಿಳಿಸಿದ್ದಾರೆ.

ಇಂತಹ ಸಾಂಕ್ರಾಮಿಕ ರೋಗಗಳಿಗೆ ಕಾರಣಗಳನ್ನು ಪ್ರಸ್ತಾಪಿಸುತ್ತಾ ಮಾಧವನಿದಾನಂ ಎಂಬ ಪ್ರಾಯೋಜಿತ ಆಯುರ್ವೇದ ಗ್ರಂಥದಲ್ಲಿ

ಪ್ರಸಂಗಾತ್ ಗಾತ್ರ ಸಂಸ್ಪರ್ಶಾತ್ ನಿಶ್ವಾಸಾತ್ ಸಹಭೋಜನಾತ್।
ಏಕ ಶಯ್ಯಾಸನಾಶ್ಚೈವ ವಸ್ತ್ರಮಾಲ್ಯಾಲೇಪನಾತ್॥

ಕುಷ್ಠಜ್ವರಶ್ಚ ಶೋಷಶ್ಚ ನೇತ್ರಾಭಿಷ್ಯಂದ ಮೇವಚ॥
ಔಪಸರ್ಗಿಕ ರೋಗಾಶ್ಚ ಸಾಂಕ್ರಾಮಾಂತಿನ್ನರಾನ್ನರಂ॥


ಎಂಬ ವಿವರಣೆಯನ್ನು ಕಾಣಬಹುದು.

- ವ್ಯಕ್ತಿಗಳಿಂದ ಅತಿ ಸಮೀಪದಲ್ಲಿ ನಿಂತು ಮಾತನಾಡು ವುದು. ಅಪ್ಪುಗೆಗಳು, ಶರೀರಸ್ಪರ್ಶ, ವ್ಯಾಧಿಗ್ರಸ್ಥರು ಬಿಟ್ಟ ಗಾಳಿಯ ಸೇವನೆ. ಅಲ್ಲದೇ ಹತ್ತಿರ - ಹತ್ತಿರ ಕುಳಿತುಕೊಂಡು ಆಹಾರವನ್ನು ಸೇವಿಸುವುದು ಒಂದೇ ಹಾಸಿಗೆಯ ಮೇಲೆ ಮಲಗುವುದು, ವಿರಮಿ ಸುವುದು, ಒಂದೇ ಸ್ಥಳದಲ್ಲಿ ಕೂರುವುದು. ಒಬ್ಬರ ವಸ್ತ್ರ ಆಭರಣ ಗಳನ್ನು ಮತ್ತೊಬ್ಬರು ಬಳಸುವುದು ಇತ್ಯಾದಿ ಕಾರಣಗಳಿಂದಾಗಿ ಒಬ್ಬ ವ್ಯಕ್ತಿಯಿಂದ ಮತ್ತೊಬ್ಬ ವ್ಯಕ್ತಿಗೆ ಹಲವು ರೋಗಗಳು ಸಂಕ್ರ ಮಣಗೊಳ್ಳುತ್ತಿವೆಯೆಂದು ಇದರ ಅರ್ಥ.

ಪ್ರತ್ಯೇಕ ವ್ಯಾಧಿಗ್ರಸ್ಥರು ಕೆಮ್ಮಿದಾಗ, ಸೀನಿದಾಗ ಆ ಸೀನಿಂದ ಬಂದ ಗಾಳಿಯಲ್ಲೊಂದೇ ಅಲ್ಲದೇ ಅದು ಬಿದ್ದ ವಸ್ತುಗಳನ್ನು, ಪದಾರ್ಥಗಳನ್ನು ನಾವು ಸ್ಪರ್ಶಿಸಿ ಅದೇ ಕೈಗಳಿಂದ ಮೂಗು, ಕಣ್ಣು,ಬಾಯಿಗೆ ತಾಕಿಸಿಕೊಂಡಾಗ ಸಹಾ ಈ ಕರೋನಾ ವೈರಸ್ ನಮ್ಮ ಶರೀರದಲ್ಲಿ ಪ್ರವೇಶಿಸಿ ರೋಗಲಕ್ಷಣಗಳನ್ನು ತೋರಿಸಲಾರಂಭಿಸುತ್ತವೆ.

"ನಚ ಸರ್ವಾಣಿ ಶರೀರಾಣಿ ವ್ಯಾಧಿ ಕ್ಷಮತ್ವೆ ಸಮರ್ಥಾನಿ ಭವಂತೀ"- ಎಂಬ ವಚನಾನುಸಾರ ನಮ್ಮೆಲ್ಲರಲ್ಲಿ ಒಂದೇ ವಿಧ ವಾದ ರೋಗನಿರೋಧಕ ಶಕ್ತಿಯಿಲ್ಲದುದರಿಂದ, ರೋಗ ನಿರೋ ಧಕ ಶಕ್ತಿ ಕಡಿಮೆಯಿರುವವರಲ್ಲಿ ಈ ತರಹದ ವ್ಯಾಧಿ ಮೆರೆದಾಟ ತೀವ್ರ ಸ್ಥಾಯಿವರೆಗೂ ಕೂಡ ತಲುಪಬಹುದೆಂಬ ಆಯುರ್ವೇದ ಸಿದ್ಧಾಂತವನ್ನು ಇಲ್ಲಿ ಗಮನಿಸಬೇಕಾದುದು ಅತ್ಯವಶ್ಯಕ.

ಈ ವ್ಯಾಧಿ ಹರಡದಂತೆ ತಡೆಯಲು ಮಾಸ್ಕ್‌ಗಳನ್ನು ಧರಿಸು ವುದು. ಸಾಮಾಜಿಕ ಅಂತರವನ್ನು ಕಾಪಾಡಿಕೊಳ್ಳುವುದು, ಕೈಯ



ಗಳನ್ನು ಸಾಬೂನು ಅಥವಾ ಸ್ಯಾನಿಟೈಜರ್‌ಗಳಿಂದ ಶುಭ್ರವಾಗಿ ತೊಳೆಯುತ್ತಿರುವುದು ಅತ್ಯವಶ್ಯಕ ಪರಿಶುದ್ಧವಾದ, ತಾಜಾ, ಬಿಸಿಯಾದ ಪೋಷಕಾಂಶಗಳಿಂದ ಕೂಡಿದ ಆಹಾರ ಸೇವನೆ, ತಕ್ಕಷ್ಟು ಶಾರೀರಕ ವ್ಯಾಯಾಮ ಬಹಳ ಮುಖ್ಯ.ಕುದಿಯುವ ನೀರಿನ ಆವಿಯನ್ನು ತೆಗೆದುಕೊಳ್ಳುವುದು ಸಹಾ ಒಳ್ಳೆಯದೇ.

**ಸ್ಯಾನಿಟೈಜರ್:**

200 ಮಿ.ಲೀ. 50 ಗ್ರಾಂ ಬೇವಿನೆಲೆ, ಒಂದು ಟೀಸ್ಪೂನ್ ಉಪ್ಪ ಹಾಕಿ ಬಿಸಿ ಮಾಡಿ ಕುದಿಸುವಾಗ ಒಂದು ಟೀ ಸ್ಪೂನ್ ಅರಿಶಿನ ಹಾಕಿ ಇಳಿಸಿ ಬಂದು ಟೀ ಸ್ಪೂನ್ ಕರ್ಪೂರದ ಪುಡಿ ಹಾಕಿ ಕಲಿಸಿ ಮುಚ್ಚಿಟ್ಟು ಬಿಸಿಯಾರಿದ ಬಳಿಕ ಶೋಧಿಸಿ ಒಂದು ಸೀಸೆಯಲ್ಲಿ ಸಂಗ್ರಹಿಸಿಟ್ಟುಕೊಂಡು ಈ ದ್ರವಣದಿಂದ ಆಗಾಗ ಕೈಗಳನ್ನು ತೊಳೆಯುತ್ತಿರಬೇಕು.

ಈ ವೈರಸ್‌ನಿಂದಾಗಿ ಉತ್ಪನ್ನವಾಗುವ ವ್ಯಾಧಿ ಲಕ್ಷಣ ಗಳು ಕಡಿಮೆಯಾಗಲು,ವೈರಸ್‌ನ ಪ್ರಭಾವವು ತೀವ್ರ ಗೊಳ್ಳ ದಂತೆ ಇರಲು, ವೈರಸ್ ಸಂಖ್ಯೆ ಇಮ್ಮಡಿ, ಮೂರ್ಮಡಿಯಾಗಿ ಬೆಳೆಯದಿರಲು ವೈರಸ್ ಶೀಘ್ರದಲ್ಲಿ ಶಕ್ತಿಹೀನವಾಗಲು,ರೋಗ ನಿರೋಧಕ ಶಕ್ತಿ ವೃಧಿಸಲು ಸಹಾಯಕವಾಗುವ ಒಳ್ಳೆಯ ಆಹಾ ರೌಷಧಿಗಳು ನಮ್ಮ ದೇಶೀಯ ವೈದಕೀಯ ವಿಧಾನದಲ್ಲಿ ಹಾಸು ಹೊಕ್ಕಾಗಿವೆ.

ಅದರಲ್ಲಿ ಕೆಲವನ್ನು ಇಲ್ಲಿ ಪ್ರಾಸ್ತಾಪಿಸೋಣ.

ನೆನೆಸಿದ ಲವಂಗಗಳು ಆಜ್ವಾನ, ಕರ್ಪೂರವನ್ನು ಸಮಾನವಾಗಿ ಒಂದು ಬಟ್ಟೆಯಲ್ಲಿ ತೆಗೆದುಕೊಂಡು ಒಂದು ಗಂಟಿ ನಂತೆ ಕಟ್ಟಿ ಮೇಲಿಂದ ಮೇಲೆ ಈ ಔಷಧಿಯನ್ನು ವಾಸನೆ ನೋಡುತ್ತಿರಬೇಕು.

ಎಳ್ಳೆಣ್ಣೆಯನ್ನು ಚಮಚದಲ್ಲಿ ತೆಗೆದುಕೊಂಡು ಪ್ರತಿನಿತ್ಯ ಮೂಗಿನ ಹೊಳ್ಳೆಗಳಲ್ಲಿ ಒಳ ಭಾಗಕ್ಕೆ ಹಚ್ಚುತ್ತಿರುವುದು ಸಹಾ ಬಹಳಾ ಒಳ್ಳೆಯದೇ.

ಇಂತಹ ಹವ್ಯಾಸಗಳಿಂದ ಗಂಟಲು, ಮೂಗು, ಬಾಯಿಯ ಭಾಗಗಳಲ್ಲಿ ವೈರಸ್‌ಗಳು ವೃದ್ಧಿಯಾಗದೇ ಇರು ವುದಕ್ಕೆ ಬೇಕಾಗುವ ಪೂರಕವಾದ ವಾತಾವರಣ ಅಲ್ಲಿ ನಿರ್ಮಿತ ವಾಗುತ್ತದೆ.

ಒಂದು ಲೀಟರ್ ಬಿಸಿನೀರಿನಲ್ಲಿ 10 ತುಳಸಿ ಎಲೆಗಳು,10 ಮೆಣಸಿನಕಾಳು,(ಕುಟ್ಟಿದ್ದು) 5 ಗ್ರಾಂ ಶುಂಠಿ (ಜಜ್ಜಿದ್ದು) 10 ಗ್ರಾಂ ಬೆಲ್ಲದ ಪುಡಿ ಒಂದು ಗ್ರಾಂ ಒಣಶುಂಠಿ ಪುಡಿ, ಅರಶಿನ ಹಾಕಿ ಸಣ್ಣ ನುರಿಯಲ್ಲಿ ಒಂದು ಗ್ಲಾಸ್ ನೀರು ಅಂದರೆ 250 ಮಿ.ಲೀ. ನೀರು ಉಳಿಯುವಂತೆ ಮರಳಿಸಿ ಕೆಳಗಿಳಿಸಿ, ಶೋಧಿಸಿ ದಿನ ಬೆಳಗ್ಗೆ ಉಗುರುಬೆಚ್ಚಗಿನ ನೀರನ್ನು ಕುಡಿಯುತ್ತಿದ್ದರೆ ವ್ಯಾಧಿ ಶಮನಗೊಂಡು, ನಿರೋಧಕ ಶಕ್ತಿ ವೃದ್ಧಿಯಾಗಲು ಉಪಯುಕ್ತ ವಾಗುತ್ತದೆ.

ದಿನವೂ ಒಂದು ಬಾರಿ 250 ಮಿ.ಲೀ. ಮರಳುವ ನೀರಿ ನಲ್ಲಿ ಕಾಲು ಟೀಸ್ಪೂನ್ ಕಾಳುಮೆಣಸಿನ ಪುಡಿ ಹಾಕಿ, ಇಳಿಸಿ, 3-4 ಚಿಟಿಕೆ ಅರಶಿನ ಹಾಕಿ ಬಾಯಿಯನ್ನು ಮುಚ್ಚಿ ಉಗುರುಬೆಚ್ಚ ಗಿರುವಾಗಲೇ ಶೋಧಿಸಿ 3 ಟೀಸ್ಪೂನ್ ಜೇನುತುಪ್ಪ ಅರ್ಧ ನಿಂಬೆ ಹೋಳಿನ ರಸ ಕಲಿಸಿ ಸೇವಿಸಬೇಕು.

5 ಟೀ ಸ್ಪೂನ್ ಕಾಳುಮೆಣಸಿನ ಪುಡಿ 2 1/2 ಟೀ ಸ್ಪೂನ್ ಅಜ್ವಾನದ ಪುಡಿ 2 1/2 ಟೀಸ್ಪೂನ್ ಜೀರಿಗೆ ಪುಡಿ, ಒಂದು ಟೀ ಸ್ಪೂನ್ ಶುಂಠಿ ಪುಡಿ, ಕಾಲು ಟೀಸ್ಪೂನ್ ಚೆಕ್ಕೆಯ ಪುಡಿ ಕಲಿಸಿಟ್ಟುಕೊಂಡು ದಿನವೂ ಒಂದು ಬಾರಿ ಒಂದು ಲೀಟರ್ ನೀರಿನಲ್ಲಿ ಅರ್ಧ ಟೀಸ್ಪೂನ್ ಈ ಮಿಶ್ರಣದ ಪುಡಿ ಯನ್ನು ಹಾಕಿ ಅರ್ಧಲೀಟರ್ ನೀರು ಮಿಗುಲುವಂತೆ ಸಣ್ಣ ನುರಿಯ ಮೇಲೆ ಮರಳಿಸಿ, ಇಳಿಸಿ,ಅದರಲ್ಲಿ 3 ಅಥವಾ 4 ಚಿಟಿಕೆ ಪಚ್ಚಕರ್ಪೂರ ಹಾಕಿ ಕಲಿಸಿ ಮುಚ್ಚಿಟ್ಟು ಬಿಸಿಯಾರಿದ ಬಳಿಕ ಶೋಧಿಸಿ ಶೇಖರಿಸಿಟ್ಟುಕೊಂಡು ರೋಗ ಬಾರದಂತೆ ಯಿರಲು ದಿನಕ್ಕೊಂದು ಸಾರಿ 100-150 ಮಿ.ಲೀ.ವರೆಗೂ ಕುಡಿಯಬೇಕು. ವ್ಯಾಧಿ ಸೋಂಕು ತಗುಲಿದರೆ ಈ ದ್ರವವನ್ನು 3-4 ಭಾಗಗಳನ್ನಾಗಿ ಮಾಡಿ, ದಿನವೂ 3 ಅಥವಾ 4 ಬಾರಿ ಸೇವಿಸಬೇಕು.

ದಿನವೂ ಮೂರು ಬಾರಿ ಬಾರಿಯೊಂದಕ್ಕೆ ಒಂದು ಲವಂಗ ಒಂದು ಏಲಕ್ಕಿ ನೆನೆಗಡಲೆಯಷ್ಟು ಚೆಕ್ಕೆಯನ್ನು ಬಾಯಲ್ಲಿ ಹಾಕಿ ಕೊಂಡು, ಅಗೆದು, ರಸವನ್ನು ನುಂಗುತ್ತಿದ್ದರೆ ಉಸಿರಾಟದ ಸಾಮರ್ಥ್ಯ ವೃದ್ಧಿಯಾಗುವುದಲ್ಲದೇ ರೋಗನಿರೋಧಕ ಶಕ್ತಿ ಬಲವಾಗಿ ಬೆಳೆಯುತ್ತದೆ.



ಧಾರಾವಾಹಿ - 2

# ಶ್ರೀವೇಂಕಟೇಶ್ವರಸ್ವಾಮಿ ಆಲಯ

- ಇಂಗ್ಲೀಷ್ ಮೂಲ : ಡಾ॥ ಎನ್.ರಮೇಶನ್

- ಕನ್ನಡಾನುವಾದ : ದಿ॥ ಜಿ.ಎನ್. ಶ್ರೀನಿವಾಸನ್

## ಅಧ್ಯಾಯ - ೨

### ಹವಾಮಾನ -

ಇಲ್ಲಿನ ಹವಾಮಾನ ಹದವಾಗಿ ಅನುಕೂಲವಾಗಿರುವುದು. ನಾಲ್ಕು ಋತುಗಳೂ ಕ್ರಮವಾಗಿ ಉಂಟಾಗುತ್ತವೆ. ಡಿಸೆಂಬರ್ - ಫೆಬ್ರವರಿ ತಿಂಗಳು ತಂಪಾಗಿದ್ದು, ಮಾರ್ಚ್-ಮೇ ತಿಂಗಳುಗಳು ಬೇಸಿಗೆಯಾಗಿಯೂ ಜೂನ್-ಸೆಪ್ಟೆಂಬರ್ ಮಧ್ಯದಲ್ಲಿ ನೈಋತ್ಯ ಪವನಗಳಿಂದಾಗಿ ಮಳೆಗಾಲವೂ ಅಕ್ಟೋಬರ್-ನವೆಂಬರ್ ಮಧ್ಯೆ,ಈಶಾನ್ಯ ಪವನಗಳಿಂದಾಗಿ ಮಳೆ ಸಾಧಾರಣವಾಗಿರುತ್ತದೆ.

### ಮಳೆ -

ವರ್ಷಕ್ಕೆ 34-35 ಅಂಗುಲ ಮಳೆಯಾಗುತ್ತದೆ. ಜೂನ್-ಸೆಪ್ಟೆಂಬರ್ ಮಧ್ಯದಲ್ಲಿ 64 ಶತಾಂಶ,ಮೇ ತಿಂಗಳಿನಲ್ಲಿ ಗಾಳಿಯೊಡನೆ ಸೇರಿದ ಸ್ವಲ್ಪ ಮಳೆಯುಂಟು. ಮುಂಗಾರು ಹೋದ ನಂತರ ಅಕ್ಟೋಬರ್- ನವೆಂಬರ್‌ನಲ್ಲಿ ಮುಖ್ಯವಾದ ಮಳೆಗಾಲ.ಆದರೂ ಒಂದು ಸಂವತ್ಸರ ಹೆಚ್ಚಿನ ಮಳೆಯಾದರೆ ಇನ್ನೊಂದು ವರ್ಷ ಸಾಧಾರಣವಾಗಿ ಇರುವುದು. ಈ ಪ್ರದೇಶದ ಕಣಿವೆಗಳು ವಾಸಯೋಗ್ಯವಾಗಿ ಚೆನ್ನಾಗಿವೆ.ತಿರುಪತಿಯ ಬೆಟ್ಟದ ಮೇಲೆ ಹೆಚ್ಚಿಗೆ ಅನಾರೋಗ್ಯಕರವಾಗಿ,ಕೆಲವು ವರ್ಷಗಳ ಹಿಂದಿನವರೆಗೆ ಮಲೇರಿಯಾ ಜ್ವರದ ಹಾವಳಿಯ ಭಯವಿದ್ದಿತು.

ಚಿತ್ತೂರು ಮಂಡಲದಲ್ಲಿ ವಾರ್ಷಿಕ ವರ್ಷಪಾತ ಅತಿ ಕಡಿಮೆಯಿದ್ದದ್ದರಿಂದ ಇಲ್ಲಿ ಹೆಚ್ಚಿಗೆ ಅನಾವೃಷ್ಟಿ ಮೂಲವಾದ ಕ್ಷಾಮಗಳು ಸಂಭವಿಸುತ್ತಿವೆ. ನೈಋತ್ಯ ಋತುಪವನಗಳಿಗಿಂತ ಈಶಾನ್ಯ ಪವನದಿಂದಾಗಿ ಇಲ್ಲಿ ಮಳೆ ಹೆಚ್ಚು. ಪಶ್ಚಿಮದಲ್ಲಿನ ವಾಯಲ್ಪಾಡು, ಮದನಪಲ್ಲಿ,ಪುಂಗನೂರು,ಪಲಮನೇರು,ಕುಪ್ಪಂ ಪ್ರಾಂತಗಳಲ್ಲಿ ಅನಾವೃಷ್ಟಿ ಹೆಚ್ಚು. ಈಶಾನ್ಯದಲ್ಲೂ ಸಹ ಆಗಾಗ್ಗೆ ಕ್ಷಾಮ, ಬಂಗಾಳಕೊಲ್ಲಿಯಲ್ಲಿ ಮದ್ರಾಸು ಸಮೀಪದಲ್ಲಿ ಉಂಟಾಗುವ ಅಲ್ಪಪೀಡನೆಯಿಂದ,ಉಂಟಾಗುವ ಮಳೆಗಳು ಕೆಲಮಟ್ಟಿಗೆ ಸಹಾಯಕವಾಗುತ್ತವೆ.

### ಉಷ್ಣೋಗ್ರತೆ -

ವರ್ಷದಲ್ಲಿ ಉಷ್ಣೋಗ್ರತೆ ಸಾಮಾನ್ಯವಾಗಿ 18 ಡಿಗ್ರಿಯಿಂದ 42 ಡಿಗ್ರಿ ಸೆಂಟಿಗ್ರೇಡ್‌ವರೆಗೆ ನವೆಂಬರ್‌ನಿಂದ ಫೆಬ್ರವರಿ ಮಧ್ಯದವರೆಗೆ ಅತಿಶೀತಲವಾಗಿರುತ್ತದೆ.ಡಿಸೆಂಬರಿನಲ್ಲಿನ

ಅತ್ಯಧಿಕ ಉಷ್ಣ 25-3 ಸೆಂ (77.5ಫ್ಯಾ)ಕನಿಷ್ಟ 15.5ಸೆಂ.(59.5ಫ್ಯಾ) ಫೆಬ್ರವರಿಯ ನಂತರ ವಾತಾವರಣ ಬಿಸಿಯೇರುತ್ತದೆ. ಏಪ್ರಿಲ್ ಮೇ ತಿಂಗಳಲ್ಲಿ ರಾತ್ರಿಗಳಲ್ಲಿ ಉಷ್ಣೋಗ್ರತೆ ತೀವ್ರ. ಮೇ ತಿಂಗಳ ಸರಾಸರಿ 23 ಸೆಂಟಿಗ್ರೇಡ್. ಹಲವು ದಿನಗಳಲ್ಲಿ ಧೂಳು ಗಾಳಿಗಳಿಂದ ಕೂಡಿದ ಮಳೆಯೂ ಉಂಟು. ಹಾಗಾಗಿ ಸ್ವಲ್ಪ ತಂಪೂ ಆಗುತ್ತದೆ. ಜೂನ್ ಮೊದಲವಾರದಲ್ಲಿ ನೈಋತ್ಯ ಪವನಗಳಿಂದಾಗಿ ಮಳೆ ಸಂಭವವಾಗಿ ಸ್ವಲ್ಪ ತಂಪೂ ಆಗುತ್ತದೆ. ವರ್ಷಋತು ಬೇಸಿಗೆಗಿಂತ ಅನುಕೂಲಕರವಾಗಿರುವುದು. ಅಕ್ಟೋಬರ್ ನಂತರ ರಾತ್ರಿಗಳ ಹೊತ್ತು ತಂಪಾಗಿರುತ್ತದೆ.

**ಆರ್ದ್ರತೆ –**

ಸಾಧಾರಣವಾಗಿ ಜುಲೈ ಡಿಸೆಂಬರ್‌ಗಳ ಮಧ್ಯೆ ವಾತಾವರಣದಲ್ಲಿ 70 ರಿಂದ 80 ಶತಾಂಶ ಆರ್ದ್ರತೆ ಬೆಳಗ್ಗೆ ಹೊತ್ತಿನಲ್ಲಿ ಹಾಗೂ ಮಧ್ಯಾಹ್ನಗಳಲ್ಲಿ 60 ರಿಂದ 65 ಶತಾಂಶ ಒಣಹವೆಯಿಂದ ಕೂಡಿರುವುದು. ಈ ಕಾಲದಲ್ಲಿ ತೇವಾಂಶ 25 ರಿಂದ 40 ಶತಾಂಶವಿರುತ್ತದೆ.

**ಮೋಡಗಳು–**

ಜೂನ್‌ನಿಂದ ನವೆಂಬರ್‌ವರೆಗೆ ಮೋಡ ಕವಿದ ವಾತಾವರಣ. ಹಲವು ದಿನಗಳಲ್ಲಿ ಪೂರ್ತಿಮೋಡಗಳು. ಮಿಕ್ಕ ದಿನಗಳಲ್ಲಿ ತಿರುಮಲೆಯ ಆಕಾಶವೆಲ್ಲ ಪೂರ್ತಿಯಾಗಿ ಶುಭ್ರವಾಗಿರುತ್ತದೆ.

**ಮಾರುತಗಳು –**

ಇಲ್ಲಿನ ಗಾಳಿ ಹೆಚ್ಚು ಹಗುರವಾಗಿಯೂ,ಕೆಳಮಟ್ಟದಲ್ಲಿಯೂ ಸಂಚರಿಸುತ್ತದೆ. ಮೇ ನಿಂದ ಸೆಪ್ಟೆಂಬರ್‌ವರೆಗೆ ನೈಋತ್ಯದಿಂದಲೂ ಈಶಾನ್ಯದಿಂದಲೂ ಬೀಸುತ್ತವೆ. ಅಕ್ಟೋಬರ್ ಜನವರಿಗಳ ನಡುವೆ ವಾಯುವ್ಯ, ಪೂರ್ವ ದಿಸೆಗಳಲ್ಲಿಯೂ, ಆನಂತರದ ಮೂರು ತಿಂಗಳು ಈಶಾನ್ಯ ದಿಸೆಯಲ್ಲೂ ಉಂಟಾಗುತ್ತವೆ.

**ಭೂ ಸ್ವಭಾವ–**

ಇಲ್ಲಿನ ಭೂಗರ್ಭಶಿಲಾ ಸ್ವಭಾವ ಮೂರು ವಿಧವಾಗಿ ಕಂಡುಬರುತ್ತದೆ. ಜೆವಾಡಿ ರೀತಿಯ ಶಿಲೆ ಪೂರ್ವದ ಕಣಿವೆಗಳಲ್ಲೂ ಅವುಗಳ ಹಾಸುಗಲ್ಲು ಜಾತಿಯ ಶಿಲೆಗಳು ಆಗ್ನೇಯಭಾಗದಲ್ಲಿ ಅಲ್ಲಲ್ಲಿ ಹೆಚ್ಚು ಬೆಳೆಯದ ಕಿರು ಬೆಟ್ಟಗಳಾಗಿವೆ. ಈ ಕಲ್ಲುಗಳ ನಡುವೆ ಉತ್ತಮವಾದ ಹುಲ್ಲು ಬೆಳೆದು ಪಶುಗ್ರಾಸವಾಗುತ್ತದೆ. ಇದನ್ನು ಸಾಧಾರಣವಾಗಿ ಸುಟ್ಟು ಬಿಡುತ್ತಿದ್ದರು. ಆದು ಬೂದಿಯಾಗಿ ಮಣ್ಣಿನಲ್ಲಿ ಸೇರುತ್ತಿದ್ದು,ಮಳೆಯಾದ ನಂತರ ಮತ್ತೆ ಹಸಿರು ಹುಲ್ಲು ಮೊಳಕೆಯೊಡೆಯುತ್ತದೆ. ಹೀಗಾಗಿ ಒಣ ಹುಲ್ಲನ್ನು ಸುಡುವಾಗ ಗಿಡಗಳ ಬೆಳವಣಿಗೆಗೆ ಅಡ್ಡಿಯೊದಗಿ ಇಲ್ಲಿನ ಸಸ್ಯಗಳೆಲ್ಲ ಗಿಡ್ಡಾದ ಸಸ್ಯಗಳಾಗಿವೆ. ಅಲ್ಲಲ್ಲಿ ಮಾತ್ರ ಎತ್ತರವಾದ ಮರಗಳನ್ನು ಕಾಣಬಹುದು.

ಹಾಸುಗಲ್ಲುಗಳ ನಿಕ್ಷೇಪದೊಡನೆಯೇ ವಿಸ್ತಾರವಾದ ಅಡ್ಡಗಲ್ಲುಗಳೂ ಇಲ್ಲಿ ಕಂಡು ಬರುತ್ತವೆ. ಇಂತಹ ಅಡ್ಡವರಸೆಗಳು ಹಲವಾರು ಮೈಲಿ ಉದ್ದಕ್ಕೆ ವಿಸ್ತರಿಸಿರುವುದನ್ನು ಕಾಣಬಹುದು. ಇವೆಲ್ಲ ಪೂರ್ವ ಪಶ್ಚಿಮವಾಗಿಯೇ ವ್ಯಾಪಿಸಿದ್ದು ಬೆಟ್ಟಗಳ ಮೇಲೆ ನೇರವಾಗಿ ತಲೆಯೆತ್ತಿ ನಿಂತಿವೆ. ಈ ಅಡ್ಡುಗಲ್ಲುಗಳು ಬಹುಕಠಿಣವಾಗಿದ್ದು ಹಾಸುಗಲ್ಲುಗಳ ನಿರ್ಮಾಣಕ್ಕೆ ಮೂಲಾಧಾರವಾಗಿವೆ.

ಇಲ್ಲಿನ ಶಿಲಾಭಾಗದಲ್ಲಿ ನೊರಜುಕಲ್ಲುಗಳು, ಮರಳುಕಲ್ಲುಗಳು ಬೆರೆತು ಸಿಡಿಗಲ್ಲುಗಳಾಗಿರುವುದನ್ನು ಕಾಣಬಹುದು. ಇವುಗಳಲ್ಲಿ ಸುಣ್ಣದ ಕಲ್ಲು,ಲಾವಾ ಜಾತಿಗೆ ಸೇರಿದ ಕಲ್ಲುಗಳನ್ನೂ ನೋಡಬಹುದು. ತಿರುಪತಿ ಬೆಟ್ಟಗಳ ದಕ್ಷಿಣ ಪಾದ ಭೂಮಿಯಲ್ಲಿ ನಗರಿ ಬೆಟ್ಟಗಳಲ್ಲಿಯಂತೆಯೇ ಅತಿ ವಿಶಾಲವಾದ,ತುಸು ಮೃದುವಾದ ಮರಳುಗಲ್ಲುಗಳು ನೂರಾರು ಅಡಿ ಮಂದವಾಗಿ ವಾಯುವ್ಯ ದಿಕ್ಕಿನಲ್ಲಿ ಎರಡು ಮೂರು ಮೈಲಿಗಳವರೆಗೆ ವ್ಯಾಪಿಸಿದೆ. ಇದು ಸಾಧಾರಣವಾಗಿ ಕಲ್ಲಿದ್ದಲ ಗಣಿಗಳ ಪ್ರಾಂತದ ಕಲ್ಲುಗಳನ್ನು ಹೋಲಿರುತ್ತದೆ.

ಇವುಗಳ ಜೊತೆಗೇ ಕಾಳಹಸ್ತಿ ಪ್ರದೇಶದಲ್ಲಿ ಹಲವು ಹಾಸುಗಲ್ಲುಗಳನ್ನು ಕಾಣಬಹುದು. ಈ ಪ್ರದೇಶ ಸಮುದ್ರ ತೀರದಿಂದ ಹತ್ತಿರವಾಗಿದ್ದು, ಇಲ್ಲಿನ ಭೂಗರ್ಭ ಸ್ವಭಾವ ಮದರಾಸಿನದರಂತೆಯೇ. ನೆಲ ಕೆಂಪು ಮಣ್ಣಿನಿಂದ ಕೂಡಿದ್ದು ಮರಳು ಸಹ ಕಂಡುಬರುವುದು. ಈ ಭಾಗದಲ್ಲಿನ ಹಾಸುಗಲ್ಲುಗಳು ನೀರ ಪೆಟ್ಟುತಿಂದು, ನುಣ್ಪನ್ನು ಹೊಂದಿವೆ. ನಗರಿಯ ಬಳಿಯಲ್ಲಿನ ಹಾಸು ಗಲ್ಲುಗಳು ವಿಶಾಲವಾಗಿಯೂ,ಅಸಂಖ್ಯಾಕವಾಗಿಯೂ ಇದ್ದರೂ, ಹೋಗಹೋಗುತ್ತ ಅವುಗಳ ಗಾತ್ರ ಸಂಖ್ಯೆ ತಗ್ಗುತ್ತ ತೀರ ಪ್ರಾಂತವನ್ನು ಸೇರುವಲ್ಲಿ ಕೇವಲ ನೊರಜು ಕಲ್ಲುಗಳಂತೆ ಸಣ್ಣ ಸಣ್ಣ ಗುಡ್ಡಗಳಾಗಿವೆ. ಭೂಮಿಯ ಮೇಲ್ಭಾಗವನ್ನು ಅಗೆದಾಗ ಮೊದಲಿಗೆ ಮೃದುವಾಗಿದ್ದರೂ ಗಾಳಿಯು ಸೋಕಿದ ನಂತರ ಗಟ್ಟಿಯಾಗುತ್ತದೆ. ಇದರಿಂದಾಗಿ ಕೆರೆ ಕಟ್ಟೆಗಳು,ಬಾವಿಯ ಅಂಚುಗಳು, ಗೃಹ ನಿರ್ಮಾಣದಲ್ಲಿ, ಹೊಲಗದ್ದೆಗಳ ಬದುವಿನಲ್ಲಿ ಉತ್ತಮ ಸಾಧನ ಸಾಮಾಗ್ರಿಯಾಗುತ್ತದೆ.

ತಿರುಮಲೆಯ ಬೆಟ್ಟವನ್ನೇರುವ ಯಾತ್ರಿಕರು, ಅನೇಕ ಕಡೆ,ಬೃಹತ್ ಬೆಣಚುಗಲ್ಲುಗಳು ಕಾಲಾಂತರದಲ್ಲಿ ಕರಗಿ ಗೋಡೆಗಳಂತಾಗಿರುವುದರಿಂದಾಗಿರುವ ಅತಿ ಸುಂದರ ದೃಶ್ಯಗಳನ್ನು ವೀಕ್ಷಿಸುವರು. ಈ ಬೃಹತ್ ಶಿಲಾ ಖಂಡಗಳು ತುಸು ಮಸಕು ಬಣ್ಣದವಾಗಿ, ಸೀಳು ಸೀಳಾಗಿ, ಅತಿ ಮಂದವಾದ ಹಾಸುಗಳಂತೆ ಕಂಡುಬರುತ್ತವೆ. ಬಹುತೇಕ ಎಲ್ಲ ಶಿಲಾಖಂಡಗಳೂ,ಕೆಮ್ಮಣ್ಣು ಅಥವಾ ಮಸಕು ಕಿತ್ತಳೆ ವರ್ಣದವು. ಮುಖ್ಯ ಗಿರಿಪಂಕ್ತಿ ದಕ್ಷಿಣದತ್ತ ಮುಖ ಮಾಡಿದ್ದು ಅಲ್ಲಲ್ಲಿ ಗೋಡೆಯಂತೆ ನಿಂತಿರುವುದನ್ನು ಕಾಣುವೆವು.

ನಗರಿ ಬೆಣಚುಗಲ್ಲುಗಳ ಮೇಲ್ಟೆ ಲಕ್ಷಣಗಳನ್ನುಳ್ಳ ಬೆಣಚುಗಲ್ಲು ಪದರುಗಲ್ಲುಗಳಿಂದಲೇ ತಿರುಮಲೆಯ ಪರ್ವತಗಳಗಷ್ಟು ಶಿಲೆಗಳು ರೂಪ ತಾಳಿವೆ. ತಿರುಮಲೆಯ ದಕ್ಷಿಣ ಪಶ್ಚಿಮಗಳ ಮುಖ್ಯ ಅಮುಖ್ಯ ಗಿರಿಪಂಕ್ತಿಗಳ ಕಲ್ಲುಗಳು ಹಾಗೂ ತಿರುಮಲೆಯ ದಕ್ಷಿಣ ಹಾಗೂ ಪಶ್ಚಿಮದ ತಳಭಾಗದಲ್ಲೂ ಪದರುಗಲ್ಲುಗಳ ಮೇಲೆ ಈ ಬೆಣಚುಗಲ್ಲುಗಳು ನಿಂತಿವೆ. ಈ ನಗರಿ ಬೆಣಚುಗಲ್ಲುಗಳು ಕಡಪ ತಳಹದಿಯೆಂದು ಹೆಸರಾಗಿ ಪಶ್ಚಿಮದಲ್ಲಿ ದ್ರೋಣಾಚಲದವರೆಗೆ ಉತ್ತರದಲ್ಲಿ ಶ್ರೀಶೈಲದಾಚೆಯವರೆಗೆ, ಪೂರ್ವದಲ್ಲಿ ಜಗ್ಗಯ್ಯಪೇಟ,ವಿನುಕೊಂಡ,ಉದಯಗಿರಿ, ವೆಂಕಟಗಿರಿಗಳವರೆಗೂ ಹರಡಿರುವ ಅರ್ಧವೃತ್ತಾಕಾರದ ಪರ್ವತ ಪ್ರದೇಶದ ಭಾಗವಾಗಿದೆ. ಡೋಲರೈಟ್, ಗ್ರಾನೈಟ್‌ಗಳ ತಳಪಾಯದ ಮೇಲಿರುವ ಈ ಭಾಗ 2500 ಮಿಲಿಯ ವರ್ಷಗಳಷ್ಟು ಹಳೆಯದು. ಕಡಪ ತಳದ ಪ್ರಾಚೀನತೆ 1700 ಮಿಲಿಯ ವರ್ಷಗಳಾದರೆ ನಗರಿ ಬೆಣಚುಗಲ್ಲು ತಳ 1500 ಮಿಲಿಯ ವರ್ಷಗಳಷ್ಟು ಹಳೆಯದಾಗಿ, ತಳದ್ದು ಮೇಲಿನಗಷ್ಟು ಶಿಲೆಗೂ ನಡುವಣ ಕಾಲ ವ್ಯತ್ಯಾಸದಿಂದಾಗಿ ಇದನ್ನು 'ಅಪಾರ್ಚಿಯನ್ ಅನ್ ಕನ್‌ಫರ್ಮಿಟಿ' ಎಂದು ಗುರುತಿಸಲಾಗಿದೆ. ತಿರುಮಲೆಯಗಷ್ಟು ಶಿಲೆಯ ಒಂದು ಭಾಗದಲ್ಲಿ ರಾಷ್ಟ್ರೀಯ ಭೌಗೋಳಿಕ ಸರ್ವೇಯವರು ಈ ಅಂಶವನ್ನು ಅವಧಾರಿಸಿದ್ದಾರೆ. ಹೊಸ ಘಟ್ಟದ ರಸ್ತೆಯಲ್ಲಿ 18 ನೇ ಕಿ.ಮೀ.ಬಳಿ ಘಟ್ಟದ ಶಿರವನ್ನು ಮುಟ್ಟುವ ಸ್ಥಳದಲ್ಲಿ ಈ ಕೇಂದ್ರವಿದೆ.


ನಗರಿ ಬೆಣಚುಗಲ್ಲಿನ ಆರಂಭ ತಿರುಮಲೆಯ ಪರ್ವತದಲ್ಲಿ ಉಂಟಾಗಿ ಪೂರ್ವಕ್ಕೆ ಸರಿದು ಕಪಿಲ ತೀಥದ ಬಳಿ ನೆಲಮಟ್ಟವನ್ನು ಸೇರಿ ಇನ್ನೂ ಮುಂದೆ ಭೂಗರ್ಭವನ್ನು ಸೇರುತ್ತದೆ. ನಗರಿ ಬೆಣಚು ಗಲ್ಲುಗಳು, ಪದರು ಗಲ್ಲುಗಳು,ಹಾಸುಗಲ್ಲುಗಳು ಹೆಚ್ಚು ಕಡಿಮೆ ನೇರವಾದ ಸಾಲಿನಲ್ಲಿ ಹಲವಾರು ಕೊರಕಲು ಗಳನ್ನುಂಟು ಮಾಡಿವೆ.ಇಂತಹ ಒಂದು ಕೊರಕಲು ತಿರುಮಲೆಯ ಆಲಯದ ಪ್ರಾಂತದಲ್ಲಿದ್ದರೆ ಮತ್ತೊಂದು ಅವ್ವಚಾರಿ ಬೆಟ್ಟದಲ್ಲಿದೆ. ಮತ್ತೊಂದು ತಿರುಪತಿಯ ಉತ್ತರಕ್ಕೆ ಮುಂದುವರೆದು ಕರಕಂಬಾಡಿ ಏರ್ಪೇಡುಗಳತ್ತ ನಡೆಯುತ್ತದೆ. ಕೊರಕಲುಗಳು ಸಾಮಾನ್ಯವಾಗಿ ಜಲ ಸಂಚಾರಕ್ಕೆ ಅವಕಾಶ ಮಾಡಿಕೊಡುತ್ತವೆ. ತಿರುಮಲೆಯ ಕೊರಕಲು ತಿರುಪತಿ ತಿರುಮಲೆಗಳಲ್ಲಿನ ನೀರಿನ ಸಂಗ್ರಹಕ್ಕೆ ಅವಕಾಶ ಮಾಡಿಕೊಟ್ಟಿವೆ.

ನಗರಿ,ನಾರಾಯಣವನಗಳ ಬೆಟ್ಟಗಳ ಮೇಲು ಭಾಗವು,ಎಂದರೆ ಕಾಳಹಸ್ತಿ ಪುತ್ತೂರುಗಳ ನಡುವೆಯಿರುವ ಸ್ವರ್ಣಮುಖಿ, ಅರಣಿ ನದಿಗಳ ನಡುಭಾಗವೂ ನಗರಿ ಬೆಣಚುಗಲ್ಲಿನಿಂದಲೇ ಕೂಡಿದ್ದು ಬೆಟ್ಟಗಳ ತಳಭಾಗ ಪದರುಗಲ್ಲುಗಳಿಂದ ಕೂಡಿದೆ. ಕಡಪ ತಳದ ಸೀಮೆಗಳು ತಿರುಮಲೆ-ತಿರುಪತಿಗಳ ದಕ್ಷಿಣಕ್ಕೆ ಗಣನೀಯವಾಗಿ ವಿಸ್ತರಿಸಿದ್ದು ನಗರಿ ನಾರಾಯಣವನಗಳಲ್ಲಿನ ಬೆಟ್ಟಗಳು ಕೊರಕಲಿಗೂ ಸವೆತಕ್ಕೂ ಈಡಾಗಿದೆ. ತಿರುಮಲೆಯ ಪರ್ವತಾವಳಿ ನೆಮ್ಮಿನಿಂತ ಮಲೆಗಳಾದರೆ ಪದರುಗಲ್ಲುಗಳು ಹಾಸುಗಲ್ಲುಗಳು ಒಟ್ಟಿಗೆ ಗುಡ್ಡಗಳಾಗಿ ವಿಸ್ತರಿಸಿವೆ. ಕಾರಣ ಇಲ್ಲಿನ ಶಿಲೆಗಳಲ್ಲಿನ ವ್ಯತ್ಯಾಸ.ಬೆಣಚುಗಲ್ಲುಗಳು ಜಾರುಜಾರಾಗಿ,ನಿಲುವು ಜೋಡಣೆಯಿಂದಾಗಿ ಶಿಖರಗಳ ನಿರ್ಮಾಣವಾಗಿವೆ. ಪದರುಗಲ್ಲು ಬೆಣಚುಗಲ್ಲಿಗಿಂತ ಬೇಗ ಜೀರ್ಣವಾಗುವ ಗುಣ ಹೊಂದಿರುವುದರಿಂದ ಹೀಗೆ ಆಗಿದೆ. ಅನೇಕ ಕಡೆ ಪದರುಗಲ್ಲುಗಳಿಗೆ ಬೆಣಚುಗಲ್ಲು ರಕ್ಷಣೆ ಕವಚವಾಗಿದೆ.ತಿರುಮಲೆಯ ಆಲಯದ ಉತ್ತರ ಭಾಗದಲ್ಲಿ ನಗರಿ ಬೆಣಚುಗಲ್ಲು ಪ್ರಾಕೃತಿಕ ಜೀರ್ಣತೆಗೆ ಒಳಗಾಗಿ ಒಂದು ಸಹಜ ಶಿಲಾತೋರಣವನ್ನುಂಟಾಗಿಸಿದೆ.ಇದು ಸ್ವಾಮಿ ಆಲಯಕ್ಕೆ ಪ್ರಕೃತಿ ನೀಡಿದ ಕೊಡುಗೆ. ಶ್ರೀ ಸಾಮಾನ್ಯನಿಗೆ ಆಸಕ್ತಿಕರ ಅಂಶವಾಗಿ ವಿಜ್ಞಾನಿಗೆ ಪ್ರಮುಖವಾದ ಅಂಶವಾಗಿದೆ. ಹೀಗಾಗಿ ಈ ಅಪುರೂಪದ ಕೊಡುಗೆಯನ್ನು ರಾಷ್ಟ್ರೀಯ ಸ್ಮಾರಕವಾಗಿ ಕಾಯ್ದುಕೊಳ್ಳಬೇಕು. ತಿರುಮಲೆಯ ಪೂರ್ವದಲ್ಲಿ ಜೀರ್ಣವಾದ ಶಿಲೆಗಳಿಂದಾಗಿ ನೇರವಾದ ಕೊರಕಲುಗಳುಂಟಾಗಿದ್ದರೆ ತಿರುಮಲೆಯ ಪಶ್ಚಿಮಕ್ಕೆ ತುಸುವೆ ಜಾರಿದ ಕೊರ ಕಲ್ಲುಗಳಾಗಿವೆ.

(- ಮುಂದುವರಿಯುವುದು)



## ಪುಸ್ತಕ ವಿಮರ್ಶೆ




**ಪುಸ್ತಕದ ಹೆಸರು :** ಶ್ರೀ ವೇದವ್ಯಾಸ (ಪೌರಾಣಿಕ ಕಾದಂಬರಿ)

**ಲೇಖಕರು :** ಅಂಬ್ರಯ್ಯಮಠ

**ದೂರವಾಣಿಸಂಖ್ಯೆ:** 9480402712

**ಪುಟಗಳು :** 500

**ಬೆಲೆ :** ರೂ. 450/-

**ಮುದ್ರಣ:** ಗಾಯತ್ರಿ ಪ್ರಿಂಟ್ಸ್, ಮೈಸೂರು

"ವೇದವ್ಯಾಸ" ಬಿದನೂರು ನಗರದ ಶ್ರೀಅಂಬ್ರಯ್ಯಮಠ ಇವರ ಪೌರಾಣಿಕ ಕಾದಂಬರಿ. ಮೈಸೂರಿನ ರಿಯಾ ಬುಕ್ ಹೌಸ್ ಪ್ರಕಟಿಸಿದ್ದಾರೆ. ೫೦೦ ಪುಟಗಳ ಬೃಹತ್ ಕೃತಿಯಿದು. ವೇದವ್ಯಾಸರಿಗೆ ಸಂಬಂಧಿಸಿದ ಮುಖ್ಯ ಕಥೆಯನ್ನು ಉಪಕಥೆಗಳ ಮೂಲಕ ವಿಸ್ತರಿಸುತ್ತ ಪಾತ್ರಗಳಿಂದ ಆಗಾಗ್ಗೆ ಆತ್ಮಾವಲೋಕನ ಮಾಡಿಸಿಕೊಳ್ಳುತ್ತ ನಮಗೆ ತಿಳಿಯದಿರುವ ಅದೆಷ್ಟೋ ವಿಷಯಗಳನ್ನು ತಿಳಿಸುತ್ತ, ನಮ್ಮಲ್ಲಿ ಹೊಸಹೊಸ ಪ್ರಶ್ನೆ ಹುಟ್ಟಿಕೊಳ್ಳುವಂತೆ ಮಾಡುತ್ತ ವೇದವ್ಯಾಸರನ್ನು ಹಲವು ಮಗ್ಗಲುಗಳಿಂದ ವೀಕ್ಷಿಸಿ ಪರಿಚಯಿಸಿಕೊಳ್ಳುವಂತೆ ಕೃತಿಕಾರರು ಕಾದಂಬರಿಯನ್ನು 'ಅನನ್ಯ' ಎನ್ನುವಂತೆ ರಚಿಸಿದ್ದಾರೆ. ಹಾಗಾಗಿ ಈ ಕಾದಂಬರಿ ವ್ಯಾಸಮುನಿಯ ವಿರಾಟ್ ಅನಾವರಣವಾಗಿದೆ.

ಕಾದಂಬರಿಕಾರರು ವೇದವ್ಯಾಸರು ಪ್ರಜ್ವಲಿಪ ಜ್ಞಾನಸೂರ್ಯ! ಅವರನ್ನು ಹಿಡಿದು ತೋರಿದ್ದೇನೆಂದು ಹೇಳುವುದು ಒಂದು ದೀಪವನ್ನು ಎತ್ತಿ ಹಿಡಿದು "ಇದೇ ಸೂರ್ಯ"ನೆಂದು ತೋರಿಸುವ ವ್ಯರ್ಥ ಪ್ರಯತ್ನದಂತೆ ನನ್ನೀಕೃತಿ ಎಂದು ಹೇಳಿದ್ದರೂ ವ್ಯಾಸ ಮುನಿಗಳನ್ನು ಪ್ರಜ್ವಲಿಪ ಪ್ರದೀಪನಾಗಿ ತೋರುವಲ್ಲಿ ಈ ಕಾದಂಬರಿ ಪೂರ್ಣ ಯಶಸ್ವಿಯಾಗಿದೆ. ಇಲ್ಲಿ ಕಾಣದ ವ್ಯಾಸ ಮತ್ತೆಲ್ಲೂ ಕಾಣಿಸಲಿಕ್ಕಿಲ್ಲ ಎಂಬಂತೆ ವ್ಯಾಸಮುನಿ ನಮಗಿಲ್ಲಿ ಗೋಚರಿಸಿದ್ದಾರೆ.

ವೇದವ್ಯಾಸರಿಗೆ ಹುಟ್ಟಿನಿಂದ ಕೊನೆಯವರೆಗೆ ಅನೇಕ ವಿಶೇಷತೆಗಳು ಅಂಟಿಕೊಂಡಿವೆ. ಇವರ ತಾಯಿ ಸಾಮಾನ್ಯ ದಾಶರಾಜನ ಪುತ್ರಿ ಕಾಳಿ. ತಂದೆ ವಸಿಷ್ಠಮುನಿಯ ವಂಶಜ ಮಹಾನ್ ತಪಸ್ವಿ ಪರಾಶರ. ಶ್ರೇಷ್ಠ ವಿದ್ವಾಂಸ ಪರಾಶರರ ಪುತ್ರನಾಗಿಯೂ ವ್ಯಾಸ ಶಿಕ್ಷಣ ಪಡೆದದ್ದು ಮಹಾ ಮುನಿ ಬದರಿ ಅವರಲ್ಲಿ 'ವೇದ-ಒಂದು ಅವಲೋಕನ ಕೃತಿಯನ್ನು ವ್ಯಾಸ ರಚಿಸಿದ್ದು ತಮ್ಮ ೧೮ನೆಯ ವಯಸ್ಸಿನಲ್ಲಿ.ಇವರು ಕಂಠಸ್ಥವಾಗಿದ್ದ ವೇದಗಳನ್ನು ಗ್ರಂಥಸ್ಥ ಮಾಡುವ ಮಹಾನ್ ಕಾರ್ಯಕ್ಕೆ ಕೈ ಹಾಕಿದವರು. ತಮ್ಮ ಕಾರ್ಯದಲ್ಲಿ ಯಶಸ್ವಿಯಾಗಿ ವೇದವ್ಯಾಸ ಎನಿಸಿಕೊಂಡವರು. ಮಾತೆಗೆ ಕೊಟ್ಟ ಮಾತನ್ನು ನಡೆಸಲು ಬ್ರಹ್ಮಚಾರಿಯಾಗಿದ್ದೂ ಮೂರು ಗಂಡು ಮಕ್ಕಳ ತಂದೆಯಾಗ ಬೇಕಾಗಿ ಬಂದದ್ದು ಇವರ ಬದುಕ ವಿಶೇಷ . ಇದೇ ಮುಂದೆ ಕುರುಸಂತತಿಯ ವಿನಾಶವ ನೋಡುವಂತೆ ಮಾಡಿದ್ದು! ತನ್ನಿಂದ ಹುಟ್ಟಿದ ಮಕ್ಕಳ ಸಂತಾನ ಮುಂದೆ ತಾವೇ ಬಡಿದಾಡಿ ಸಾಯುವುದನ್ನು ನೋಡುವ ದೌರ್ಭಾಗ್ಯ ವ್ಯಾಸರಿಗೆ ಒದಗಿ ಬಂದದ್ದು 'ವಿಧಿಯಿಚ್ಛೆ' ಎನ್ನಬಹುದು.

ಬ್ರಹ್ಮಸೂತ್ರ ಬ್ರಹ್ಮ ಪುರಾಣ ಎಂಬ ಮಹಾಗ್ರಂಥ, "ಜಯ" ಎಂಬ ಮಹಾ ಕಾವ್ಯ, ರಚಿಸಿದವರಿವರು. 'ಜಯ' ಎಂದರೆ ಕೇವಲ ಇತರರ ಮೇಲಿನ ಗೆಲುವಲ್ಲ,ಬದಲು ತನ್ನನ್ನು ತಾನು ಗೆಲ್ಲುವುದು ಅಂದರೆ ಆತ್ಮಜಯ ಎಂಬುದಾಗಿದೆ.ಇದೇ ಮಹಾಭಾರತ ಅಂದರೆ ಇವರ ಜಯ ಕಾವ್ಯದ ದಿವ್ಯ ಸಂದೇಶ.ವೇದವ್ಯಾಸ ಕೃತಿಕರ್ತೃ ಶ್ರೀಅಂಬಯ್ಯಮಠ ಅವರಿಗೆ ಹಾರ್ದಿಕ ಅಭಿನಂದನೆಗಳು. ನಾವೆಲ್ಲ ಓದಲೇ ಬೇಕಾಗಿರುವ ಕೃತಿಯಿದು ಓದುವಾಸೆ ನಿಮಗೂ ಮೂಡಿದರೆ ಅವರ ೯೪೮೦೪೦೨೭೧೨ ಮೊ ಸಂಖ್ಯೆಗೆ ಕರೆ ಮಾಡಿ. ಕೃತಿಯನ್ನು ತರಿಸಿಕೊಳ್ಳಿ. ಓದಿ ಪ್ರಬುದ್ಧತೆಯೆಡೆಗೆ ಹೆಜ್ಜೆ ಹಾಕಿ. ವ್ಯಾಸಮುನಿಯನ್ನು ಪರಿಚಯಿಸಿಕೊಂಡು ಭಾರತೀಯರ ಘನ ಪರಂಪರೆಯ ಆನಂದವನ್ನು ಆಸ್ವಾದಿಸಿ ಬೀಗಿ.ಬಾಗಿ. ಮಾನವ ಬದುಕ ನಿಜಾರ್ಥ ಮನಗಾಣಿ. ಇದು ನಶ್ವರ ಬದುಕ ಶಾಶ್ವತ ಚೇತನವಾಗಿ ಪೊರೆಯುತ್ತದೆ.

# ಶ್ರೀ ಲಕ್ಷ್ಮೀ ನೃಸಿಂಹ ಕರಾವಲಂಬ ಸ್ತೋತ್ರ

(ತಾತ್ಪರ್ಯದ ಸಮೇತ)

ಶ್ಲೋ ॥ ಶ್ರೀಮತ್ಪಯೋನಿಧಿ ನಿಕೇತನ ಚಕ್ರಪಾಣೇ!
ಭೋಗೀಂದ್ರ ಭೋಗಮಣಿರಂಜಿತ ಪುಣ್ಯಮೂರ್ತೇ!
ಯೋಗೀಶ! ಶಾಶ್ವತ! ಶರಣ್ಯ! ಭವಾಬ್ಧಿಪೋತ !
ಲಕ್ಷ್ಮೀನೃಸಿಂಹಂ! ಮಮ ದೇಹಿ ಕರಾವಲಂಬಮ್ ॥1॥

ಸಮೃದ್ಧವಾದ ಪಾಲ್ಗಡಲಿನಲ್ಲಿ ನೆಲೆಸಿರುವವನೇ! ಸುದರ್ಶನ ಚಕ್ರವನ್ನು ಕರದಲ್ಲಿ ಧರಿಸಿರುವವನೇ ! ಆದಿಶೇಷನ ಮೇಲೆ ಪವಡಿಸಿ ಸೂರ್ಯಕೋಟಿಗಳ ಕಾಂತಿಯಿಂದ ಪ್ರಕಾಶಿಸುತ್ತಿರುವನೇ ! ಯೋಗಿಗಳಿಗೆ ಪ್ರಭುವಾದವನೇ ! ಅಮರನಾಗಿರುವವನೇ ! ದೀನರಿಗೆ ದಿಕ್ಕಾಗಿರುವವನೇ! ಸಂಸಾರ ಸಮುದ್ರಕ್ಕೆ ನೌಕೆಯಾಗಿರುವವನೇ ! ಓ ಲಕ್ಷ್ಮೀ ನೃಸಿಂಹ ವಿಭುವೇ ! ನನ್ನ ಕೈಗೆಟುಕುವಂಥವನಾಗು !

ಶ್ಲೋ॥ ಬ್ರಹ್ಮೇಂದ್ರ ರುದ್ರಮರುದರ್ಕ ಕಿರೀಟಕೋಟಿ
ಸಂಘಟ್ಟಿತಾಂಘ್ರಿ ಕಮಲಾಮಲಕಾಂತಿಕಾಂತ!
ಲಕ್ಷ್ಮೀಲಸತ್ಕುಚ ಸರೋರುಹ ರಾಜಹಂಸ!
ಲಕ್ಷ್ಮೀನೃಸಿಂಹ! ಮಮ ದೇಹಿ ಕರಾವಲಂಬಮ್ ॥2॥

ಬ್ರಹ್ಮ, ಇಂದ್ರ, ರುದ್ರ, ವಾಯು, ಸೂರ್ಯರು-ಇವರು ತಮ್ಮ ಕಿರೀಟದಲ್ಲಿ ಹೊತ್ತಿರುವ ನಿರ್ಮಲ ಪಾದಗಳುಳ್ಳನೇ ಮನೋಹರನೇ ! ಲಕ್ಷ್ಮಿ ದೇವಿಯಿಂದೊಡಗೂಡಿ ವಕ್ಷೋ ಪದ್ಮಗಳನ್ನು ಹೊಂದಿರುವ ರಾಜ ಹಂಸನಾಗಿರುವವನೇ ! ಓ ಲಕ್ಷ್ಮಿ ನೃಸಿಂಹ! ನನ್ನ ಕೈಗೆಟುಕುವಂಥವನಾಗು!

ಶ್ಲೋ॥ ಸಂಸಾರಸಾಗರ ವಿಶಾಲ ಕರಾಲ ಕಾಮ
ನಕ್ರಗ್ರಹ ಗ್ರಸಿತ ನಿಗ್ರಹ ವಿಗ್ರಹಸ್ಯ।
ಮಗ್ನಸ್ಯ ರಾಗಲಸಯೋರ್ಮಿ ನಿಪೀಡಿತಸ್ಯ
ಲಕ್ಷ್ಮೀನೃಸಿಂಹ! ಮಮ ದೇಹಿ ಕರಾವಲಂಬಮ್ ॥3॥

ಓ ಲಕ್ಷ್ಮೀನೃಸಿಂಹಾ! ಸಂಸಾರವೆಂಬ ಸಾಗರದಲ್ಲಿ ಮಹಾ ಭಯಂಕರವಾದ ಕಾಮವೆನ್ನುವ ದೊಡ್ಡ ಕೊಡಲಿಯಿಂದ ತಿವಿಯಲ್ಪಟ್ಟಿದ್ದೇನೆ. ಸಂಸಾರ ವಿಷಯಗಳಲ್ಲಿ ಮುಳುಗಿ ಚಿಂತಿಸುತ್ತಾ ನಾನಾ ಬಗೆಯ ಬಾಧೆಗಳಿಂದ ನರಳುತ್ತಿರುವ ನನಗೆ ಕೈಕೊಟ್ಟು ರಕ್ಷಿಸುವವನಾಗು !

ಶ್ಲೋ॥ ಸಂಸಾರಘೋರಗಹನೇ ಚರತೋ ಮುರಾರೇ
ಮಾರೋಗ್ರಭೀಕರಮೃಗಪ್ರಚುರಾರ್ದಿತಸ್ಯ।
ಆರ್ತಸ್ಯ ಮತ್ಸರನಿದಾಘನಿಪಿಡಿತಸ್ಯ
ಲಕ್ಷ್ಮೀನೃಸಿಂಹ! ಮಮ ದೇಹಿ ಕರಾವಲಂಬಮ್ ॥4॥

ಓ ಮುರಾರೇ ! ನೃಸಿಂಹ ಸ್ವಾಮಿಯೇ ! ಸಂಸಾರವೆಂಬ ಭಯಂಕರ ಅಡವಿಯಲ್ಲಿ ತಿರುಗುತ್ತಾ ಮನ್ಮಥನೆಂಬುವ ಕ್ರೂರ ಮೃಗದ ಬಾಯಲ್ಲಿ ಸಿಕ್ಕಿ ಹಾಕಿಕೊಂಡು ನರಳುತ್ತಿದ್ದೇನೆ. ಕ್ರೋಧವೆಂಬ ಅಗ್ನಿಯಲ್ಲಿ ಬೆಂದು ಹೋಗುತ್ತಿದ್ದೇನೆ. ಹೀಗಿರುವ ನನಗೆ ಕೈಯನಿತ್ತು ಪರಿಪಾಲಿಸು.

ಶ್ಲೋ॥ ಸಂಸಾರಕೂಪ ಮತಿಘೋರ ಮಗಾಧಮೂಲಂ
ಸಂಪ್ರಾಪ್ಯ ದುಃಖಶತಸರ್ಪಸಮಾಕುಲಸ್ಯ।
ದೀನಸ್ಯ ದೇವ ಕೃಪಯಾ ಶರಣಾಗತಸ್ಯ
ಲಕ್ಷ್ಮೀನೃಸಿಂಹ! ಮಮ ದೇಹಿ ಕರಾವಲಂಬಮ್ ॥5॥

ಓ ನೃಸಿಂಹದೇವಾ! ವರ್ಣಿಸಲು ಮಿಗಿಲಾದ ಭಯಂಕರವಾದ ಬಹಳ ಆಳವಾದ ಸಂಸಾರವೆಂಬ ಬಾವಿಯಲ್ಲಿ ಬಿದ್ದು, ದುಃಖಗಳೆಂಬ ನೂರಾರು ವಿಷಜಂತುಗಳಿಂದ ಸುತ್ತಲ್ಪಟ್ಟು ಬಾಧೆ ಪಡುತ್ತಿದ್ದೇನೆ, ದೀನವಾದ ನನ್ನನ್ನು ಕರುಣಿಸಿ ನಿನ್ನ ಕೈಯನಿತ್ತು ರಕ್ಷಿಸುವುದು.

ಶ್ಲೋ ॥ ಸಂಸಾರ ಭೀಕರ ಕರೀಂದ್ರಕರಾಭಿಘಾತ
ನಿಷ್ಪೇಡ್ಯಮಾನ ವಪುಷಃ ಸಕಲಾರ್ತಿನಾಶ।
ಪ್ರಾಣಪ್ರಯಾಣ ಭವಭೀತಿ ಸಮಾಕುಲಸ್ಯ
ಲಕ್ಷ್ಮೀನೃಸಿಂಹ! ಮಮ ದೇಹಿ ಕರಾವಲಂಬಮ್ ॥6॥

ಲಕ್ಷ್ಮೀ ನರಸಿಂಹ ಸ್ವಾಮಿಯೇ ! ನನ್ನ ಶರೀರವು ಸಂಸಾರವೆಂಬ ಭಯಂಕರವಾದ ಮದವೇರಿದ ಆನೆಯ ಹೊಡೆತಗಳಿಂದ ನೋಯಲ್ಪಟ್ಟಿದೆ. ಅನೇಕ ರೀತಿಯ ಹೊಡೆತಗಳನ್ನು ತಿಂದು ಬೆಂದವನು ನಾನು. ಪ್ರಾಣಪಕ್ಷಿ ಹಾರಿ ಹೋಗುವುದೇನೋ ಎಂಬ ಭಯ ಹೊಂದಿದವನು. ಕರುಣಿಸಿ ನನ್ನನ್ನು ಕೈಯನಿತ್ತು ಮೇಲಕ್ಕೆತ್ತಿ ಸಲುಹು!

ಶ್ಲೋ ॥ ಸಂಸಾರ ಸರ್ಪ ವಿಷದುಷ್ಟ ಭಯಾಗ್ರತೀವ್ರ
ದಂಷ್ಟ್ರಾ ಕರಾಳ ವಿಷದಗ್ಧ ವಿನಷ್ಟಮೂರ್ತೇಃ।
ನಾಗರಿವಾಹನ! ಸುಧಾಬ್ಧಿನಿವಾಸ! ಶೌರೇ!
ಲಕ್ಷ್ಮೀನೃಸಿಂಹ! ಮಮ ದೇಹಿ ಕರಾವಲಂಬಮ್ ॥7॥

ಓ ಗುರುಡವಾಹನಾ ! ಕ್ಷೀರಸಾಗರಶಯನಾ ! ಶೌರಿ! ಶ್ರೀಲಕ್ಷ್ಮಿ ನೃಸಿಂಹ ಸ್ವಾಮಿ! ಸಂಸಾರವೆಂಬ ಹಾವು ಚೇಳುಗಳಂಥ ದುಷ್ಟ.ಭಯಂಕರ. ಕ್ರೂರಾ ತೀಕ್ಷ್ಣ ಜಂತುಗಳ ಕೋರೆಹಲ್ಲಿಗೆ ಸಿಕ್ಕಿ ತೀವ್ರವಾದ ವಿಷಪ್ರಾಶನದಿಂದ ನನ್ನ ಶರೀರ ಕುಗ್ಗಿ ಹೋಗಿದೆ ! ಕರುಣಿಸಿ ನನ್ನ ಕೈ ಹಿಡಿದು ನನ್ನನ್ನೊಮ್ಮೆ ಬದುಕಿಸಿ ಬಿಡು !

ಶ್ಲೋ ॥ ಸಂಸಾರಜಾಲ ಪತಿತಸ್ಯ ಜಗನ್ನಿವಾಸ!
ಸರ್ವೇಂದ್ರಿಯಾರ್ಥ ಬಡಿಶಾರ್ಥ ಝುಷೋತನಶ್ಟ।
ಪ್ರೋತ್ಕಂಪಿತ ಪ್ರಚುರತಾಲುಕ ಮಸ್ತಕಸ್ಯ
ಲಕ್ಷ್ಮೀನೃಸಿಂಹ! ಮಮ ದೇಹಿ ಕರಾವಲಂಬಮ್ ॥8॥

ಓ ಜಗನ್ನಿವಾಸ! ಸಂಸಾರವೆಂಬ ರೂಪದಲ್ಲಿ ಬಿದ್ದು ಸ್ತ್ರೀ ಭೋಗಾದಿ ವಿಷಯಗಳೆಂಬ ಗಾಳಕ್ಕೆ ಸಿಲುಕಿರುವ ಮೀನಿನಂತೆ ಒದ್ದಾಡುತ್ತಿರುವವನ ದವಡೆ-ತಲೆಗಳು ಸೆಳೆತಕ್ಕೊಳಗಾಗಿವೆ. ಇಂತಹ ದೈನ್ಯಸ್ಥಿತಿಯಲ್ಲಿರುವ ನನ್ನನ್ನು ಕರುಣಿಸಿ, ಕೈಕೊಟ್ಟು ಮೇಲೆತ್ತಿ ರಕ್ಷಿಸು.

ಶ್ಲೋ ॥ ಸಂಸಾರ ವೃಕ್ಷ ಮಘಬೀಜ ಮನಂತಕರ್ಮ-
ಶಾಖಾಯುತಂ ಕರಣಪತ್ರ ಮನಂಗಪುಷ್ಪಮ್
ಅರುಹ್ಯ ದುಃಖಜಲ ಧೌ ಪತಿತೋ ದಯಾಲೋ
ಲಕ್ಷ್ಮೀನೃಸಿಂಹ! ಮಮ ದೇಹಿ ಕರಾವಲಂಬಮ್ ॥9॥

ಓ ದಯಾ ಹೃದಯನೇ ! ಲಕ್ಷ್ಮೀ ನೃಸಿಂಹ ಸ್ವಾಮಿಯೇ ! ಪಾಪವೆಂಬ ಬೇರಿನಿಂದ ಹುಟ್ಟಿ , ಅನಂತ ಕರ್ಮಗಳೆಂಬ ಕೊಂಬೆಗಳನ್ನು ಪಡೆದು, ಇಂದ್ರಿಯಗಳೆಂಬ ಎಲೆಗಳನ್ನು ಪಡೆದು, ಮನ್ಮಥನೆಂಬ ಹೂವನ್ನು ಹೊಂದಿ ಈ ಸಂಸಾರವೆಂಬ ಮರವನ್ನು ಏರಿ, ದುಃಖವೆಂಬ ಸಮುದ್ರದಲ್ಲಿ ಬಿದ್ದಿದ್ದೇನೆ ನನಗೆ ನಿನ್ನ ಹಸ್ತ ನೀಡಿ ಕಾಪಾಡು!

ಶ್ಲೋ॥ ಸಂಸಾರದಾವ ದಹನಾಕುಲ ಭೀಕರೋರು-
ಜ್ವಾಲಾವಳೀಭಿರಭಿದಗ್ಧತನೂರುಹಸ್ಯ।
ತ್ವತ್ಪಾದಪದ್ಮಸರಸೀಂ ಶರಣಾಗತಸ್ಯ
ಲಕ್ಷ್ಮೀನೃಸಿಂಹ! ಮಮ ದೇಹಿ ಕರಾವಲಂಬಮ್॥10॥

ಓ ಲಕ್ಷ್ಮೀ ನೃಸಿಂಹ ಸ್ವಾಮಿಯೇ ! ಈ ಸಂಸಾರವೆಂಬ ಅಗ್ನಿ ಜ್ವಾಲೆಗಳು ಎಲ್ಲಾ ದಿಕ್ಕುಗಳಲ್ಲಿ ಹರಡಿ, ನನ್ನನ್ನು ಸುಡುತ್ತಿವೆ. ಕೂದಲುಗಳು ಭಸ್ಮಗೊಂಡಿವೆ. ನಿನ್ನ ಪಾದಗಳ ಮೇಲೆ ತಲೆಯನ್ನಿರಿಸಿದ್ದೇನೆ. ಈ ಕೂದಲ ಗಂಟಿರುವ ಜ್ವಾಲೆಗಳನ್ನು ಆರಿಸಿ, ಕೈಹಿಡಿದು ಸಲಹೆನ್ನನು.

ಶ್ಲೋ ॥ ಸಂಸಾರಸಾಗರ ನಿಮಜ್ಜನಮುಹ್ಯಮಾನಂ
ದೀನಂ ವಿಲೋಕಯ ವಿಭೋ! ಕರುಣಾನಿಧೇ! ಮಾಮ್।
ಪ್ರಹ್ಲಾದಖೇದಪರಿಹಾರ ಪರಾವತಾರ !
ಲಕ್ಷ್ಮೀನೃಸಿಂಹ! ಮಮ ದೇಹಿ ಕರಾವಲಂಬಮ್ ॥11॥

ಓ ಪ್ರಭೋ ! ದಯಾನಿಧೇ ! ಪ್ರಹ್ಲಾದನ ದುಃಖವನ್ನು ಪರಿಹರಿಸಿದವನೇ! ಮಹೋನ್ನತವಾದ ಅವತಾರಗಳನ್ನೆತ್ತಿದವನೇ! ಲಕ್ಷ್ಮಿನೃಸಿಂಹಾ! ಸಂಸಾರ ಸಾಗರದಲ್ಲಿ ಬಿದ್ದು, ಕಕ್ಕಾಬಿಕ್ಕಿಯಾಗಿ ದಿನಗಳನ್ನೆಣಿಸುತ್ತಿರುವ ನನ್ನನ್ನು ಕರುಣದಿಂದೊಮ್ಮೆ ನೋಡು! ನಿನ್ನ ಅಭಯ ಹಸ್ತವನಿತ್ತು ಕಾಪಾಡು!

ಶ್ಲೋ॥ ಸಂಸಾರಯೂಥ ಗಜ ಸಂಹಾತಿ ಸಿಂಹ! ದಂಷ್ಟ್ರಾ
ಭೀತಸ್ಯದುಷ್ಟಮತಿ ದೈತ್ಯ ಭಯಂಕರೇಣ
ಪ್ರಾಣ ಪ್ರಯಾಣ ಭವಭೀತಿ ನಿವಾರಣೇನ
ಲಕ್ಷ್ಮಿನೃಸಿಂಹ! ಮಮದೇಹಿ ಕರಾವಲಂಬಮ್ ॥12॥

ಸಂಸಾರವೆಂಬ ಆನೆಗಳ ಒಡ್ಡೋಲಗವನ್ನು ಪರಿಹರಿಸಲು ಬಂದ ಸಿಂಹರೂಪಿ ಲಕ್ಷ್ಮಿನೃಸಿಂಹ ಪ್ರಭುವೇ ! ದುಷ್ಟ ಮತೀಯರಾದ ರಾಕ್ಷಸರಿಗೆ ಭಯವನ್ನುಂಟು ಮಾಡುವ, ಜನನ - ಮರಣಗಳಿಂದಾಗುವ ಭಯವನ್ನು ನಿವಾರಿಸ ಬಲ್ಲವನೇ ! ನಿವಾರಿಸು ನನ್ನ ಸಂಸಾರ ದುಃಖವನ್ನು ನಿನ್ನ ಕೈಯನಿತ್ತು!







ಶ್ಲೋ॥ ಸಂಸಾರಯೋಗ ಸಕಲೇಪ್ಸಿತ ನಿತ್ಯಕರ್ಮ
ಸಂಪ್ರಾಪ್ಯದುಃಖ ಸಕಲೇ ಯಮತ್ಯುನಾಶ
ಸಂಕಲ್ಪಂ ಸಿನ್ಧುತನಯಾಕುಚಕುಂಕುಮಾಂಕ
ಲಕ್ಷ್ಮೀನೃಸಿಂಹ! ಮಮ ದೇಹಿ ಕರಾವಲಂಬಮ್ ॥13॥

ಓ ಲಕ್ಷ್ಮೀನೃಸಿಂಹಸ್ವಾಮಿ!ಸಂಸಾರ ಬಂಧನದಿಂದ ಉಂಟಾಗುವ ಸಕಲ ವಾಂಛೆಗಳಿಂದ ಹುಟ್ಟುವ ಕರ್ಮ ಬಂಧನಗಳಿಂದ ಏರ್ಪಡುವ ದುಃಖಗಳನ್ನು ಇಂದ್ರಿಯಾರ್ಥಗಳನ್ನೂ ಮೃತ್ಯುವನ್ನೂ, ನಾಶಮಾಡಿ ಶ್ರೇಷ್ಠವಾದ ನಿರ್ಣಯಗಳನ್ನು ನೀನು ತೆಗೆದುಕೊಳ್ಳುವಿ ಅಂತಹ ಯೋಗಿಯೂ - ಭೋಗಿಯೂ ಆದ ನೀನು ನನಗೆ ಕೈಯ ನಿತ್ತು ಕಾಪಾಡು!

ಶ್ಲೋ॥ ಬದ್ಧ್ವಾಗಲೇ ಯಮಭಟಾ ಬಹುತರ್ಜಯಂತಃ
ಕರ್ಷಂತಿ ಯತ್ರ ಭವಪಾಶಶತ್ಯೈರ್ಯುತಂ ಮಾಮ್
ಏಕಾಕಿನಂ ಪರವಶಂ ಚಿಕಿತಂ ದಯಾಲೋ
ಲಕ್ಷ್ಮೀನೃಸಿಂಹ! ಮಮ ದೇಹಿ ಕರಾವಲಂಬಮ್ ॥14॥

ದಯಾಮಯನೇ ! ಲಕ್ಷ್ಮಿ ನೃಸಿಂಹ ಸ್ವಾಮಿಯೇ ! ದಿಕ್ಕು ತಪ್ಪಿದವನ, ಅಪಸ್ಮಾರಕ ಸ್ಥಿತಿಯಲ್ಲಿರುವನನ್ನು, ಒಬ್ಬಂಟಿಗನಾಗಿರುವವನನ್ನು, ಭಯಭೀತಗೊಂಡಿರುವವನನ್ನು, ಎಲ್ಲಿ ನನ್ನನ್ನು ಯಮಭಟರು ಬಂದು ಹಿಂಸಿಸುತ್ತಾರೋ ಅಲ್ಲಲ್ಲಿ ಆವಿರ್ಭವಿಸಿ, ನನಗೆ ಕೈಯನಿತ್ತು !ರಕ್ಷಿಸು !

ಶ್ಲೋ ॥ ಅಂಧ್ಯಸ್ಯ ಮೇ ಹೃತವಿವೇಕಮಹಾಧನಸ್ಯ
ಚೋರೈರ್ಮಹಾಬಲಿಭಿರಿಂದ್ರಿಯನಾಮಧೇಯೈಃ
ಮೋಹಾಂಧಕಾರ ಕುಹಾರೆ ವಿನಿಪಾತಿತಸ್ಯ
ಲಕ್ಷ್ಮೀನೃಸಿಂಹ! ಮಮ ದೇಹಿ ಕರಾವಲಂಬಮ್॥15॥

ಓ ಲಕ್ಷ್ಮಿ ನೃಸಿಂಹದೇವಾ ! ಕಾಮನೆಗಳಿಂದ ಮದಾಂಧನಾಗಿರುವ ನನ್ನನ್ನು ಬಲಶಾಲಿಗಳಾದ ಇಂದ್ರಿಯಗಳೆಂಬ ಕಳ್ಳರು, ನನ್ನ ವಿವೇಕವೆಂಬ ಧನವನ್ನು ದೋಚಿದ್ದಾರೆ. ನನ್ನನ್ನು ಅಜ್ಞಾನವೆಂಬ ಅಂಧಕಾರದ ಮೂಲೆಯಲ್ಲಿ ದಬ್ಬಿದ್ದಾರೆ. ಆದ್ದರಿಂದ ಸ್ವಾಮಿಯೇ! ನನ್ನ ಕೈ ಹಿಡಿದು, ಮೇಲೆತ್ತಿ, ರಕ್ಷಿಸು.

ಶ್ಲೋ॥ ಲಕ್ಷ್ಮೀಪತೇ! ಕಮಲನಾಭ! ಸುರೇಶ! ವಿಷ್ಣೋ !
ಯಜ್ಞೇಶ! ಯಜ್ಞ ! ಮಧುಸೂದನ! ವಿಶ್ವರೂಪ !
ಬ್ರಹ್ಮಣ್ಯ ! ಕೇಶವ! ಜನಾರ್ದನ! ವಾಸುದೇವ!
ಲಕ್ಷ್ಮೀನೃಸಿಂಹ! ಮಮ ದೇಹಿ ಕರಾವಲಂಬಮ್ ॥16।

ಓ ಲಕ್ಷ್ಮಿಕಾಂತಾ! ಪದ್ಮನಾಭಾ ! ದೇವದೇವಾ ! ಸರ್ವವ್ಯಾಪಕಾ ! ಯಜ್ಞ ಪುರುಷಾ! ಮಧುಸೂಧನಾ ! ವಿಶ್ವರೂಪಾ ! ಬ್ರಾಹ್ಮಣ ಪ್ರಿಯಾ! ಕೇಶವಾ! ಜನಾರ್ದನಾ! ವಾಸುದೇವಾ ! ಲಕ್ಷ್ಮಿನೃಸಿಂಹಾ! ನನ್ನ ಕೈಹಿಡಿದು ಉದ್ಧರಿಸು!

ಶ್ಲೋ॥ ಪ್ರಹ್ಲಾದ ನಾರದ ಪರಾಶರ ಪುಂಡರೀಕ
ವ್ಯಾಸಾಂಬರೀಷ ಶುಕ ಶೌನಕ ಹೃನ್ನಿವಾಸ।
ಭಕ್ತಾನುರಕ್ತ ಪರಿಪಾಲನಪಾರಿಜಾತ!
ಲಕ್ಷ್ಮೀನೃಸಿಂಹ! ಮಮ ದೇಹಿ ಕರಾವಲಂಬಮ್ ॥17॥

ಪ್ರಹ್ಲಾದ, ನಾರದ, ಪರಶುರಾಮ, ಪುಂಡಲೀಕ, ವ್ಯಾಸ, ಅಂಬರೀಶ, ಶುಕ - ಶೌನಕ ಮುಂತಾದ ಪರಮ ಭಾಗವತರ ಹೃದಯ ನಿವಾಸಿಯೇ ! ಭಕ್ತ ಪ್ರಿಯನಾಗಿ ಎಲ್ಲರನ್ನು ರಕ್ಷಿಸುವ ಪಾರಿಜಾತ ಕಲ್ಪವೃಕ್ಷದಂಥವನೇ ಓ ಲಕ್ಷ್ಮಿ ನೃಸಿಂಹಾ ! ನನ್ನ ಕೈ ಹಿಡಿದು ಕಾಪಾಡು !

ಶ್ಲೋ॥ ಏಕೇನ ಚಕ್ರಮಪರೇಣ ಕರೇಣ ಶಂಖ
ಮನ್ಯೇನ ಸಿಂಧುತನಯಾಮವಂಬ್ಯ ತಿಷ್ಠನ್।
ವಾಮೇತರೇಣ ವರದಾಭಯ ಹಸ್ತ ಮುದ್ರಂ
ಲಕ್ಷ್ಮೀನೃಸಿಂಹ! ಮಮ ದೇಹಿ ಕರಾವಲಂಬಮ್॥18॥

ಓ ಲಕ್ಷ್ಮಿ ನೃಸಿಂಹಾ! ಬಲಗೈಯಲ್ಲಿ ಸುದರ್ಶನ ಚಕ್ರವನ್ನು, ಎಡಗೈಯಲ್ಲಿ ಪಾಂಚಜನ್ಯವನ್ನು, ಇನ್ನೊಂದು ಬಲಗೈಲಿ ಅಭಯಹಸ್ತ ಪ್ರಸಾದವನ್ನು, ಇನ್ನೊಂದು ಎಡಗೈಯಲ್ಲಿ ಲಕ್ಷ್ಮಿದೇವಿಯನ್ನು ಹಿಡಿದಿರುವ ನಿನ್ನ ಆ ದಿವ್ಯ ರೂಪವನ್ನು ಸಾಕ್ಷಾತ್ಕರಿಸಿ, ಕೈ ಕೊಟ್ಟು ನನ್ನನ್ನು ಕಾಪಾಡು!

ಶ್ಲೋ॥ ಆದ್ಯಂತ ಶೂನ್ಯ ಮಜಮವ್ಯಯಮಪ್ರಮೇಯಂ
ಆದಿತ್ಯರುದ್ರನಿಗಮಾದಿನುತಪ್ರಭಾವಮ್
ತ್ವಾಂಭೋದಿಜಾಸ್ಯ ಮಧುಲೋಲಪ ಮತ್ತ ಭೃಂಗ
ಲಕ್ಷ್ಮೀನೃಸಿಂಹ! ಮಮ ದೇಹಿ ಕರಾವಲಂಬಮ್ ॥19॥

ಆದಿ - ಅಂತ್ಯವಿಲ್ಲದವನು, ಹುಟ್ಟು ಸಾವಿಲ್ಲದವನು, ನಾಶವಿಲ್ಲದವನು, ಅಗಣಿತನಾದವನು, ಸೂರ್ಯ- ರುದ್ರನಾದವನು, ವೇದಗಳಿಂದ ಸ್ತುತ್ಯ ನಾದವನು, ಲಕ್ಷ್ಮಿ ದೇವಿಯೆಂಬ ಮುಖಾರವಿಂದವನ್ನು ಸದಾ ಜೇನು ಹೀರುವ ಭ್ರಮರನೂ, ಆಗಿರುವ ಶ್ರೀ ಲಕ್ಷ್ಮೀ ನೃಸಿಂಹಾ! ನಿನ್ನನ್ನು ಸೇವಿಸುತ್ತೇನೆ ! ಕೈ ಹಿಡಿದು ಕಾಪಾಡು !

ಆದಿ ಶಂಕರಾಚಾರ್ಯರು ಶ್ರೀಲಕ್ಷ್ಮೀನೃಸಿಂಹ ಕರಾವಲಂಬ ಸ್ತೋತ್ರ ಶ್ರೀನೃಸಿಂಹ ಜಯಂತಿ ಪ್ರಯುಕ್ತ 'ಸಪ್ತಗಿರಿ' ಓದುಗರಿಗಾಗಿ ಇದನ್ನು ಪ್ರತಿನಿತ್ಯ ಮುಂಜಾನೆ ಸಂಜೆ ಪಠಿಸುವುದರಿಂದ, ಪಠಿಸುವವರಿಗೆ ಎದುರಾಗುವ ಕಷ್ಟಗಳೆಲ್ಲಾ ತೊಲಗಿ ಸುಖಶಾಂತಿಗಳು ಉಂಟಾಗುತ್ತದೆ.

ಶ್ಲೋ॥ ವಾರಾಹ! ರಾಮ! ನರಸಿಂಹ! ರಮಾದಿಕಾಂತಾ
ಕ್ರೀಡಾವಿಲೋಲ! ವಿಧಿಶೂಲಿ ಸುರಪ್ರವಂದ್ಯ।
ಹಂಸಾತ್ಮಕಂ ಪರಮಹಂಸ ವಿಹಾರಲೀಲಂ
ಲಕ್ಷ್ಮೀನೃಸಿಂಹ! ಮಮ ದೇಹಿ ಕರಾವಲಂಬಮ್॥20॥

ಪರಮ ಹಂಸರಾದ ಯೋಗಿಗಳಲ್ಲಿ ಕ್ರೀಡಿಸುವ ಓ ಲಕ್ಷ್ಮಿ ನೃಸಿಂಹಾ ! ನೀನೇ ವರಾಹ,ರಾಮ,ನೃಸಿಂಹಾದಿ ರೂಪ ಗಳನ್ನು ತಿಳಿದವನು. ಲಕ್ಷ್ಮಿ ಮೊದಲಾದ ಸ್ತ್ರೀಯರಿಂದ ಕ್ರೀಡಿಸುವವನು. ಬ್ರಹ್ಮ ರುದ್ರ ಮುಂತಾದ ದೇವತೆಗಳಿಂದ ನಮಸ್ಕರಿಸಲ್ಪಡುವವನು. ಆದ್ದರಿಂದ ಹೇ ಹಂಸ ರೂಪನೇ ನನ್ನ ಕೈಹಿಡಿದು ಉದ್ಧರಿಸು!

ಶ್ಲೋ॥ ಮಾತಾ ನೃಸಿಂಹಾಶ್ಚ ಪಿತಾ ನೃಸಿಂಹಾ
ಭ್ರಾತಾ ನೃಸಿಂಹಾಶ್ಚ ಸಖಾ ನೃಸಿಂಹಾ
ವಿದ್ಯಾ ನೃಸಿಂಹೋ ದ್ರವಿಣಂ ನೃಸಿಂಹಃ
ಸ್ವಾಮಿ ನೃಸಿಂಹ ಸಂಕಲ್ಪ ನೃಸಿಂಹ ॥21॥

ನನಗೆ ತಂದೆ - ತಾಯಿ , ಒಡಹುಟ್ಟಿದವನು, ಮಿತ್ರನು, ವಿದ್ಯ, ಧನ ರಕ್ಷಕನು - ಸರ್ವ ಜೀವನವೂ ಶ್ರೀ ಲಕ್ಷ್ಮಿ ನೃಸಿಂಹ ಸ್ವಾಮಿಯೇ !

ಶ್ಲೋ॥ ಪ್ರಹ್ಲಾದ ಮಾನಸ ಸರೋಜ ವಿಹಾರಭೃಂಗ!
ಗಂಗಾತರಂಗ ಧವಳಾಂಗ! ರಮಾಸ್ಥಿತಾಂಕ !
ಶೃಂಗಾರ ಸುಂಗರ ಕಿರೀಟ ಲಸದ್ವರಾಂಗ !
ಲಕ್ಷ್ಮೀನೃಸಿಂಹ! ಮಮ ದೇಹಿ ಕರಾವಲಂಬಮ್ ॥22॥

ಪ್ರಹ್ಲಾದ ಹುತ್ಕಮಲ ವಿಹಾರಿಣೀ ! ಗಂಗಾಂತರಂಗದಲ್ಲಿ ಕರಗಿದವನೇ! ಲಕ್ಷ್ಮಿ ದೇವಿಯ ಶರೀರವಾಸಿಯೇ ! ಸುಂದರವಾದ ಕಿರೀಟದಿಂದ ಪ್ರಕಾಶಕ್ತನಾದ ಶಿರಸ್ಸಿನ ವನೇ! ಲಕ್ಷ್ಮಿನೃಸಿಂಹ ! ನನಗೆ ನಿನ್ನ ಹಸ್ತವನ್ನು ಪ್ರಸಾದಿಸು!

ಶ್ಲೋ॥ ಶ್ರೀ ಶಂಕರಾಚಾರ್ಯ ರಚಿತಂ ಸತತಂ ಮನುಷ್ಯಃ
ಸ್ತೋತ್ರಂ ಪಠೇದಿಹತು ಸರ್ವಗುಣಪ್ರಸನ್ನಂ।
ಸದ್ಯೋವಿಮುಕ್ತ ಕಲುಷೋ ಮುನಿವರ್ಯಗಣ್ಯೋ
ಲಕ್ಷ್ಮೀಪತೇಃ! ಪದಮುಪೈತಿ ಸನಿರ್ಮಲಾತ್ಮಾ ॥23॥

ಶ್ರೀಶಂಕರಾಚಾರ್ಯರು ರಚಿಸಿದ ದಿವ್ಯ ಮಹಿಮೆಯುಳ್ಳ ಈ ಸ್ತೋತ್ರವನ್ನು ನಿರಂತರವಾಗಿ ಪಾರಾಯಣ ಮಾಡುವವನು, ಸರ್ವಪಾಪಗಳಿಂದ ಮುಕ್ತನಾಗಿ,ಮುನೀಶ್ವರನಂತೆ ಮುಕ್ತಿ ಹೊಂದಿದವನಾಗಿ, ನಿರ್ಮಲಾತ್ಮನಾಗಿ ಪುನರಾವರ್ತಿಯಿಲ್ಲದೇ ಶಾಶ್ವತವಾಗಿ ವಿಷ್ಣು ಸ್ಥಾನವನ್ನು ಹೊಂದುತ್ತಾರೆ.



ಶ್ಲೋ॥ ಏತಸ್ಮಯೋರ್ಜಿತ ವಪುಃ ಪ್ರಚುರ ಪ್ರವಾಹ
ಮಗ್ನಾರ್ಥ ಮತ್ರ ನಿವಹಸ್ಯ ಕರಾವಲಂಬಂ
ಲಕ್ಷ್ಮೀನೃಸಿಂಹ ಚರಣಾಬ್ಜಮಧುವ್ರಾತೇನ
ಸ್ತೋತ್ರ ಕೃತಂಶುಭಕರಂ ಭುವಿಶಂಕರೇಣ ॥24॥

ಕರ್ಮಬಂಧಗಳಿಂದ ಬೆಸೆಯಲ್ಪಟ್ಟಿರುವ ಜನ್ಮ ಪ್ರವಾಹದಲ್ಲಿ ಮುಳುಗಿ ಬಾಧೆ ಪಡುತ್ತಿರುವ ಮಾನವ ಸಂಕುಲಕ್ಕೆ ಅಭಯ ಹಸ್ತವನ್ನು ನೀಡುವ ಶುಭಕರವಾದ ಸ್ತೋತ್ರವೇ ಇದು. ಲಕ್ಷ್ಮಿ ನೃಸಿಂಹ ಪಾದಪದ್ಮ ಭೃಂಗರಾದ ಶ್ರೀಶಂಕರಾಚಾರ್ಯರ ಹಸ್ತದಿಂದ ವಿರಚಿತಗೊಂಡಿದೆ.

ಶ್ಲೋ॥ ಶ್ರೀಮನ್ನೃಸಿಂಹ! ವಿಭವೇ ಗರುಡಧ್ವಜಾಯ
ತಾಪತ್ರಯೋಪಶಮನಾಯ ಭವೌಷಧಾಯ।
ತೃಷ್ಣಾದಿ ವೃಶ್ಚಿಕ ಜಲಾಗ್ನಿ ಭುಜಂಗ ರೋಗ
ಕ್ಲೇಶಾವ್ಯಯಾ ಹರಯೇ ಗುರುವೇ ನಮಸ್ತೇ ॥25॥

ವಿಭುವು, ಗರುಡಧ್ವಜನು, ತಾಪತ್ರಯಗಳನ್ನು ಉಪಶಮನ ಗೊಳಿಸಬಲ್ಲವನು, ಸಂಸಾರಕ್ಕೆ ದಿವ್ಯೌಷಧಿಯಾದವನು. ಹಸಿವು - ಬಾಯಾರಿಕೆ, ನೀರು, ಅಗ್ನಿ, ಪಶುಜಂತು ಗಳಿಂದುಂಟಾಗುವ ವ್ಯಾಧಿಗಳೇ ಮುಂತಾದವುಗಳಿಂದ ಉಂಟಾಗುವ ಬಾಧೆಯನ್ನು ನಾಶಗೊಳಿಸುವಂಥವನು ಸರ್ವ ಪಾಪಗಳನ್ನು ಪರಿಹರಿಸಬಲ್ಲವನು - ಗುರುವೂ ಆದ ಶ್ರೀಲಕ್ಷ್ಮಿ ನೃಸಿಂಹ ಸ್ವಾಮಿ ! ನಿನಗೆ ನಮಸ್ಕಾರ!

# ವಿಜಯದಾಸರು ಮಧ್ವತತ್ವ

- ಡಾ॥ಆರ್.ಜಿ. ಗುಡಿ




ಹಳ್ಳಿಹಳ್ಳಿಗಳಲ್ಲಿ ವಿವಿಧ ಜನಸಮೂಹದಲ್ಲಿ ಇಂದು ನಮಗೆ ಕೇಳಿಬರುವುದು ಪಂಪ - ರನ್ನರಂಥವರ ಮಹಾಕಾವ್ಯಗಳಲ್ಲ. ದಾಸರ 'ದೇವರನಾಮ'ಗಳು. ಹಬ್ಬ - ಹರಿದಿನಗಳಂತೆ ನಿಯಮಿತವಾಗಿಯೂ ಕೇಳಿಬರುತ್ತವೆ. ಕಿರ್ತನಸಾಹಿತ್ಯ ಕನ್ನಡ ಜನಜೀವನದಲ್ಲಿ ಹಾಸು ಹೊಕ್ಕಾಗಿ ನಾಲಗೆಯ ಮೇಲೆ ನಲಿದಾಡಿದ ಸಾಹಿತ್ಯವಾಗಿದೆ. ಮುದ್ರಣ ಅನುಕೂಲವಿಲ್ಲದಿರುವ ಸುಮಾರು ಐದು ಶತಮಾನ ಗಳಿಂದಲೂ ಈ ದಾಸ ಸಾಹಿತ್ಯವನ್ನು ಬಾಯಿಂದ ಬಾಯಿಗೆ ವರ್ಗಾಯಿಸಲು ಉಳಿಸಿ ಬೆಳೆಸಿದ ಶ್ರೇಯಸ್ಸು ಮಹಿಳೆಯರಿಗೆ ಸಲ್ಲುತ್ತದೆ.

ಸ್ತ್ರೀಶೂದ್ರ ಬ್ರಹ್ಮಬಂಧೂ ನಾಂ ತ್ರಯೀನ ಶ್ರುತಿಗೋಚರಾ।

ಇತಿ ಭಾರತಮಾಖ್ಯಾನಂ ಕೃಪಯಾ ಮುನಿನಾಕೃತಂ

ಎಂದಂತೆ, ಜ್ಞಾನವನ್ನು ಜನಪರಗೊಳಿಸುವ ಕಳಕಳಿ ವೇದ ವ್ಯಾಸರಿಗೆ ಇದ್ದಿತು. ಅದರಂತೆ ಅಭಿನವ ವ್ಯಾಸರೆನಿಸಿದ ವ್ಯಾಸರಾಜರಿಂದ ಉಗಮಗೊಂಡ ದಾಸಕೂಟದ ಉದ್ದೇಶವೂ ಈ ಹಿನ್ನೆಲೆಯಿದೆ. ವೇದೋಪನಿಷತ್‌ಗಳ ತತ್ವ ವಿಚಾರವನ್ನು ಶ್ರೀ ಸಾಮಾನ್ಯನಿಗೆ ತಲುಪಿ ಸಲು ತುಡಿಯುತ್ತಿದ್ದ ಹರಿದಾಸರು ಕನ್ನಡವನ್ನು ಆಶ್ರಯಿಸಿದರು. ಸಿದ್ಧಾಂತದ ಸಾಹಚರ್ಯ, ಜನಸಾಮಾನ್ಯರ ಜೀವಂತ ನುಡಿ ಹಾಗೂ ರೂಪ ವೈವಿಧ್ಯಗಳ ಮೂಲಕ ದಾಸಸಾಹಿತ್ಯಕ್ಕೆ ನವೀನತೆ ಪ್ರಾಪ್ತವಾದುದು ಹರಿದಾಸರಿಂದ ದ್ವೈತ ಸಿದ್ಧಾಂತ ವಿಚಾರಗಳನ್ನು ಜನಪ್ರಿಯಗೊಳಿಸಲು ದಾಸರು ಕೀರ್ತನೆ, ಸುಳಾದಿ, ಉಗಾಭೋಗಗಳಂತಹ ವಿಶಿಷ್ಟಸಾಹಿತ್ಯ ಪ್ರಕಾರ ಗಳನ್ನು ಹುಟ್ಟು ಹಾಕಿದರು. ಅದರಂತೆ ತ್ರಿಪದಿ, ಸಾಂಗತ್ಯ, ಷಟ್ಪದಿ, ರಗಳೆ, ವೃತ್ತನಾಮಗಳಂಥ ದ್ವೈತ ಸಿದ್ಧಾಂತ ವಿಚಾರಗಳನ್ನು ಜನಸಾಮಾನ್ಯರಿಗೆ ಎಟಕು ವಂತೆ ಎರಕಹೊಯ್ದರು.

ಇವುಗಳ ಜೊತೆಗೆ ಕೋಲುಪದ, ಡೊಳ್ಳಿನಪದ, ಬುಡುಬುಡಿಕೆಪದ, ಕೊರವಂಜಿಪದ , ಕಣಿಪದ, ಲಾವಣೆಗಳಿಂದ ಜಾನಪದ ಮಟ್ಟುಗಳನ್ನು ದಾಸರು ವ್ಯಾಪಕವಾಗಿ ಬಳಸಿಕೊಂಡು ತನ್ಮೂಲಕ ಅದುವರೆಗೆ ಪಂಡಿತರ ಸೊತ್ತೆನಿಸಿದ್ದ ವೇದ-ಶಾಸ್ತ್ರಗಳಲ್ಲಿಯ, ತತ್ವಸಿದ್ಧಾಂತಗಳನ್ನು ಜನಪರ ಗೊಳಿಸಿದರು. ಹಾಗೆಯೇ ಈ ಕೀರ್ತನ ಸಾಹಿತ್ಯಕ್ಕೆ ಸಂಗೀತವನ್ನು ಬೆರೆಸಿ ತಮ್ಮ ತಂಬೂರಿನಾದದಿಂದ ಜನರ ಮನವನ್ನು ಮಿಡಿದರು. ಇವುಗಳ ಜೊತೆಗೆ ನೃತ್ಯವನ್ನು ಅಳವಡಿಸಿಕೊಳ್ಳುವುದರೊಂದಿಗೆ ಹರಿದಾಸರು ಒಟ್ಟು ಪ್ರಚಾರದ ಒಂದು ಸಮರ್ಥ ಮಾಧ್ಯಮವನ್ನು ರೂಪಿಸಿಕೊಂಡರೆಂದು ಹೇಳಬಹುದು. ಹೀಗೆ ದಾಸರ ವೈವಿಧ್ಯಮಯ ಹಾಗೂ ವಿಶೇಷ ಪರಿಶ್ರಮ ಪೂರ್ಣವಾದ ಈ ಪ್ರಯತ್ನದಿಂದಲೇ ವೇದೋಪನಿಷತ್‌ಗಳಂತಹ ಜಟಿಲ ವಿಚಾರಗಳೂ ಜನಪ್ರಿಯವಾಗಲೂ ಸಾಧ್ಯವಾಯಿತು.

ಹರಿದಾಸ ಸಾಹಿತ್ಯದ ಪ್ರಥಮಘಟ್ಟವೆನಿಸಿದ 'ಶ್ರೀಪಾದರಾಜಯುಗ' ದಲ್ಲಿ ಶ್ರೀಪಾದರಾಜರು, ವ್ಯಾಸರಾಜರು, ವಾದಿರಾಜರು, ಪುರಂದರದಾಸರು, ಕನಕದಾಸರು, ವೈಕುಂಠದಾಸರಂಥ ಹರಿದಾಸ ಸಂಖ್ಯೆ ಕೇವಲ ಬೆರಳೆಣಿಕೆ ಯಷ್ಟು ಆದರೂ ಇವರ ದಾಸ ಸಾಹಿತ್ಯದ 'ಸುವರ್ಣಯುಗ' ವೆಂದೇ ಪ್ರಸಿದ್ಧ ವಾಗಿದೆ.

ನ್ಯಾಯ ವೇದಾಂತಾದಿ ಶಾಸ್ತ್ರ ಪಾರಂಗತರೂ, ಮಠಾಧಿಪತಿಗಳೂ ಆಗಿದ್ದ ಶ್ರೀರಾಘವೇಂದ್ರ ತೀರ್ಥರಿಂದ ದ್ವಿತೀಯ ಘಟ್ಟದ ದಾಸಸಾಹಿತ್ಯ ಪುರುಜ್ಜೀವನಗೊಂಡಿತು. ವಿಜಯದಾಸರು, ಗೋಪಾಲದಾಸರು ಜಗನ್ನಾಥ ದಾಸರಂಥ ದ್ವಿತೀಯ ಘಟ್ಟದ ದಾಸಾಗ್ರಣಿಗಳು ಮಂತ್ರಾಲಯದ ಆಸು ಪಾಸಿ ನಲ್ಲಿಯೇ ಉದಿಸಿದುದು, ಅವರೆಲ್ಲರೂ ರಾಘವೇಂದ್ರರನ್ನು ಕುರಿತು ಅನೇಕ ಕೃತಿಗಳನ್ನು ರಚಿಸಿದುದು ಮುಂತಾದವು ರಾಘವೇಂದ್ರರು ಹರಿಭಕ್ತಿಯ ಕೇಂದ್ರಬಿಂದು ಎನಿಸಿದುದನ್ನು ಘೋಷಿಸುವಂತಿದೆ. ರಾಘವೇಂದ್ರರೂ 'ಇಂದು ಎನಗೆ ಗೋವಿಂದ' ಎಂಬ ಕೃತಿರಚನೆಯೊಂದಿಗೆ ಹರಿದಾಸ ಸಾಹಿತ್ಯ ನಿರ್ಮಾಣಕ್ಕೆ ಚಾಲನೆ ನೀಡಿದರು. ಶ್ರೀಪಾದರಾಜಯುಗದ ನಂತರದ ಅವಧಿಯಲ್ಲಿ ಮಹಿಪತಿರಾಯರು ಹಾಗೂ ಅವರ ಮಗ ಕೃಷ್ಣ ರಾಯರಿಂದ ರಚಿತವಾದ ಅನೇಕ ಹರಿದಾಸ ಕೃತಿಗಳನ್ನು ಮರೆಯುವಂತಿಲ್ಲ.

ದ್ವಿತೀಯ ಘಟ್ಟದ ಹರಿದಾಸ ಸಾಹಿತ್ಯಕ್ಕೆ ಚಾಲನೆ ರಾಘವೇಂದ್ರ ತೀರ್ಥರಿಂದ ದೊರೆಯಿತಾದರೂ ಅದರ ಪುನರುಜ್ಜೀವನ ಅಕ್ಷರಶಃ ಕಾರ್ಯ ರೂಪಕ್ಕೆ ಬಂದುದು ಶ್ರೀ ವಿಜಯದಾಸರಿಂದ. ಇಲ್ಲಿಯೂ ಸುಳಾದಿ ಗಳ ಮೂಲಕ ವಿಶೇಷವಾಗಿ ದಾಸಸಾಹಿತ್ಯ ಹೊಸಜಾಡನ್ನು ಹಿಡಿದು ಹಿಂದೆಂದಿಗಿಂತ ಆತ್ಯಾಧುನಿಕ ಶಾಸ್ತ್ರಜ್ಞಾನದ ವೈಭವವನ್ನು ಮೆರೆಯಿತು. ವಿಜಯ ದಾಸರು ರಾಜಕೀಯ ವಿಪ್ಲವದಿಂದ ಚೆಲ್ಲಾಪಿಲ್ಲಿಯಾಗಿ ಅಳಿದುಳಿದಿದ್ದ ಶ್ರೀಪಾದರಾಜಯುಗದ ದಾಸಸಾಹಿತ್ಯವನ್ನು ಪುರಂದರದಾಸರದೂ ಸೇರಿದಂತೆ ಶೋಧಿಸಿ ಸಂಗ್ರಹಿಸಿದರು. ಇದರಿಂದ ಈ ದಾಸಸಾಹಿತ್ಯ ಜನ ಪ್ರಿಯಗೊಂಡು ಇಂದಿಗೂ ಅದು ಉಳಿದು ಬರುವಂತಾಯಿತು. ವಿಜಯ ದಾಸರ ಈ ಸಾಹಸ ತಮಿಳು ವೈಷ್ಣವ ಸಾಹಿತ್ಯ ಇತಿಹಾಸದಲ್ಲಿ ನಾಥ ಮುನಿಗಳು ನಮ್ಮಾಳ್ವಾರರಿಗೆ ಸಲ್ಲಿಸಿದ ಸೇವೆಯ ಸಂದರ್ಭವೊಂದನ್ನು ನೆನಪಿಗೆ ತರುತ್ತದೆ.

ದಾಸಸಾಹಿತ್ಯರಚನೆ ಅದರಲ್ಲಿ ಮೊದಲ ಬಾರಿಗೆ ಶಾಸ್ತ್ರೀಯ ವಿವರಣೆ. ಗೋಪಾಲದಾಸರು, ಜಗನ್ನಾಥದಾಸರು, ವ್ಯಾಸವಿಠಲರು, ಮೋಹನದಾಸರು ಮುಂತಾದವರಿಗೆ ಹರಿದಾಸದೀಕ್ಷೆ ದೊರೆಯುವಂತೆ ಮಾಡಿ ಹರಿದಾಸರ ಹಾಗೂ ಸಾಹಿತ್ಯದ ಪರಂಪರೆಯನ್ನು ಉಳಿಸಿ ಬೆಳೆಸಿದುದು. ಪ್ರಾಚೀನ ದಾಸ ಸಾಹಿತ್ಯದ ಸಂಶೋಧನ - ಸಂಗ್ರಹ, ಪ್ರಚಾರ, ಪ್ರಸಾರಗಳ ಜೊತೆಗೆ ಅವನ್ನು ಗ್ರಂಥಸ್ಥಗೊಳಿಸಿದುದು ಇವೇ ಮುಂತಾದವು ವಿಜಯದಾಸರ ಸಾಧನೆಯ ವಿವಿಧ ಮುಖಗಳು,ಇದೇ ಅವಧಿಯಲ್ಲಿ ಇತರ ಕಾವ್ಯ ಪ್ರಕಾರಗಳು ಒಳಗೊಂಡಂತೆ ದಾಸಸಾಹಿತ್ಯಕ್ಕೆ ಪ್ರಸನ್ನವೆಂಕಟರು ಸಲ್ಲಿಸಿದ ಸೇವೆಯು ಗಮನಾರ್ಹ, ಇದರ ಫಲಿತಾಂಶವಾಗಿ ದಾಸಸಾಹಿತ್ಯವು ಆಕರ್ಷಕಗೊಂಡು ಇನ್ನೂ ಹೆಚ್ಚು ಜನಪ್ರಿಯವಾಯಿತು.

ಶ್ರೀಪಾದರಾಜರ ಯುಗದಲ್ಲಿ ಪುರಂದರದಾಸರಂಥವರಿಂದ ಕೀರ್ತನೆಗಳ ರೂಪದಲ್ಲಿ ಎದ್ದು ಕಾಣಿಸುತ್ತಿದ್ದ ದಾಸಸಾಹಿತ್ಯ ಈಗ ವಿಜಯ ದಾಸರಿಂದ ಸುಳಾದಿಸ್ವರೂಪದಲ್ಲಿ ವಿಜೃಂಭಿಸಲಾರಂಭಿಸಿತು. ಸುಳಾದಿ ದಾಸರೆಂದೇ ಪ್ರಸಿದ್ಧರಾದ ವಿಜಯದಾಸರಿಂದ ರಚನೆಗೊಂಡ ದಾಸ ಸಾಹಿತ್ಯದಲ್ಲಿ ಕೀರ್ತನೆಗಳು ಸಾಕಷ್ಟು ಸಂಖ್ಯೆಯಲ್ಲಿ ಇರುವುದಾದರೂ ಸುಳಾದಿಗಳದೇ ಮೇಲುಗೈ, ಪಾಂಡಿತ್ಯದ ಘನತೆಗೌರವಗಳು ಹೆಚ್ಚಿದವು. ಶ್ರೀಪಾದರಾಜರ ಯುಗದಲ್ಲಿ ವಿರಳವೆನಿಸಿದ್ದ ಸೃಷ್ಟಿ ಪ್ರಳಯಗಳ ಪ್ರಕ್ರಿಯೆ, ಸ್ವರೂಪ, ವಿವಿಧ ವಸ್ತುಗಳಲ್ಲಿಯ ಭಗವಂತನ ರೂಪ ವೈವಿಧ್ಯಗಳಂತಹ ದ್ವೈತ ಸಿದ್ಧಾಂತದ ಮತ್ತೂ ಕೆಲವು ವಿಶ್ಲೇಷಣಾತ್ಮಕ ತತ್ವ ಸೂಕ್ಷ್ಮಪ್ರಮೇಯಗಳನ್ನು ದಾಸಸಾಹಿತ್ಯ ವಿಜಯದಾಸರ ಮೂಲಕ ಕಾಣುವಂತಾಯಿತು ಹರಿದಾಸಸಾಹಿತ್ಯದ ಹೆಮ್ಮೆಯ ರಚನೆಗಳೆನಿಸಿದ ವಿಜಯದಾಸರ ಸುಳಾದಿಗಳಲ್ಲಿ ದ್ವೈತಸಿದ್ಧಾಂತ ಕೆಲವು ಪ್ರಮೇಯಗಳನ್ನು ಈ ಮುಂದಿನಂತೆ ಗುರುತಿಸಬಹುದಾಗಿದೆ.

'ಹರಿಸರ್ವೋತ್ತಮ' ಇದು ಎಲ್ಲ ಹರಿದಾಸರ ಉಸಿರು. ಸರ್ವೋತ್ತಮನಾದ ಸರ್ವೇಶನನ್ನು ಸರ್ವ ವಿಧದಿಂದಲೂ ನಂಬಿ ತಮ್ಮ ಸರ್ವಸ್ವವನ್ನೇ ಪರಮಾತ್ಮನಿಗೆ ಸಮರ್ಪಿಸಿ ತಮ್ಮ ಬದುಕನ್ನು ಹಸನುಗೊಳಿಸಿಕೊಂಡ ಹರಿದಾಸರು ಅಂತಹ ದೇವೋತ್ತಮನನ್ನು ಸಹಜವಾಗಿಯೇ ವಿಧವಿಧವಾಗಿ ಬಣ್ಣಿಸಿದ್ದಾರೆ. ಪರಮಾತ್ಮನು ಜ್ಞಾನಾನ ನಂದಾದಿ ಸಕಲ 'ಗುಣಪರಿಪೂರ್ಣ' ದುಃಖಾದಿ ಸಮಸ್ತದೋಷದೂರ, ಸೃಷ್ಟಾದಿ ಅಷ್ಟಕರ್ತೃ ಸರ್ವತಂತ್ರ ಸ್ವತಂತ್ರ, ಎಂದು ಮುಂತಾಗಿ ಎಲ್ಲ ದಾಸರು ಪರಮಾತ್ಮನ ಮಹಿಮೆಯನ್ನು ಕೊಂಡಾಡಿದ್ದಾರೆ. ಪರಮಾತ್ಮನ ಮಹಿಮಾ ವರ್ಣನೆಗೆ ಪೂರಕವಾದಂತೆ, ಅವನ ಮತ್ಸ್ಯ ಕೂರ್ಮಾದಿ ಪ್ರಸಿದ್ಧ ದಶಾವತಾರಗಳಂತೆ ಹಯಗ್ರೀವ, ಮೋಹಿನಿ, ವೇದವ್ಯಾಸ ಮುಂತಾದ ಅವನ ಇತರ ಅವತಾರಗಳು, ವಿವಿಧತೀರ್ಥ ಕ್ಷೇತ್ರಗಳಲ್ಲಿಯ ಭಗವದ್ರೂಪಗಳ ಅವನ ಪಾದಾದಿ ಅವಯವಗಳ ಮಹಿಮೆ ನಾಮಸ್ಮರಣೆಯ ಮಹತ್ವ ಮುಂತಾದ ಹತ್ತು ಹಲವು ರೀತಿಯ ವರ್ಣನೆಗಳನ್ನು ಸಹ ದಾಸರಲ್ಲಿ ನಾವು ಕಾಣುತ್ತೇವೆ.

'ಹರಿಯೇ ಸರ್ವೋತ್ತಮ ಹರಿಯೇ ಪರದೇವತೆ ಎಂಬ ವಿಜಯ ದಾಸರಂತೆ, 'ಹರಿಯಿಲ್ಲದೆ ಪರದೊಂದು ಪರದೈವವಿಲ್ಲವಯ್ಯ' ಎಂದಿರುವ ವಾದಿರಾಜರೇ ಮುಂತಾದವರ ಮಾತುಗಳಲ್ಲಿ ನೇರವಾಗಿ ಹರಿ ಸರ್ವೋತ್ತಮತ್ವದ ನಿರೂಪಣೆ ಮುಖ್ಯವಾಗಿ ಎರಡು ರೀತಿಯಿಂದ ಗಮನಸೆಳೆಯುತ್ತದೆ. ರಾಮಾಯಣ,ಭಾರತಾದಿ ಪೌರಾಣಿಕ ಕಥಾನಕಗಳ ಹಿನ್ನೆಲೆಯದು ಒಂದು ಮುಖವಾದರೆ, ಹರಿಸರ್ವೋತ್ತಮತ್ವಕ್ಕೆ ಪೂರಕವಾದ ಜ್ಞಾನನಂದಾದಿ ಗುಣಪೂರ್ಣತ್ವ ಸರ್ವವ್ಯಾಪ್ತತ್ವ,ಸಕಲದೋಷದೂರತ್ವ, ಪರಮ ಸ್ವಾತಂತ್ರ್ಯ, ಸ್ವಗತಭೇದ ವಿವರ್ಜಿತತ್ವ, ಸೃಕ್ಸ್ಯಾದ್ಯಷ್ಟಕರ್ತೃತ್ವ, ಇವೇ ಮುಂತಾದ ಶಾಸ್ತ್ರೀಯ ಪ್ರಮೇಯಗಳ ಹಿನ್ನಲೆಯಲ್ಲಿ ಹರಿಸರ್ವೋತ್ತ ಮತ್ವದ ಪ್ರತಿಪಾದನೆ ಇನ್ನೊಂದು ಮುಖವಾಗಿದೆ. ಬಹುಶ್ರುತರಾದ ಹರಿದಾಸರು ವೇದ ಉಪನಿಷತ್ತುಗಳಂಥ ಗಡುಚೆನ್ನಿಸುವ ಶಾಸ್ತ್ರೀಯ ಪ್ರಮೇಯಗಳನ್ನು ತಿಳಿಗೊಳಿಸಿರುವುದೇ ಅವರ ಹಿರಿಮೆ.

ಪರಮಾತ್ಮನು ಸರ್ವವ್ಯಾಪ್ತವೆಂಬುದನ್ನು'ನಿನ್ನೊಳು ನೀನೇ ಎನ್ನೊಳು ನೀನೆ, ಅನ್ಯರೊಳು ನೀನೇ ಎಂದು ಮುಂತಾಗಿ ವಿಜಯದಾಸರು ವಿವರಿಸಿದ್ದಾರೆ. ಎಲ್ಲಿ ನೋಡಲು ನೀನಿಲ್ಲದ ಸ್ಥಳವಿಲ್ಲ ಎಲ್ಲರಂತರ್ಯಾಮಿ ಎಲ್ಲ ಸಾರುತಲಿದೆ ತಂದು ತಿಳಿಗನ್ನಡದಲ್ಲಿ ನಾರಾಯಣೋಪನಿಷತ್ತಿನ ಸಾರವನ್ನು ಗೋಪಲದಾಸರು ಹರಳುಗೊಳಿಸಿದ್ದಾರೆ. "ವಿಶ್ವತಶ್ಚಕ್ಷುರುತ ವಿಶ್ವತೋಮುಖೋ ವಿಶ್ವತೋಬಾಹುರುತ ವಿಶ್ವಸ್ಪಾತ್" ಎಂಬ ದೇವ ವಾಣಿಯಂತೂ ದಾಸರಿಗೆ ಅತ್ಯಂತ ಪ್ರಿಯವಾಗಿದೆಯೆನ್ನುವುದಕ್ಕೆ ಇದನ್ನು ಯಥಾ ವತ್ತಾಗಿ ಅನುಕರಿಸಿದ,ಅನುವಾದಿಸಿದೆ. ಅನುಸರಿಸಿದ ದಾಸರ ಹೇರಳ ಕೃತಿಗಳೇ ನಿದರ್ಶನ.

'ವಿಶ್ವತೋಮುಖ ನೀನೆ ವಿಶ್ವತಶ್ಚಕ್ಷು ನೀನೆ

ವಿಶ್ವತೋ ಬಾಹು ವಿಶ್ವಪಾದನು ನೀನೆ

ವಿಶ್ವುದರ ನೀನೇ ವಿಶ್ವವ್ಯಾಪಕ ನೀನೆ

ವಿಶ್ವನಾಟಕ ಸೂತ್ರಧಾರಿಯು ವಿಷ್ಣುವೆ

ಎಂದಿರುವ ಪುರಂದರದಾಸರಲ್ಲಿಯೇ 'ವಿಶ್ವತೋ ಮುಖವಾಗಿ ಎನ್ನುವ ಮತ್ತೊಂದು ಸುಳಾದಿಯೂ ಕಂಡು ಬರುತ್ತದೆ 'ವಿಶ್ವಕರ್ಣನು ನೀನೆ ಎಂದು ಮುಂತಾಗಿ ಇದನ್ನೇ ವಿಸ್ತರಿಸಿ, 'ವಿಶ್ವಕರ್ತೃತ್ವ ಮಹೇಶ್ವರಗುಂಟೆಂಬ ಆ ವಿಶ್ವಾಸಘಾತಕಿಗೇನೆಂಬೆನು ಹರಿಯೇ ಎನ್ನುವ ಗೋಪಾಲದಾಸರಲ್ಲಿ ತತ್ವನಿಷ್ಠೆಗೆ ದ್ವಿತಿಯ ಘಟ್ಟದ ದಾಸಸಾಹಿತ್ಯವು ವಿಜಯದಾಸರಿಂದ ತಾತ್ವಿಕ ತಿರುವನ್ನು ಪಡೆದುದೇ ಕಾರಣವಾಗಿರಬೇಕು. ಅಂತೆಯೇ ವಿಜಯ ದಾಸರಿಗಿಂತ ಸ್ವಲ್ಪವೇ ಪೂರ್ವದವರಾದ ಮಹಿಪತಿರಾಯರಲ್ಲಿ ಈ ತತ್ವನಿಷ್ಠೆಯತೀವ್ರತೆ ಅಷ್ಟಾಗಿ ಕಂಡು ಬರುವುದಿಲ್ಲ. ಪರಮಾತ್ಮನು ಸರ್ವ ವ್ಯಾಪ್ತ. ಅವನು ಜೀವರೊಳಗಿದ್ದು ವಿವಿಧ ಕರ್ಮಗಳನ್ನು ಆಚರಿಸಿದರೂ ಸಹ ಅವನಿಗೆ ಪಾಪಲೇಪಾದಿಗಳು ಇಲ್ಲವೆಂಬ ಮತ್ತೊಂದು ತತ್ವಸೂಕ್ಷ್ಮದ ಕಡೆಗೂ ವಿಜಯದಾಸರು ಗಮನಸೆಳೆದಿದ್ದಾರೆ.

# ಸಂಸ್ಕೃತ ಕಲಿಯೋಣ...!!

सप्तमः पाठ : ಏಳನೇ ಪಾಠ

ರಚನೆ:- ಮಹಾ ಮಹೋಪಾಧ್ಯಾಯ ಕಾಶಿ ಕೃಷ್ಣಾಚಾರ್ಯ
ನಿರ್ವಹಣೆ:- ಮಹಾ ಮಹೋಪಾಧ್ಯಾಯ ಸಮುದ್ರಾಲ ಲಕ್ಷ್ಮಣಯ್ಯ

ये = ಯಾರು (ಯಾರಾದರೇ), अन्ये = ಇತರರು स्वे = ತಾವು किम् = ಏನು? अपि = ನೂ,ಕೂಡ
अनेकत्र = ಎಲ್ಲಾ ಕಡೆ स्यात् = ಇರುವನು, ಇರಬೇಕು, ಸಾಲುವನು स्याः = ನೀನಿರುವೆ, ನೀನಿರಬೇಕು,ಸಾಲುವೆಯು
स्याम् = ಇರುವೆನು, ಇರಬೇಕು,ಸಾಲುವೆನು.

## ಪ್ರಶ್ನೆ

१. अन्ये अपि तत्र न सन्ति।
२. ते तत्रासन् वा?
३. किं वा?
४. अद्य एकः अपि तत्र नास्ति।
५. अहम् अपि तत्र स्याम्।
६. त्वं श्वः अनेकत्र स्याः।
७. यूयं तत्र न आस्त किं वा?
८. ह्यः अत्र त्वम् अपि नासीः।
९. श्वः प्रभृति अहमपि तत्र स्याम्।
१०. ते स्वे तत्र तदा आसन्, इदानीं न सन्ति।

## ಉತ್ತರ

1. ಇತರರೂ ಕೂಡ ಅಲ್ಲಿ ಇಲ್ಲ.
2. ಅವರು ಅಲ್ಲಿ ಇದ್ದಾರಾ?
3. ಏನೋ ?
4. ಇಂದು ಒಬ್ಬನು ಕೂಡಾ ಅಲ್ಲಿ ಇಲ್ಲ.
5. ನಾನು ಕೂಡಾ ಅಲ್ಲಿ ಇದ್ದೆನು.
6. ನೀನು ನಾಳೆ ತುಂಬಾ ಕಡೆ ಇರುವುದು.
7. ನೀವು ಅಲ್ಲಿ ಇರಲಿಲ್ಲವಾ ಏನು?
8. ನಿನ್ನೆ ಇಲ್ಲಿ ನೀನು ಕೂಡ ಇರಲಿಲ್ಲ.
9. ನಾಳೆಯಿಂದ ನಾನು ಕೂಡ ಅಲ್ಲಿರುವೆನು.
10. ಅವರೆಲ್ಲರೂ ಆಗ ಅಲ್ಲಿ ಇದ್ದರು, ಈಗ ಇಲ್ಲ.

## ಪ್ರಶ್ನೆ

1. ತಾವೆಲ್ಲರೂ ಕೂಡಾ ಅಲ್ಲಿ ಇಲ್ಲವಾ
2. ನಿನ್ನೆ ಅಲ್ಲಿಯಾರಿದ್ದಾರೋ ಅವರೀಗ ಇಲ್ಲ.
3. ಇಂದು ಅವನು ಅಲ್ಲಿ ಇಲ್ಲವೇನು?
4. ಬೆಳಗ್ಗೆಯಿಂದ ನೀನು ಅಲ್ಲಿಯೇ ಇರಬೇಕು.
5. ನಾವು ಇಂದು ಎಲ್ಲಿಯೂ ಇಲ್ಲ.
6. ನೀವಿಂದು ಇಲ್ಲಿ ಇರಲಿಲ್ಲ.
7. ಅವರು ಯಾರೋ?
8. ಅಲ್ಲಿ ಇತರರು ಕೂಡಾ ತುಂಬಾ ಜನ ಇದ್ದರು.
9, ಏನೋ ನಾನು ಎಲ್ಲಿ ಇರುವೆನೋ ?
10. ಅವರೆಲ್ಲರೂ ಇಂದು ಅಲ್ಲಿ ಇಲ್ಲ.

## ಉತ್ತರ

१. ते स्वे अपि तत्र नासन्।
२. ह्यः तत्र ये आसन्, ते इदानीं न सन्ति।
३. अद्य सः तत्र नास्ति किम्?
४. प्रातः प्रभृति त्वं तत्र स्याः।
५. वयम् अद्य कुत्रापि न आस्म।
६.यूयम् अद्य अत्र न स्थ।
७. ते के!
८. तत्र अन्ये अपि बहवः आसन्।
९. किं वा अहं कुत्र स्याम्?
१०. ते सर्वे अत्र अद्य न सन्ति।

# ದೇವರ್ಷಿ ನಾರದರ ಮಹಿಮೆ

- ಡಾ || ಗುರುರಾಜ ಪೋಶೆಟ್ಟಿಹಳ್ಳಿ
97393 69621



ನಾರದ ಮುನಿಗಳು ನಿಷ್ಣಾತ ಸಂವಹನಕಾರರು, ಅತ್ಯಂತ ಕ್ಲಿಷ್ಟಕರ ಸಂದರ್ಭಗಳನ್ನು ಲೀಲಾಜಾಲವಾಗಿ ನಿಭಾಯಿಸಬಲ್ಲವರು. ನಾರದ ಮುನಿಗಳು ಜಗತ್ತಿನ ಮೊದಲ ಬಾತ್ಮೀದಾರರು ಮತ್ತು ಪತ್ರಕರ್ತರು. ಪತ್ರಿಕಾ ಧರ್ಮದ ಸಾರವನ್ನು ಅರಿತವರು. ಧರ್ಮರಾಜನ ಜೊತೆಯಲ್ಲಿ ನಡೆಸಿದ ಸಂಭಾಷಣೆಯಲ್ಲಿ ಈ ಸಂಗತಿಗಳನ್ನು ವಿಶದವಾಗಿ ನಾರದ ಮುನಿಗಳು ತಿಳಿಸಿದ್ದಾರೆ. ಪತ್ರಕರ್ತನಾದವನು ಪರಿಸ್ಥಿತಿಯನ್ನು ಆಳವಾಗಿ ಅರಿತಿರಬೇಕು. ಮಾಹಿತಿಗಳನ್ನೆಲ್ಲಾ ಪತ್ರಕರ್ತನು ತಿಳಿದುಕೊಂಡಿರಬೇಕು. ಸಿಕ್ಕ ಮಾಹಿತಿಗಳನ್ನು ವಿಮರ್ಶಿಸುವ ಸಾಮರ್ಥ್ಯ ಪತ್ರಕರ್ತನಿಗಿರಬೇಕು. ಅಧ್ಯಯನ ಶೀಲನಾಗಿರಬೇಕು. ಮುಂದಾಲೋಚನೆ ಉಳ್ಳವನಾಗಿರಬೇಕು.ಜಗತ್ತಿಗೆ ಬೇಕಾದ ಮಾಹಿತಿ, ವಿವರಣೆಗಳನ್ನು ಸಮರ್ಥವಾಗಿ ತಲುಪಿಸಬಲ್ಲ ಸಾಮರ್ಥ್ಯ ಪತ್ರಕರ್ತನಿಗಿರಬೇಕು.ಈ ಎಲ್ಲಾ ಗುಣಗಳೂ ನಾರದಮುನಿಗಳಲ್ಲಿ ಸಹಜವಾಗಿಯೇ ಇತ್ತು.

ಮಹಾತ್ಮರಾದ ದೇವರ್ಷಿನಾರದರನ್ನು ಸ್ವಯಂ ಶ್ರೀಕೃಷ್ಣನೇ ಮಹಾಭಾರತದ ಶಾಂತಿಪರ್ವತದಲ್ಲಿ ಹೃತ್ಪೂರ್ವಕವಾಗಿ ಹಾಡಿ ಶ್ರೀಮದ್ಭಗವದ್ಗೀತೆಯಲ್ಲಿ ಅಧ್ಯಾಯ ಹತ್ತು ವಿಭೂತಿ ಯೋಗದ ಇಪ್ಪತ್ತಾರನೇ ಶ್ಲೋಕದಲ್ಲಿ ಶ್ರೀಕೃಷ್ಣಪರಮಾತ್ಮ ಈ ಕೆಳಕಂಡಂತೆ ಹೇಳಿದ್ದಾನೆ. ನಾನು ಎಲ್ಲಾ ವೃಕ್ಷಗಳಲ್ಲಿ ಅಶ್ವತ್ಥವೃಕ್ಷವೂ, ದೇವರ್ಷಿಗಳಲ್ಲಿ ನಾರದಮುನಿಯೂ, ಗಂಧರ್ವರಲ್ಲಿ ಚಿತ್ರರಥನು ಮತ್ತು ಸಿದ್ಧರಲ್ಲಿ ಕಪಿಲ ಮುನಿಯೂ ಆಗಿದ್ದೇನೆ. ದೇವರ್ಷಿಗಳ ಲಕ್ಷಣವನ್ನು ವಾಯುಪುರಾಣದಲ್ಲಿ ವಿವರಿಸಲಾಗಿದೆ - "ದೇವಲೋಕದಲ್ಲಿ ಯಾರ ನಿವಾಸವಿದೆಯೋ ಅವರನ್ನು ಶುಭ ದೇವರ್ಷಿಗಳೆಂದು ತಿಳಿಯಬೇಕು.ಇವರಲ್ಲದೇ ಹಾಗೆಯೇ ಯಾವ ಬೇರೆ ಇನ್ನೂ ದೇವರ್ಷಿಗಳಿದ್ದಾರೋ,ಅವರ ಲಕ್ಷಣಗಳನ್ನು ಹೇಳುತ್ತೇನೆ. ಭೂತ ಭವಿಷ್ಯತ್ ಮತ್ತು ವರ್ತಮಾನದ ಜ್ಞಾನವಾಗುವುದು ಹಾಗೂ ಎಲ್ಲ ಪ್ರಕಾರದಿಂದ ಸತ್ಯವಾಗಿ ಮಾತಾಡುವುದು ದೇವರ್ಷಿಗಳ ಲಕ್ಷಣಗಳಾಗಿವೆ. ಯಾರಿಗೆ ಶ್ರೇಷ್ಠ ಜ್ಞಾನದ ಪ್ರಾಪ್ತಿಯಾಗಿದೆಯೋ ಹಾಗೂ ಯಾರು ಸ್ವಯಂ ತಮ್ಮ ಇಚ್ಛೆಯಿಂದಲೇ ಜಗತ್ತಿನೊಡನೆ ಸಂಬದ್ಧವಾಗಿದ್ದಾರೋ ಯಾರು ತಮ್ಮ ತಪಸ್ಸಿನ ಕಾರಣದಿಂದ ಈ ಜಗತ್ತಿನಲ್ಲಿ ವಿಖ್ಯಾತರಾಗಿದ್ದಾರೋ, ಯಾರು ಪ್ರಹ್ಲಾದಾದಿಗಳಿಗೆ ಗರ್ಭದಲ್ಲಿಯೇ ಉಪದೇಶ ಕೊಟ್ಟಿರುವರೋ, ಯಾರು ಮಂತ್ರಗಳ ವಕ್ತಾರರಾಗಿದ್ದಾರೋ ಮತ್ತು ಯಾರು ಐಶ್ವರ್ಯಸಿದ್ಧಿಗಳ ಬಲದಿಂದ ಸರ್ವತ್ರ ಎಲ್ಲ ಲೋಕಗಳಲ್ಲಿ ಯಾವುದೇ ತಡೆ ಇಲ್ಲದೆ ಹೋಗಿ ಬರುವರೋ ಮತ್ತು ಯಾರು ಸದಾ ಕಾಲ ಋಷಿಗಳಿಂದ ಸುತ್ತುವರಿದು ಇರುತ್ತಾರೋ ಆ ದೇವತೆ,ಬ್ರಾಹ್ಮಣರು ಮತ್ತು ರಾಜರೆಲ್ಲರೂ ದೇವರ್ಷಿಗಳಾಗಿದ್ದಾರೆ.

ದೇವರ್ಷಿಗಳು ಅನೇಕರಿದ್ದಾರೆ. ಅವರಲ್ಲಿ ಕೆಲವರ ಹೆಸರು ಇಂತಿವೆ- ಧರ್ಮಮುನಿಯು ಇಬ್ಬರು ಪುತ್ರರು ನರ ಮತ್ತು ನಾರಾಯಣ, ಕ್ರತುವಿನ ಪುತ್ರರು ವಾಲಖಿಲ್ಯರು, ಪುಲಹರ ಪುತ್ರ ಕರ್ದಮ, ಪರ್ವತ ಮತ್ತು ನಾರದ ಹಾಗೂ ಕಶ್ಯಪರ ಇಬ್ಬರೂ ಬ್ರಹ್ಮವಾದಿ ಪುತ್ರರಾದ ಅಸಿತ ಮತ್ತು ವತ್ಸರ. ಏಕೆಂದರೆ ಇವರು ದೇವತೆಗಳನ್ನು ಅಧೀನದಲ್ಲಿ ಇಟ್ಟುಕೊಳ್ಳಬಲ್ಲರು. ಅದಕ್ಕಾಗಿ ಇವರನ್ನು "ದೇವರ್ಷಿ'' ಎಂದು ಹೇಳುತ್ತಾರೆ.

ದೇವರ್ಷಿನಾರದರು ಭಗವಂತನ ಯಥಾರ್ಥ ತತ್ತ್ವವನ್ನು ತಿಳಿದವರೂ, ಅವನ ಮಹಾನ್ ಪ್ರೇಮಿ ಮತ್ತು ಪರಮಜ್ಞಾನಿ ಮಹರ್ಷಿಗಳಾಗಿದ್ದಾರೆ.ಇವರಿಗೆ ಭಗವಂತನ ಮನವೆಂದು ಹೇಳಲಾಗಿದೆ. ಇವರು ಪರಮತತ್ತ್ವಜ್ಞ,ಪರಮಪ್ರೇಮಿ ಮತ್ತು ಊರ್ದ್ವರೇತಾ ಬ್ರಹ್ಮಚಾರಿಗಳಾಗಿದ್ದಾರೆ. ಇವರಾದರೋ ಭಕ್ತಿಯ ಪ್ರಧಾನ ಆಚಾರ್ಯರೇ ಆಗಿದ್ದಾರೆ. ಜಗತ್ತಿನ ಮೇಲೆ ಇವರ ಆಮಿತ ಉಪಕಾರವಿದೆ. ಪ್ರಹ್ಲಾದ, ಧ್ರುವ, ಅಂಬರೀಷ ಮೊದಲಾದ ಮಹಾ ಭಕ್ತರನ್ನು ಇವರೇ ಭಕ್ತಿ ಮಾರ್ಗದಲ್ಲಿ ಪ್ರವೃತ್ತರಾಗಿಸಿದರು. ಶುಕದೇವರಂತಹ ಮಹಾನ್ ಜ್ಞಾನಿಗಳಿಗೆ ಇವರು ಉಪದೇಶ ಕೊಟ್ಟಿದ್ದರು.

## ಮಹಾಭಾರತದ ಸಭಾಪರ್ವದಲ್ಲಿ ನಾರದರ ಮಹಿಮೆ

ದೇವರ್ಷಿಗಳಾದ ನಾರದರು ವೇದ ಮತ್ತು ಉಪನಿಷತ್ತುಗಳ ಮರ್ಮಜ್ಞರೂ, ದೇವಗಣದಿಂದ ಪೂಜಿತರೂ, ಇತಿಹಾಸ - ಪುರಾಣಗಳ ವಿಶೇಷಜ್ಞರೂ ಕಳೆದು ಹೋದ ಕಲ್ಪಗಳ ವಿಷಯಗಳನ್ನು ಬಲ್ಲವರೂ ನ್ಯಾಯ ಮತ್ತು ಧರ್ಮದ ತತ್ತ್ವಜ್ಞರೂ,ಶಿಕ್ಷಾ,ಕಲ್ಪ,ವ್ಯಾಕರಣ,ಜ್ಯೋತಿಷ್ಯ,

ಆಯುರ್ವೇದಾದಿಗಳನ್ನು ತಿಳಿದವರಲ್ಲಿ ಶ್ರೇಷ್ಠರೂ, ಪರಸ್ಪರ ವಿರುದ್ಧ ವಿವಿಧ ವಿಧಿ ವಾಕ್ಯಗಳ ಏಕವಾಕ್ಯತೆಯನ್ನು ಮಾಡುವುದರಲ್ಲಿ ಪ್ರವೀಣರೂ, ಪ್ರಭಾವಶಾಲಿ ವಕ್ತಾರರೂ, ನೀತಿಜ್ಞರೂ, ಮೇಧಾವಿಯೂ,ಸ್ಮರಣ ಶೀಲರೂ, ಜ್ಞಾನಿಗಳೂ, ಕವಿಗಳೂ, ಒಳ್ಳೆಯದನ್ನು, ಕೆಟ್ಟದ್ದನ್ನು ಬೇರೆ ಬೇರೆ ಯಾಗಿ ಗುರುತಿಸುವುದರಲ್ಲಿ ಚತುರರೂ, ಸಮಸ್ತ ಪ್ರಮಾಣಗಳ ಮೂಲಕ ವಸ್ತುತತ್ತ್ವವನ್ನು ನಿರ್ಣಯಿಸುವುದರಲ್ಲಿ ಸಮರ್ಥರೂ, ನ್ಯಾಯದ ವಾಕ್ಯಗಳ ಗುಣ ದೋಷಗಳನ್ನು ತಿಳಿದವರೂ, ಬೃಹಸ್ಪತಿಯಂತೆ ವಿದ್ವಾಂಸರ ಪ್ರಶ್ನೆ ಗಳಿಗೆ ಉತ್ತರಿಸುವುದರಲ್ಲಿ ಸಮರ್ಥರೂ, ಧರ್ಮ, ಅರ್ಥಕಾಮ ಮತ್ತು ಮೋಕ್ಷದ ತತ್ತ್ವವನ್ನು ನಿರ್ಣಯಿಸುವುದರಲ್ಲಿ ಸಮರ್ಥರೂ, ನ್ಯಾಯದ ವಾಕ್ಯಗಳ ಗುಣ ದೋಷಗಳನ್ನು ತಿಳಿದವರೂ, ಇಡೀ ಬ್ರಹ್ಮಾಂಡದಲ್ಲಿ ಮತ್ತು ತ್ರಿಲೋಕಗಳಲ್ಲಿ ಅತ್ತ-ಇತ್ತ ಮೇಲ-ಕೆಳಗೆ ಏನೆಲ್ಲ ನಡೆಯುತ್ತದೋ ಅವೆಲ್ಲವನ್ನೂ ಯೋಗಬಲದಿಂದ ಪ್ರತ್ಯಕ್ಷವಾಗಿ ನೋಡುವವರೂ, ಸಾಂಖ್ಯ ಮತ್ತು ಯೋಗಗಳ ವಿಭಾಗವನ್ನು ತಿಳಿದವರೂ , ದೇವತೆಗಳಿಗೆ ದೈತ್ಯರಿಗೆ ವೈರಾಗ್ಯವನ್ನು ಉಪದೇಶ ಮಾಡುವುದರಲ್ಲಿ ದಕ್ಷರೂ, ಷಾಡ್ಗುಣ್ಯ - ಪ್ರಯೋಗದ ವಿಷಯದಲ್ಲಿ ಅನುಪಮರೂ, ಸಕಲ ಶಾಸ್ತ್ರಗಳಲ್ಲಿ ಪ್ರವೀ ಣರೂ, ಯುದ್ಧ ವಿದ್ಯೆಯಲ್ಲಿ ನಿಪುಣರೂ, ಸಂಗೀತವಿಶಾರದರೂ ಮತ್ತು ಭಗವಂತನ ಭಕ್ತರೂ ವಿದ್ಯಾ ಮತ್ತು ಗುಣಗಳ ಗಣಿಗಳೂ,ಸದಾಚಾರದ ಆಧಾರರೂ, ಎಲ್ಲರ ಹಿತಕಾರಿಯೂ ಮತ್ತು ಸರ್ವತ್ರಗತಿಯುಳ್ಳವರೂ ಆಗಿದ್ದಾರೆ. ಉಪನಿಷತ್ತು.ಪುರಾಣ ಮತ್ತು ಇತಿಹಾಸಗಳ ಇವರ ಪವಿತ್ರ ಗಾಥೆಗಳಿಂದ ತುಂಬಿವೆ.

**ದೇವಋಷಿ ನಾರದರ ಭಕ್ತಿ ಸೂತ್ರ :**

ಭವಸಾಗರದಿಂದ ಪಾರಾಗಲು ಸುಲಭೋಪಾಯ ಹರಿನಾಮ, ತನುವನ್ನು ದಂಡಿಸಬೇಕಿಲ್ಲ. ನೀರಿನಲ್ಲಿ ಸದಾಕಾಲ ಮುಳುಗಿ ಚಳಿಯಿಂದ ನಡುಗಬೇಕಿಲ್ಲ.ಉಪವಾಸ ವ್ರತಗಳಾಚರಣೆಯನ್ನು ಮಾಡಲೇ ಬೇಕೆಂದಿಲ್ಲ. ನಾರಾಯಣನ ಪಾದವನ್ನು ಸೇರಲು, ಹರಿನಾಮಸ್ಮರಣೆಗಿಂತ ಮಿಗಿಲಾದುದಿಲ್ಲ. ಮಾನವರ ಹೃದಯದಲ್ಲಿ "ನಾರಾಯಣನೆಂಬೋ ನಾಮದ ಬೀಜವನ್ನು " ಬಿತ್ತಿದವರು ಮಹರ್ಷಿಗಳಾದ ನಾರದರು. ಒಂದು ಸರ್ವಗ್ರಾಹಿಯಾದ ಭಕ್ತಿ ವಿವರಣೆಯನ್ನು ನಾರದರು ಇಲ್ಲಿ ಕೊಡುವರು.

"ಭಗವಂತನಿಗೆ ಅರ್ಪಿತಭಾವದಿಂದ ಎಲ್ಲವನ್ನೂ ಮಾಡುವುದೇ ಭಕ್ತಿ. ಭಗವಂತನನ್ನು ಕ್ಷಣಕಾಲ ಮರೆತರೂ ಪರಮ ವ್ಯಾಕುಲ ಪಡುವನು ಭಕ್ತನು. ಇಲ್ಲಿ ಅರ್ಪಿತ ಭಾವದಿಂದ ಪೂಜೆ,ಜಪ, ಧ್ಯಾನ ಮುಂತಾದವನ್ನು ಮಾತ್ರವಲ್ಲ, ಈ ಬ್ರಹ್ಮಾಂಡವೇ ಭಗವಂತನ ದೇವಾಲಯ, ಇಲ್ಲಿ ಯಾವ ಕೆಲಸ ಮಾಡಿದರೂ ಎಲ್ಲವೂ ಅವನಿಗೆ ಮಾಡುವ ಪೂಜೆ ಎಂಬ ಧ್ವನಿ ಇದೆ.

ಅನ್ನದಾನ , ವಿದ್ಯಾದಾನ ರೋಗಿಗಳಿಗೆ ಬಡಬಗ್ಗರಿಗೆ ಮಾಡುವ ಸೇವೆ ಮುಂತಾದುವೆಲ್ಲವನ್ನೂ ಅರ್ಪಿತಭಾವದಿಂದ ಭಕ್ತಮಾಡುವನು. ಇಲ್ಲಿ ಕೈಂಕರ್ಯ ದೃಷ್ಟಿ ಇದೆ. ಭಗವಂತನ ಮಕ್ಕಳಿಗೆ ಸೇವೆಯನ್ನು ಅರ್ಪಿ ಸುತ್ತಿರುವೆ ಎಂಬ ಭಾವ ಇದೆ. ಇಂತಹ ಒಂದು ಅವಕಾಶ ದೊರೆತುದಕ್ಕೆ ಭಗವಂತನಿಗೆ ಭಕ್ತನು ನಿತ್ಯಋಣಿ. ಇನ್ನೊಬ್ಬನಿಗೆ ನಾನು ಉಪಕಾರ ಮಾಡು ತ್ತಿರುವೆ ಎಂಬ ಅಹಂಕಾರವಿಲ್ಲ.

"ಇಂತಹ ಭಕ್ತರು ತೀರ್ಥಗಳನ್ನು ಪವಿತ್ರ ತೀರ್ಥಗಳನ್ನಾಗಿ ಮಾಡು ತ್ತಾರೆ. ಮಾಡುವ ಕರ್ಮಗಳನ್ನು ಸುಕರ್ಮ ಮಾಡುವರು ಶಾಸ್ತ್ರಗಳನ್ನಾಗಿ ಸತ್ ಶಾಸ್ತ್ರಗಳನ್ನಾಗಿ ಮಾಡುತ್ತಾರೆ. ಇಂತಹ ಭಕ್ತಶ್ರೇಷ್ಠರನ್ನು ನೋಡಿ ಪಿತೃಗಳು ಆನಂದಿಸುವರು, ದೇವತೆಗಳು ನೃತ್ಯ ಮಾಡುವರು. ಭೂಮಿ ಸನಾಥೆ ಯಾಗುವಳು ಎಂದು ವಿವರಿಸುವರು ನಾರದರು''. ನಾರದರು ಭಕ್ತಿಸೂತ್ರದಲ್ಲಿ ಭಕ್ತಿಯ ಲಕ್ಷಣ, ಅದರ ಸಾಧನೆ, ಮಹತ್ವ ಮುಂತಾದವನ್ನು ವಿವರಿಸಿದ್ದಾರೆ.

**ಭಕ್ತಿಯ ಸಾಧನೆ :**

ಸಾಧಕನು ತನ್ನ ಕರ್ಮಗಳಲ್ಲಿ ಅವು ಲೌಕಿಕವೇ ಆಗಿರಲಿ. ಶಾಸ್ತ್ರೋಕ್ತ ಕರ್ಮಗಳೇ ಆಗಿರಲಿ ತನ್ನ ಸಾಧನೆಗೆ ಅಡ್ಡಿಯಾಗುವಂಥ ಕರ್ಮಗಳನ್ನು ತ್ಯಜಿಸಿ ಉಳಿದುದನ್ನು ಭಗವದರ್ಪಣ ಬುದ್ಧಿಯಿಂದ ಮಾಡಬೇಕು. ಶರೀರವು ಸಾಧನಾ ಪಥದಲ್ಲಿ ಅಮೂಲ್ಯ ಉಪಕರಣವಾದುದರಿಂದ ಅದನ್ನು ರಕ್ಷಿಸಿ ಕೊಂಡು ಬರಬೇಕು.

ಕಾಮ - ಕ್ರೋಧಾದಿ ಅರಿಷಡ್ವರ್ಗಗಳು ಸಾಧನಾ ಪಥದಲ್ಲಿ ದೊಡ್ಡ ವಿಘ್ನಗಳು. ಅವುಗಳನ್ನು ನೇರವಾಗಿ ಎದುರಿಸಿ ಗೆಲ್ಲುವುದು ಬಹಳ ಕಷ್ಟ. ಆದುದರಿಂದ ನಾರದರು ಒಂದು ಚಮತ್ಕಾರವಾದ ಸುಲಭೋಪಾಯವನ್ನು ಸೂಚಿಸಿದ್ದಾರೆ. ಅವನ್ನೆಲ್ಲ ಪರಮಾತ್ಮನ ಕಡೆಗೇ ತಿರುಗಿಸಿಬಿಡುವುದು. ಗೋಪಿಯರು ಕಾಮವನ್ನು ಕೃಷ್ಣನ ಕಡೆಗೆ ತಿರುಗಿಸಿ ಅದನ್ನು ನಾಶಮಾಡಿ ಕೊಂಡತೆ ನಾವೂ ಅದನ್ನು ನಾಶಪಡಿಸಬಹುದು. ಭಕ್ತನು ತನ್ನ ಕಾಲವನ್ನು ಒಂದು ಕ್ಷಣಾರ್ಧವೂ ನಷ್ಟಮಾಡದೆ ಭಗವಂತನನ್ನೇ ಸದಾ ಭಜಿಸುತ್ತಲಿರಬೇಕು.

**ನಾರದಾವತಾರ :**

ತನ್ನ ಪೂರ್ವಜನ್ಮದಲ್ಲಿ ನಾರದರು ಒಬ್ಬ ದಾಸೀ ಪುತ್ರನಾಗಿ ಹುಟ್ಟಿ ದ್ದರು. ಮಳೆಗಾಲದ ನಾಲ್ಕು ತಿಂಗಳು ಒಂದೆಡೆ ನಿಂತಿದ್ದ ಬ್ರಾಹ್ಮಣರ ಸೇವೆ ಯಲ್ಲಿ ನಾರದರ ತಾಯಿಯ ನಿರತಳಾಗಿದ್ದಳು. ಚಿಕ್ಕ ಹುಡುಗನಾಗಿದ್ದರೂ ನಾರದರಿಗೆ ಆಟ ಮುಂತಾದರಲ್ಲಿ ಆಕರ್ಷಣೆ ಮುದುರಲಿಲ್ಲ. ಪುಟ್ಟಬಾಲಕ ನಾರದನು ತುಂಟತನ ಮಾಡುತ್ತಿರಲಿಲ್ಲ ಮತ್ತು ಅಗತ್ಯಕ್ಕಿಂತ ಹೆಚ್ಚಿನ ಮಾತನ್ನೂ ಆಡುತ್ತಿರಲಿಲ್ಲ. ಒಮ್ಮೆ ಮಾತ್ರ ಆ ಬ್ರಾಹ್ಮಣರ ಅಪ್ಪಣೆ ಪಡೆದು ಅವರು ಉಂಡು ಉಳಿಸಿದ್ದ ಆಹಾರವನ್ನು ಬಾಲಕ ನಾರದನು ಸೇವಿಸಿದನು. ಆ ಕೂಡಲೇ ಅವನು ಮಾಡಿದ್ದ ಪಾಪಗಳೆಲ್ಲವೂ ತೊಡೆದುಹೋದವು. ಹೀಗೆ ಸೇವಾ ನಿರತನಾಗಿರುತ್ತ ನಾರದರ ಹೃದಯವು ಪರಿಶುದ್ಧವಾಯಿತು. ಆಗ ಅವರು ಇಂದ್ರಿಯಗಳಿಗೆ ಅತೀತವಾದ ಬದುಕಿನಲ್ಲಿ ಆಕರ್ಷಕ ಕಂಡಿತು.

ಆ ಭಕ್ತಿವೇದಾಂತರು ತೋರಿದ ಅನುಗ್ರಹದಿಂದಾಗಿ ಆ ಮಹಾ ಮಹಿಮರೇ ಪ್ರಭೂ ಕೃಷ್ಣನ ಕಾರ್ಯ ಚಟುವಟಿಕೆಗಳನ್ನು ಕುರಿತು ಹೇಳಿದ ಕಥೆಗಳನ್ನು ನಾರದರು ಕೇಳುವಂತಾಯಿತು. ನಾರದರಿಗೆ ದೇವೋತ್ತಮ

ಪುರುಷನ ರುಚಿ ಹತ್ತಿತು ಮತ್ತು ಪ್ರಭುವನ್ನು ಕುರಿತು ಕೇಳುವುದರಲ್ಲಿ ಅವರಿಗಿದ್ದ ಗಮನವು ಚಲವಾಗಿರುತ್ತಿತು. ಆವರ ಈ ಆಸಕ್ತಿಯು ಬೆಳೆದಂತೆಲ್ಲಾ. ತಾವು ಹೊಂದಿದ್ದ ಸೂಕ್ಷ್ಮ ಹಾಗೂ ಸ್ಥೂಲ ಹೊದಿಕೆಗಳು ತಮ್ಮ ಅಜ್ಞಾನದಿಂದಾಗಿಯೆ ಎಂಬುದು ಅವರ ಅರಿವಿಗೆ ಬಂತು ತಾವು ಹಾಗೂ ಭಗವಂತ ಇಬ್ಬರೂ ವಿಶ್ವಾತೀತರು ಎಂಬುದನ್ನು ಅವರು ಗ್ರಹಿಸಿದರು. ಹೀಗೆ ಮಳೆಗಾಲ ಹಾಗೂ ಶರತ್ಕಾಲಗಳಲ್ಲಿ ಆ ಮಹಾತ್ಮರು ಶ್ರೀಹರಿಯ ಅಪ್ಪಟ ಮಹಿಮೆಗಳನ್ನು ಸತತವಾಗಿ ಕೀರ್ತಿಸುವುದನ್ನು ಕೇಳುವ ಅವಕಾಶವು ನಾರದರಿಗೆ ಒದಗಿ ಬಂತು.

ಆ ಮುನಿವರ್ಯರಲ್ಲಿ ನಾರದರಿಗೆ ಅಕ್ಕರೆ ಬೆಳೆದಿತ್ತು. ಅವರಲ್ಲಿ ಅಚಲ ಶ್ರದ್ಧೆಯನ್ನು ನಾರದರು ಬೆಳೆಸಿಕೊಂಡಿದ್ದರು. ದೈಹಿಕವಾಗಿಯೂ ಮಾನಸಿಕವಾಗಿಯೂ ನಾರದರು ಆ ಮುನಿಗಳನ್ನು ಕಟ್ಟುನಿಟ್ಟಾಗಿ ಅನುಸರಿಸುತ್ತಿದ್ದರು. ಸ್ವಯಂ ದೇವೋತ್ತಮ ಪುರುಷರೇ ನೀಡಿದ್ದ ರಹಸ್ಯ ಉಪದೇಶವನ್ನು ಆ ಮುನಿವರ್ಯರು ತಮ್ಮ ಕಾರ್ಯ ಮುಗಿಸಿಕೊಂಡು ಹೋಗುವಾಗ ನಾರದರಿಗೆ ಉಪದೇಶಿಸಿ ಹೋದರು. ಆ ರಹಸ್ಯ ಉಪದೇಶವನ್ನು ಅರಿಯುವುದರಿಂದ ನಾವು ಪ್ರಭುವಿನ ಬಳಿಗೆ ಹೋಗಬಹುದು ಅವನನ್ನು ಖುದ್ದು ಕಾಣಬಹುದು. ನಾರದರು ಅವರ ತಾಯಿಯ ಒಬ್ಬನೇ ಮಗ. ಹಾಗಾಗಿ ಅವರ ತಾಯಿಗೆ ಆಶ್ರಯ ನೀಡಲು ಬೇರೆ ಯಾರು ಇರಲಿಲ್ಲ.ಒಂದು ದಿನ ರಾತ್ರಿ ವೇಳೆ ನಾರದರ ತಾಯಿಯು ಹಸುವಿನಿಂದ ಹಾಲು ಕರೆದುಕೊಳ್ಳಲು ಹೋದಾಗ ಆಕೆಯನ್ನು ಹಾವು ಕಚ್ಚಿಬಿಟ್ಟಿತು. ಇದು ಪ್ರಭುವಿನ ವಿಶೇಷ ವರವೆಂದೇ ನಾರದರು ಭಾವಿಸಿದರು. ‘ಪ್ರಭುವು ತನ್ನ ಭಕ್ತರಿಗೆ ಒಳ್ಳೆಯದನ್ನೇ ಕೋರುತ್ತಾನೆ - ಹೀಗೆಂದು ಆಲೋಚಿಸಿ ನಾರದರು ಉತ್ತರಾಭಿಮುಖವಾಗಿ ಹೊರಟರು . ಅವರು ಅನೇಕ ಪಟ್ಟಣಗಳನ್ನು ಗ್ರಾಮಗಳನ್ನು ಬೆಟ್ಟ ಗುಡ್ಡಗಳನ್ನು ಹಾದು ಮುನ್ನಡೆದರು. ಭಯಾನಕವೂ, ಗಾಢಾಂಧಕರದಿಂದ ತುಂಬಿದ್ದಾದ ದಟ್ಟ ಅರಣ್ಯಗಳನ್ನು ದಾಟಿ ಅವರ ನಡಿಗೆ ಸಾಗಿತು. ಹೀಗೆ ಪಯಣಿಸುತ್ತಾ ಅವರಿಗೆ ದಣಿವಾಗಿ ಹಸಿವು ಬಾಯಾರಿಕೆಗಳು ಕಾಣಿಸಿಕೊಂಡವು. ಹೀಗಾಗಿ ಅವರು ಒಂದು ಸರೋವರದಲ್ಲಿ ಸ್ನಾನಮಾಡಿದರು. ಸ್ವಲ್ಪ ನೀರನ್ನೂ ಕುಡಿದರು.

ತರುವಾಯ ಅವರು ಆಲದಮರವೊಂದರ ನೆರಳಿನಲ್ಲಿ ಕುಳಿತು ತಮ್ಮ ಹೃದಯಸ್ಥನಾದ ಪರಮಾತ್ಮನನ್ನು ಕುರಿತು ಧ್ಯಾನಿಸತೊಡಗಿದರು. ಹೀಗೆ ಮಾಡಬೇಕೆಂಬುದನ್ನು ಅವರು ಮುಕ್ತಾತ್ಮರಿಂದ ಅರಿತಿದ್ದರು. ಅವರ ಮನಸ್ಸು ಲೋಕವನ್ನು ಮೀರದ ಪ್ರೇಮದ ಮಡುವಾಯಿತು. ಕಣ್ಣುಗಳಿಂದ ನೀರಿನ ಧಾರೆಯೇ ಹರಿಯಿತು ಸ್ವಲ್ಪವೂ ತಡಮಾಡದೆ ದೇವೋತ್ತಮ ಪುರುಷ ಶ್ರೀಕೃಷ್ಣನು ಅವರ ಹೃದಯಕಮಲದ ಮೇಲೆ ಕಾಣಿಸಿಕೊಂಡನು. ಆನಂದಸಾಗರದಲ್ಲಿ ಮುಳುಗಿದ ನಾರದರು ತಮ್ಮನ್ನಾಗಲಿ ಪ್ರಭುವನ್ನಾಗಲಿ ಕಾಣದಾದರು. ಪ್ರಭುವಿನ ರೂಪವು ನೋಟಕ್ಕೆ ಮರೆಯಾದಾಗ ನಾರದರು ತಳಮಳಿಸುತ್ತಾ ಧಿಗ್ಗನೆ ಎದ್ದರು. ಅಪೇಕ್ಷಿತ ವಸ್ತುವು ಕಳೆದುಹೋದಾಗ ಸಾಧಾರಣವಾಗಿ ಎಲ್ಲರೂ ಮಾಡುವುದೂ ಇದನ್ನೇ.

ಪ್ರಭುವಿನ ದಿವ್ಯರೂಪವನ್ನು ಇನ್ನೊಮ್ಮೆ ನೋಡಲು ನಾರದರು ಬಯಸಿದರು. ಆದರೆ ಎಷ್ಟು ಸಲ ಪ್ರಯತ್ನಿಸಿದರೂ ಅವರು ಮತ್ತೆ ಭಗವಂತನನ್ನು ಕಾಣಲಾಗಲಿಲ್ಲ. ಹೀಗಾಗಿ ಅವರು ಬಹುವಾಗಿ ದುಃಖಿಸಿದರು.ನಾರದರು ತನ್ನನ್ನು ನೋಡಲು ಮೇಲಿಂದ ಮೇಲೆ ಪ್ರಯತ್ನಿಸುತ್ತಿದ್ದುದನ್ನು ಕಂಡು ದೇವೋತ್ತಮ ಪುರುಷನು ಅವರ ದುಃಖವನ್ನು ಶಮನಮಾಡಲು ಅವರನ್ನುದ್ದೇಶಿಸಿ ಮಧುರ ನುಡಿಗಳನ್ನಾಡಿದನು. “ಓ ನಾರದ, ಈ ಜನ್ಮದಲ್ಲಿ ನೀನು ಮತ್ತೆ ನನ್ನನ್ನು ಕಾಣಲಾರೆಯೆಂದು ತಿಳಿಸಲು ನನಗೆ ವಿಷಾದವುಂಟು. ಅರ್ಧಂಬರ್ಧ ಸೇವೆ ಮಾಡಿರುವವರು, ಹಾಗೆಯೇ ಲೌಕಿಕ ಕಳಂಕಗಳನ್ನು ಪೂರ್ತಿಯಾಗಿ ತೊಡೆದು ಹಾಕದವರು ನನ್ನನ್ನು ಕಾಣುವುದು ಕಷ್ಟ ನೀನು ನನ್ನ ವೈಯುಕ್ತಿಕ ರೂಪವನ್ನು ನೋಡಿದೆ. ನನ್ನನ್ನು ನೋಡಬೇಕೆಂಬ ನಿನ್ನ ಹಂಬಲ ಹೆಚ್ಚಾಗಲೆಂದು ನಾನು ನಿನಗೆ ಆ ರೂಪವನ್ನು ತೋರಿಸಿದೆ.ಏಕೆಂದರೆ ನನ್ನನ್ನು ನೋಡಬೇಕೆಂಬ ನನ್ನ ಆಸೆ ತೀವ್ರವಾದಷ್ಟೂ ನನ್ನ ಪ್ರಾಪಂಚಿಕ ಅಪೇಕ್ಷೆಗಳು ನಿನ್ನನ್ನು ಬಿಡುತ್ತಾ ಹೋಗುತ್ತವೆ.’’

ತರುವಾಯ, ಕಣ್ಣಿಗೆ ಕಾಣಿಸದಂತಿದ್ದ ಆದರೆ ಶಬ್ದರೂಪದಲ್ಲಿ ಗ್ರಹಿಕೆಗೆ ಸಿಕ್ಕುವಂತಿದ್ದ ಆ ಅದ್ಭುತ ರೂಪದ ಪರಮ ನಿಯಾಮಕನು ಮಾತನಾಡುವುದನ್ನು ನಿಲ್ಲಿಸಿದನು. ಆಗ ನಾರದರು ಕೃತಜ್ಞತೆಯ ಭಾವದಲ್ಲಿ ಆ ಪರಮ ಪುರುಷನಿಗೆ ತಲೆಬಾಗಿ ನಮಿಸಿದರು. ಮುಂದೆ ಅವರು ಪ್ರಭುವಿನ ಪವಿತ್ರನಾಮ ಪ್ರಾರಂಭಿಸಿದರು. ಕಾಲಕ್ರಮದಲ್ಲಿ ಅವರು ಕೃಷ್ಣನನ್ನು ಕುರಿತು ಧ್ಯಾನಿಸುವುದರಲ್ಲಿ ಪೂರ್ತಿ ಮಗ್ನರಾದರು. ಹೀಗಾಗಿ ಅವರ ಲೌಕಿಕ ಕಳಂಕಗಳು ತಡೆದು ಹೋದವು. ಲೋಕದ ಅಪೇಕ್ಷೆಗಳು ಅವರನ್ನು ಬಿಟ್ಟುಹೋದವು. ಇದೇ ಸ್ಥಿತಿಯಲ್ಲಿ ನಾರದರು ನಿಧನರಾದರು. ಮಿಂಚು ಹಾಗೂ ಬೆಳಕು ಏಕಕಾಲದಲ್ಲಿ ಉಂಟಾಗುವಂತೆ, ದೇವೋತ್ತಮ ಪುರುಷನ ಸಂಗಾತಿಯೊಬ್ಬನಿಗೆ ಉಚಿತವಾದ ಲೋಕಾತೀತ ದೇಹವೊಂದು ಅವರಿಗೆ ನೀಡಲಾಯಿತು. ಅವರು ಪಂಚಭೂತಗಳಿಂದ ಮಾಡಿದ ಭೌತ ಶರೀರವನ್ನು ತ್ಯಜಿಸಿದರು. ಹೀಗೆ ಕರ್ಮ ಅಥವಾ ಕೆಲಸದ ಸಂಚಿತ ಫಲಗಳು ಅವರಿಗೆ ಬರುವುದು ನಿಂತವು.

ಸರ್ವಶಕ್ತನಾದ ವಿಷ್ಣುವಿನ ಅನುಗ್ರಹ ದೊರೆತ ಅಂದಿನಿಂದ ನಾರದರು ಎಲ್ಲೆಲ್ಲೂ ಎಂದರೆ ನಾವು ಕಾಣದ ಪ್ರಪಂಚದಲ್ಲಿ ಹಾಗೂ ನಮ್ಮ ಈ ಪ್ರಪಂಚದ ತ್ರಿಲೋಕಗಳಲ್ಲಿ ಸಂಚಾರ ಮಾಡುತ್ತಿರುತ್ತಾರೆ. ಅವರು ಪ್ರಭುವಿನ ಭಕ್ತಿಸೇವೆ ಮಾಡುವ ಕಾರ್ಯದಲ್ಲಿ ದೃಢವಾಗಿ ನೆಲೆನಿಂತಿರುವುದರಿಂದ ಅವರಿಗೆ ಈ ಸಂಚಾರ ಪ್ರಾಪ್ತವಾಗಿದೆ. ಇತ್ತ ನಾರದರು ಅಡೆತಡೆಯಿಲ್ಲದೆ ಪ್ರಭುವಿನ ದಿವ್ಯ ಸಂದೇಶಗಳನ್ನು ವೀಣಾವಾದನದ ಮೂಲಕ ನೀಡುತ್ತಾ ಸಂಚರಿಸುತ್ತಿರುತ್ತಾರೆ. ನಾರದರು ಪ್ರಭುವಿನ ಪವಿತ್ರ ನಾಮಗಳನ್ನು ಸಂಕೀರ್ತಿಸಲು ಪ್ರಾರಂಭಿಸುತ್ತಿದ್ದಂತೆಯೇ,ಯಾರ ಮಹಿಮೆಗಳು ಹಾಗೂ ಚಟುವಟಿಕೆಗಳು ಕೇಳಲು ಬಹು ಮನೋಹರವಾದುವೋ ಆ ಪರಮ ಪ್ರಭೂ ಶ್ರೀಕೃಷ್ಣನು ತನ್ನನ್ನು ಕರೆದರೋ ಎಂಬಂತೆ ಬಂದು ಅವರ ಹೃದಯ ಪೀಠವನ್ನು ಅಲಂಕರಿಸುತ್ತಾನೆ. ಯಾರು ಇಂದ್ರಿಯಗಳಿಗೆ ಸಂಬಂಧಿಸಿದ ವಸ್ತು ವಿಷಯಗಳಿಗಾಗಿ ಆಸೆಪಟ್ಟು ಸದಾ ತವಕ ತುಂಬಿದವರಾಗಿರುತ್ತಾರೋ ಅಂತಹವರು ಅಜ್ಞಾನವೆಂಬ ಕಡಲನ್ನು ದಾಟಲು ಒಂದು ಅತ್ಯಂತ ಸೂಕ್ತ ದೋಣಿಯನ್ನು ಬಳಸಬಹುದು. ದೇವೋತ್ತಮ ಪುರುಷನ ಚಟುವಟಿಕೆಗಳ ಸತತ ಸಂಕೀರ್ತನೆಯೇ ಆ ನಾವೆಯೆಂಬುದು ನಾರದರ ವೈಯುಕ್ತಿಕ ಅನುಭವ.

# ಓಂಕಾರವು ವೈಜ್ಞಾನಿಕ ವಿಶ್ವದ ಮಾದರಿ

- ಹೇಮಂತ್‌ಕುಮಾರ್. ಜಿ

89717 74594

ಓಂಕಾರವು ಭರತ ಖಂಡದ ಅಣುಅಣುವಿನಲ್ಲಿ ಅನಾದಿ ಕಾಲದಿಂದ ಅನುರಣಿಸುತ್ತಿರುವ ಮೂಲನಾದ. ಅದು ಇತ್ತೀಚಿನ ವರ್ಷಗಳಲ್ಲಿ ಧಾರ್ಮಿಕವಾಗಿ ದೇವರೊಂದಿಗೆ ಸಂಭಾಷಿಸುವ ಮಾಧ್ಯಮವೋ ಎಂಬಂತಹಾ ಪ್ರಚಾರವನ್ನೂ ಪಡೆದುಕೊಂಡಿದೆ. ಆದರೆ ನಮ್ಮ ಋಷಿಗಳಿಗೆ ಓಂಕಾರವು ಅರ್ಥವಾದದ್ದು ಇನ್ನೂ ವಿಭಿನ್ನವಾಗಿ, ವೇದ - ವಿಜ್ಞಾನದ ಪರಿಭಾಷೆಯಲ್ಲಿ, ಎಂದು ಕಂಡುಬರುತ್ತದೆ. ಅದನ್ನು ಈಗಿನ ವಿಜ್ಞಾನದಂತೆಯೂ ಅರ್ಥ ಮಾಡಿಕೊಳ್ಳಬಹುದು. ಕಣ ಭೌತಶಾಸ್ತ್ರದ ಸ್ಟ್ಯಾಂಡರ್ಡ್ ಮಾದರಿಯಲ್ಲಿ ಓಂಕಾರವು ವಿಶ್ವದ ಪ್ರತೀಕವಾಗಿದೆ. ಮಾಂಡೂಕ್ಯ ಉಪನಿಷತ್ತು ಓಂಕಾರವನ್ನು ವಿಸ್ತಾರವಾಗಿ ವಿವರಿಸಿದೆ. ಜನರು ತಿಳಿದಿರಬಹುದು. ಓಂಕಾರವು 3 ಶಬ್ದಗಳಿಂದಾಗಿದೆ. ಆದರೆ ಅದಕ್ಕೂ ಸ್ವಲ್ಪ ಮುಂದುವರೆದರೆ ಅದು 4 ಪಾದಗಳಿಂದಾಗಿದೆ ಎಂದು ಮಾಂಡೂಕ್ಯವೂ ಹೇಳಿದೆ. ಮೂರು ಶಬ್ದಗಳ ನಂತರ ಒಂದು ನಿಶ್ಶಬ್ದ. ಓಂಕಾರದ ನಂತರ ನಿಶ್ಶಬ್ದ ಇರಬೇಕಾಗುತ್ತದೆ. ನಿಶ್ಶಬ್ದದ ಹೊರತು ಓಂ ಪೂರ್ಣವಾಗುವುದಿಲ್ಲ.

ಅಕಾರದಲ್ಲಿ ತುಟಿಗಳು ದೂರಸಾಗಿ ಧ್ವನಿ ಪೆಟ್ಟಿಗೆಯಿಂದ ಶಬ್ದ ಹೊರಟು ಬಾಯಿಂದ ಹೊರಬಂದು ತುಟಿಗಳಾಟವಿಲ್ಲದೆ ಉಚ್ಚಾರವಾಗುತ್ತದೆ. ಅದು ಧ್ವನಿ ಪೆಟ್ಟಿಗೆಯಿಂದ ಹೊರಡುವ ಹಸಿ ಶಬ್ದ; ಮೂಲ ಸ್ವರ, ಉಕಾರದಲ್ಲಿ ತುಟಿಗಳು ಹತ್ತಿರ ಬಂದು ಧ್ವನಿ ಪೆಟ್ಟಿಗೆಯಿಂದ ಹೊರಟ ಶಬ್ದವು ತುಟಿಗಳಿಂದ ಸಮ್ಮೂರ್ಛಿತವಾಗಿ ಸಾಗುತ್ತದೆ. ಅದು ಸೂಕ್ಷ್ಮ ಸ್ವರ. ಮಕಾರ ಹೇಳಿದಾಗ, ತುಟಿಗಳು ಮುಚ್ಚಿದ್ದು ಶಬ್ದವು ಧ್ವನಿಪೆಟ್ಟಿಗೆಯ ಪ್ರತಿನಾದ ಮಾತ್ರವಾಗಿರುತ್ತದೆ. ಇದೊಂದು ರೀತಿಯ ನಿದ್ರಾ ಶಬ್ದವಾಗಿದ್ದು ನಿಮ್ಮನ್ನು ನಿದ್ರೆಗೆ ಜಾರಿಸಬಲ್ಲದು.

ನಮ್ಮ ಪ್ರತಿಪಾದನೆ ಏನೆಂದರೆ ಮಾಂಡೂಕ್ಯ ಉಪನಿಷತ್ತು ಓಂಕಾರವನ್ನು ವಿಶ್ವದ ನಮೂನೆಯನ್ನಾಗಿ ವಿವರಿಸುತ್ತದೆ. ಆ ಮಾದರಿಯನ್ನು ಋಷಿಗಳು ಆ ಕಾಲದಲ್ಲಿ ಹೇಗೆ ದೃಷ್ಟಿಸಿದ್ದರೋ ನಮಗೆ ತಿಳಿದಿಲ್ಲ. ತಮ್ಮ ಆಂತರಿಕ ಅನುಭವ ಮತ್ತು ಸಾದೃಶ್ಯಗಳಿಂದ ಮಾದರಿ ಮಾಡಿಕೊಂಡಿದ್ದಿರಬಹುದು. ಆದರೆ ಈಗ ಓಂಕಾರವನ್ನು ವಿಜ್ಞಾನವು ವಿವರಿಸುವ ವಿಶ್ವದ ಸ್ಟ್ಯಾಂಡರ್ಡ್ ಮಾದರಿಗೆ ಹೋಲಿಸಬಹುದು.

ಮಾಂಡೂಕ್ಯೋಪನಿಷತ್ತು ಹೇಳುತ್ತದೆ, ಓಂಕಾರವು ಬ್ರಹ್ಮದ ಅಥವಾ ವಿಕಾಸವಾಗುತ್ತಿರುವ ವಿಶ್ವದ ಪ್ರತಿನಿಧಿ. ಓಂಕಾರವು ಸ್ಟ್ಯಾಂಡರ್ಡ್ ಮಾದರಿಯನ್ನು ಹೀಗೆ ಪ್ರತಿನಿಧಿಸುತ್ತದೆ - ಕಣ ವ್ಯಪದೇಶ, ಬಲ ವ್ಯಪದೇಶ, ಕಪ್ಪು ಸತ್ವ ಹಾಗೂ ಕಪ್ಪು ಊರ್ಜೆ. ಓಂಕಾರವು ಸ್ಟ್ಯಾಂಡರ್ಡ್ ಮಾದರಿಯಲ್ಲಿರುವಂತೆಯೇ ಈ ವಿಶ್ವದ ರಚನೆಯನ್ನು ವರ್ಣಿಸಿದೆ. ಹೇಗೆ, ನೋಡೋಣ ಬನ್ನಿ.

ಮಾಂಡೂಕ್ಯೋಪನಿಷತ್ತಿನ ಪ್ರಕಾರ ನಾಲ್ಕು ಪಾದಗಳುಳ್ಳ ಓಂಕಾರದಲ್ಲಿ ಹಿಂದೆ ತಿಳಿಸಿದಂತೆ 3 ಶಬ್ದಗಳು ಹಾಗೂ 1 ನಿಶ್ಶಬ್ದ ಇರುತ್ತದೆ ಎಂಬುದು ಭಾಷಾ ವಿಜ್ಞಾನದ ಒಂದು ದೃಷ್ಟಿಕೋನ.

1. ವೈಶ್ವಾನರ - ಕಣ ಪ್ರತಿನಿಧಿತ್ವ :

ಮಾಂಡೂಕ್ಯ ಉಪನಿಷತ್ತಿನಂತೆ ಓಂಕಾರದ ಮೊದಲ ಪಾದವು ವೈಶ್ವಾನರ. ಇದು ಎಚ್ಚರಗೊಳ್ಳುವ ಸ್ಥಿತಿ, ಸ್ಥೂಲ ಧಾತುಗಳಿದನ್ನು ಅನುಭವಿಸುವುವು. ಪ್ರಜ್ಞೆಯು ಬಹಿರ್ಮುಖ ಅಥವಾ ಉತ್ತಾನಾರ್ಥವಾಗಿರುತ್ತದೆ. ವೈಶ್ವಾನರವೆಂದರೆ ವಿಶ್ವದಲ್ಲಿರುವ ಮರ್ತ್ಯ ಸತ್ವ (ನರ) ಮಾಂಡೂಕ್ಯದ ಪ್ರಕಾರ ಇದು ಸ್ಥೂಲ ಸ್ಥಿತಿ. ಸ್ಥೂಲವು ಮೇಲ್ನೋಟಕ್ಕೆ ಕಣದ ಪ್ರತಿನಿಧಿತ್ವ.

ವೈಜ್ಞಾನಿಕ ದೃಷ್ಟಿಯಲ್ಲಿ ವೈಶ್ವಾನರವು ಸ್ಟ್ಯಾಂಡರ್ಡ್ ಮಾದರಿಯಲ್ಲಿರುವ ಫಂಡಮೆಂಟಲ್ ಪಾರ್ಟಿಕಲ್ ರೆಪ್ರಸೆಂಟೇಷನ್ (ಸ್ಥೂಲ). ಮಾಂಡೂಕ್ಯದಂತೆ ವೈಶ್ವಾನರ ಸ್ಥಿತಿಯಲ್ಲಿರುವ ಓಂಕಾರಕ್ಕೆ ಸಪ್ತಾಂಗಗಳಿವೆ. ಸ್ಟ್ಯಾಂಡರ್ಡ್ ಮಾದರಿಯಲ್ಲಿ 7 ಮೂಲಭೂತ ವಿಭಾಗಗಳಿವೆ.

1. ಕ್ವಾರ್ಕ್‌ಗಳು (ಬೇಯಾನ್ಗಳು, ಲೆಪ್ಟಾನ್ಗಳು ಹಾಗೂ ಕ್ವಾರ್ಕ್ ಸವಕಳಿಯಿಂದ ಉದಯಿಸುವ ಮ್ಯಾಟರ್)
2. ಗ್ಲೂಆನ್
3. ಡಬ್ಲ್ಯು ಬೋಸಾನ್,
4. ಜೆಡ್ ಬೋಸಾನ್
5. ಹಿಗ್ಸ್ ಬೋಸಾನ್,
6. ಫೋಟಾನ್ಗಳು ಹಾಗೂ
7. ಮೀಸಾನ್ಗಳು (ಹಾಗೂ ಇನ್ನಿತರೆ ಯ್ಯಾಂಟೀ - ಮ್ಯಾಟರ್‌ಗಳು).

ಇವುಗಳೇ ಸತ್ವದ 7 ಮೂಲ ವಿಭಾಗಗಳು.

ಆದಿಸ್ವರೂಪದ ಸತ್ವದ ಮೋಡಗಳಿಂದ (ಪ್ರೀಮಾರ್ಡಿಯಲ್ ಮ್ಯಾಟರ್ ಕ್ಲೌಡ್) ಕ್ವಾರ್ಕ್‌ಗಳು (ಮತ್ತವುಗಳ ಯ್ಯಾಂಟೀ - ಕ್ವಾರ್ಕ್‌ಗಳು), ಎಲೆಕ್ಟ್ರಾನ್ಗಳು (ಮತ್ತವುಗಳ ಪೊಸಿಟ್ರಾನ್ಗಳು) ನ್ಯೂಟ್ರಿನೋಗಳು (ಮತ್ತವುಗಳ ಯ್ಯಾಂಟೀ - ನ್ಯೂಟ್ರಿನೋಗಳು) ಕ್ಷೀಣ ಶಕ್ತಿಯ (ವೀಕ್ ಫೋರ್ಸ್) ಕ್ರಿಯೆಯಿಂದ ಉಂಟಾಗುತ್ತದೆ. ಕ್ವಾರ್ಕ್‌ಗಳಿಂದ ಪ್ರೋಟಾನ್ಗಳು ಹಾಗೂ ನ್ಯೂಟ್ರಾನ್ಗಳು ಬರುವವು. ಅವುಗಳಿಂದ ಪರಮಾಣು, ಅಣು, ಧಾತು, ಸಂಕೀರ್ಣ ಹಾಗೂ ಜೀವ ಜಗತ್ತು ವಿಕಾಸ ಹೊಂದುತ್ತವೆ. ಆದರೆ ಈ 7 ವಿಭಾಗಗಳು ಮೂಲ ಭೂತವಾಗಿದ್ದು, ಪ್ರಸಕ್ತ ವೈಜ್ಞಾನಿಕ ದೃಷ್ಟಿಕೋನದಲ್ಲಿ ವಿಶ್ವ ಸೃಷ್ಟಿಗೆ ಪ್ರಚೋದನೆ ನೀಡುತ್ತದೆ ಎಂದು ನಂಬಲಾಗಿದೆ.

ಮಾಂಡೂಕ್ಯ ಹೇಳುತ್ತದೆ, ವೈಶ್ವಾನರದಲ್ಲಿರುವ (ಕಣ) ಸ್ಥಿತಿಯ ಓಂಕಾರದಲ್ಲಿ ಏಕೋನವಿಂಶತಿ (೧೯) ಮುಖಗಳಿರುತ್ತವೆ. ಅವುಗಳಿಂದಲೇ ಬಾಹ್ಯವ್ಯಕ್ತತೆ. ಆಧುನಿಕ ವಿಜ್ಞಾನಿಗಳು ತಮ್ಮ ಸಿದ್ಧಾಂತಗಳಲ್ಲಿ ಮತ್ತು ಪ್ರಾಯೋಗಿಕವಾಗಿ ಕಂಡುಕೊಂಡ ಸತ್ವ ಸ್ಥಿತಿಗಳನ್ನು (ಸ್ಟೇಟ್ಸ್ ಆಫ್ ಮ್ಯಾಟರ್) ಹೇಗೆ ಹೇಳುತ್ತಾರೆ ನೋಡೋಣ.

1. ಅಮಾರ್ಫಸ್ ಘನಗಳು,
2. ಸ್ಫಟವತ್‌ಘನಗಳು
3. ದ್ರವಗಳು
4. ಸ್ಫಟವತ್ ದ್ರವಗಳು,

5. ಅನಿಲ,

6. ಸೂಪರ್ ಕ್ರಿಟಿಕಲ್ ದ್ರವ

7. ಕೊಲ್ಲೈಡ್

8. ಪ್ಲಾಸ್ಮಾ

9. ಎಲೆಕ್ಟ್ರಾನ್ ಡೀಜೆನರೇಟ್ ಮ್ಯಾಟರ್

10. ನ್ಯೂಟ್ರೋನಿಯಮ್,

11. ಎರಡನೇ ಆಯಾಮದ ಎಲೆಕ್ಟ್ರಾನ್ ಸಿಸ್ಟಮ್ಗಳ ಕ್ವಾಂಟಮ್ ಹಾಲ್

12. ಕ್ವಾಂಟಮ್ ಸ್ಪಿನ್ ಹಾಲ್ ಸ್ಥಿತಿ,

13. ಬೋಸ್ ಐನ್ಸ್ಟೈನ್ ಕಂಡನ್ಸೇಟ್,

14. ಫರ್ಮಿಯಾನಿಕ್ ಕಂಡನ್ಸೇಟ್

15. ಸೂಪರ್ ಘನಗಳು

16. ಸೂಪರ್ ದ್ರವಗಳು

17. ಕ್ವಾರ್ಕ್ - ಗ್ಲೂಆನ್ ಪ್ಲಾಸ್ಮಾ

18. ವೀಕ್ ಸಿಮಿಟ್ರಿಕ್ ಮ್ಯಾಟರ್ ಹಾಗೂ

19. ಸ್ಟ್ರಾಂಗ್ ಸಿಮಿಟ್ರಿಕ್ ಮ್ಯಾಟರ್

ಇವೆಲ್ಲಾ ಒಟ್ಟು ೧೯ ಸ್ಥಿತಿಗಳಾಗುತ್ತವೆ. ಇವುಗಳಲ್ಲಿಯೇ ಸತ್ವವು ತನ್ನನ್ನು ತಾನು ವ್ಯಕ್ತಪಡಿಸಿಕೊಳ್ಳುತ್ತದೆ. ಹಾಗಾಗಿ ಇವುಗಳೇ ಸತ್ವದ (ಮ್ಯಾಟರ್) ಮುಖಗಳು.

### 2. ತೈಜಸ - ತರಂಗ / ಬಲ ಪ್ರತಿನಿಧಿತ್ವ

ಮಾಂಡೂಕ್ಯ ರೀತ್ಯಾ, ಓಂಕಾರದ ಎರಡನೆಯ ಪಾದ ತೈಜಸ. ಇಲ್ಲಿ ಪ್ರಜ್ಞೆಯು ಆಂತರ್ಯದಲ್ಲಿ ಆಳವಾಗಿರುತ್ತದೆ. ಈ ಸ್ಥಿತಿಯನ್ನೇ ಸೂಕ್ಷ್ಮ ಧಾತುಗಳು ಅನುಭವಿಸುತ್ತವೆ. ತೈಜಸವೆಂದರೆ ತೇಜಸ್ಸು ಅಥವಾ ಬೆಳಕಿನಿಂದಾದದ್ದು. ವೈಜ್ಞಾನಿಕ ದೃಷ್ಟಿಯಲ್ಲಿ ತೈಜಸವು ಸ್ಟ್ಯಾಂಡರ್ಡ್ ಮಾದರಿಯಲ್ಲಿನ ಮೂಲಭೂತ ಬಲವನ್ನು (ಫಂಡಮೆಂಟಲ್ ಫೋರ್ಸ್) ಪ್ರತಿನಿಧಿಸುತ್ತದೆ. ಮಾಂಡೂಕ್ಯವು ತೈಜಸದಲ್ಲಿರುವ ಸ್ಥಿತಿಯಲ್ಲಿರುವ ಓಂಕಾರವೂ ವೈಶ್ವಾನರ ಸ್ಥಿತಿಯಂತೆಯೇ ೭ ಅಂಗಗಳನ್ನು ಮತ್ತು ೧೯ ಮುಖಗಳನ್ನು ಹೊಂದಿರುತ್ತದೆ ಎಂದಿದೆ.

1. ಅಪ್ರವೃತ್ತಿ (ಇನರ್ಷಿಯಾ / ಮ್ಯಾಟರ್ ಪ್ರದರ್ಶಿತ ಗುರುತ್ವ).

2. ದೃಢ ಬಲ (ಸ್ಟ್ರಾಂಗ್ ಫೋರ್ಸ್ / ಗ್ಲೂ ಆನ್ಗಳಿಗೆ ಸಂಬಂಧಿಸಿದ್ದು).

3. ಡಬ್ಲ್ಯೂ ಬೋಸಾನ್ಗಳಿಂದ ಪ್ರವಹನೆಯಾಗುವ ಕ್ಷೀಣ ಬಲವು ಉಂಟುಮಾಡುವ ಎಲಾಸ್ಟಿಕ್ ಚದುರುವಿಕೆ.

4. ಜೆಡ್ ಬೋಸಾನ್ಗಳಿಂದ ಪ್ರವಹನೆಯಾಗುವ ಕ್ಷೀಣ ಬಲವು ಉಂಟು ಮಾಡುವ ಎಲಾಸ್ಟಿಕ್ ಅಲ್ಲದ ಚದುರುವಿಕೆ.

5. ಸತ್ವದ ಗುಣ (ಹಿಗ್ಸ್ ಬೋಸಾನಿನಿಂದ ಉಂಟಾಗುವ ಪ್ರಾಪರ್ಟಿ ಆಫ್ ಮಾಸ್)

6. ವಿದ್ಯುತ್ಕಾಂತೀಯ ಬಲ (ಫೋಟಾನ್) ಹಾಗೂ

7. ಆಣ್ವಿಕ ಬಲ (ಮೀಸಾನ್ಗಳಿಂದ ಪ್ರವಹಿತ ನ್ಯೂಕ್ಲಿಯಾರ್ ಫೋರ್ಸ್ / ರೆಸಿಡ್ಯುಯಲ್ ಸ್ಟ್ರಾಂಗ್ ಫೋರ್ಸ್)

ಇವುಗಳೇ 7 ಕಣಗಳಿಗೆ ಸಂಬಂಧಿಸಿದ 7 ಬಲಗಳು. ಏಕೆ ಹೀಗೆಂದರೆ ತೈಜಸ ಮತ್ತು ವೈಶ್ವಾನರಗಳು ಒಂದೇ ಸ್ಥಿತಿಯ ವಿವಿಧ ಪ್ರದರ್ಶನಗಳಷ್ಟೆ. ಒಂದು ಸ್ಥೂಲ (ಕಣ) ಪ್ರದರ್ಶನವಾದರೆ, ಇನ್ನೊಂದು ತೇಜಸ್ಸಿನ (ಬೆಳಕು/ಬಲ) ಪ್ರದರ್ಶನ. ಸ್ಟ್ಯಾಂಡರ್ಡ್ ಮಾದರಿಯ ಪ್ರಕಾರ, ಫಂಡಮೆಂಟಲ್ ಪಾರ್ಟಿಕಲ್ಗಳು ಬಲ (ತೈಜಸ) ಮತ್ತು ಕಣ (ಸ್ಥೂಲ) ಎಂಬ ದ್ವಂದವನ್ನು ಹೊಂದಿರುತ್ತವೆ. ಇದು ಮಾಂಡೂಕ್ಯೋಪನಿಷತ್ತಿನಲ್ಲಿ ವೈಶ್ವಾನರ ಮತ್ತು ತೈಜಸ ಸ್ಥಿತಿಗಳ ಆಧುನಿಕ ಪ್ರತಿಪಾದನೆ.

### 3. ಪ್ರಾಜ್ಞ - ಕಪ್ಪು ಸತ್ವ (ಡಾರ್ಕ್ ಮ್ಯಾಟರ್)

ಓಂಕಾರದ ಮೂರನೆಯ ಪಾದವೇ ಪ್ರಾಜ್ಞ ಅಂದರೆ ಗಾಢನಿದ್ರೆ, ಪ್ರಜ್ಞೆಗೆ ಸಂಬಂಧಿಸಿದ ಸ್ಥಿತಿ ಹೊಂದಿದ್ದಾಗ ಪ್ರಾಜ್ಞ. ಈ ಪಾದವು ನಿತ್ಯ ಶಾಂತಿಯಿಂದ ತುಂಬಿರುವ ಅಭಿನ್ನ ಸತ್ವ, ಆಳದಲ್ಲಿರುತ್ತದೆ. ಸದಾ ನಿದ್ರಿಸುತ್ತಿರುತ್ತದೆ ಹಾಗೂ ಸುಲಭ ಗ್ರಾಹ್ಯವಲ್ಲ.

ವೈಜ್ಞಾನಿಕ ದೃಷ್ಟಿಯಿಂದ ನೋಡಿದರೆ, ಯಾವುದು ತನ್ನನ್ನು ತಾನು ವ್ಯಕ್ತಪಡಿಸುವುದಿಲ್ಲವೋ, ಯಾವುದು ತನ್ನ ಪ್ರಜ್ಞೆಗೆ ಅಥವಾ ಪರಿಕರಗಳಿಗೆ ನಿಲುಕುವುದಿಲ್ಲವೋ ಅದು ಕಪ್ಪು ಸತ್ವ. ಇದು ನಮ್ಮ ವಿಶ್ವ ಮಾದರಿಯ ಪ್ರಮುಖ ವಿಭಾಗ; ಆದರೆ ಗುರುತಿಸಲಾಗದ್ದು. ಹಾಗಾಗಿಯೇ ಕಪ್ಪು ಕೃಷ್ಣ ಎಂದದ್ದು. ಇದು ವಿಶ್ವದ ಸ್ಟ್ಯಾಂಡರ್ಡ್ ಮಾದರಿಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ವೈಜ್ಞಾನಿಕ ದೃಷ್ಟಿಯಲ್ಲಿ ಪ್ರಾಜ್ಞವೆಂಬ 4 ನೇ ಪಾದವು ಕಪ್ಪು ಸತ್ವಕ್ಕೆ ಸಂಬಂಧಿಸಿದೆ. ಮಾಂಡೂಕ್ಯ ರೀತ್ಯಾ ಈ ಪಾದವು ಚೇತೋಮುಖಿ. ಅಂದರೆ ಹಿಂದಿನ ಪಾದಗಳಂತೆ ಈ ಪಾದದಲ್ಲಿ ವಿಭಾಗಗಳು ಅಥವಾ ಸ್ವಂತ ವ್ಯಕ್ತತೆ ಇಲ್ಲ. ಇದು ಇನ್ನೊಂದರ ಮೇಲೆ ಮಾಡುವ ಪರಿಣಾಮದಿಂದ ಮಾತ್ರ ಗುರುತಿಸಲು ಸಾಧ್ಯ. ಇದು ಪ್ರಜ್ಞೆಯಿಂದ ಮಾತ್ರ ಅನುಭವಕ್ಕೆ ಬರುತ್ತದೆ. ಈ ಡಾರ್ಕ್ ಮ್ಯಾಟರಿಗೆ ಯಾವುದೇ ಬಿಡಿಭಾಗಗಳು ಅಥವಾ ಸ್ಥಿತಿಗಳಿಲ್ಲ. ಇದನ್ನು ನೋಡುವುದಾಗಲೀ ಅಥವಾ ಗುರುತಿಸುವುದಾಗಲೀ ಸಾಧ್ಯವಿಲ್ಲ. ಇದು ಇತರೆ ಸತ್ವಗಳ ಮೇಲೆ ಮಾಡುವ ಪರಿಣಾಮದಿಂದ ಅನುಭವ ವೇದ್ಯವಾಗುತ್ತದೆ.

### 4. ಕಪ್ಪು ಊರ್ಜೆ (ಡಾರ್ಕ್ ಎನರ್ಜಿ) - ಅನಿರ್ವಚನೀಯ

ಮಾಂಡೂಕ್ಯೋಪನಿಷತ್ತಿನಂತೆ ಓಂಕಾರದ ನಾಲ್ಕನೆಯ ಪಾದವು ಶಬ್ದವಿಲ್ಲದ್ದು, ಹೇಳಲಾಗದ್ದು, ಸಂಬಂಧಿತ ವ್ಯಕ್ತತೆಗಳನ್ನು ನಿಶ್ಶಬ್ದಗೊಳಿಸುವ ಶಾಂತಿಯುತ, ಆನಂದಮಯ, ಅದ್ವೈತ ಸ್ಥಿತಿ.

ಮಾಂಡೂಕ್ಯವು ಇದನ್ನು "ಎಲ್ಲದರ ಒಡೆಯ; ಒಳ ಸಂಚಾರಿತ ನಿಯಂತ್ರಕ ಎಲ್ಲದರ ಮೂಲ ಇದೇ ಎಲ್ಲದರ ಆದಿ ಹಾಗೂ ಅಂತ್ಯ" ಎಂದಿದೆ. ಇನ್ನೂ ಮುಂದುವರೆದು "ಇದು ಒಳಗೂ ಹೊರಗೂ ತಿರುಗಿರುವ ಪ್ರಜ್ಞೆಯಲ್ಲ, ಅವೆರಡೂ ಕೂಡಿದ ಪ್ರಜ್ಞೆಯೂ ಅಲ್ಲ, ಪ್ರಜ್ಞೆಯು ಅಭಿನ್ನ ಸತ್ವವಲ್ಲ. ತಿಳಿವು ಮೌಢ್ಯವು ಅಲ್ಲ, ಅಗೋಚರ ಅಶಸ್ತ ಅಸ್ಪರ್ಶ, ಗುಣಾತೀತ, ಅನೂಹ್ಯ, ಅಸನಿರ್ದಶನ, ಇದರ ಒಟ್ಟು ಸಾರವೆಂದರೆ ತಾನೇ ತಾನಾಗಿರುವ ಪ್ರಜ್ಞೆ; ಉಳಿದೆಲ್ಲ ಅಸ್ತಿತ್ವಗಳು ಮರುಳುವ ಶಾಂತ ಸ್ಥಿತಿಯೇ ಇದು; ಬಹಳ ನಿಶ್ಶಬ್ದ; ಶಾಂತ; ಆನಂದಮಯ ಅದ್ವಯ; ಅದೇ "ಆತ್ಮನ್", ನಾನು; ಇದರರಿವು ಪಡೆಯಬೇಕು" ಎಂದಿದೆ. ವಿಜ್ಞಾನ ರೀತ್ಯಾ ಇದು ಬಿಗ್-ಬ್ಯಾಂಗ್ ನಂತರ ವಿಶ್ವವನ್ನು ವಿಸ್ತರಿಸುತ್ತಿರುವ ಊರ್ಜೆಗೆ ಸಮ. ಕಪ್ಪು ಊರ್ಜೆಯ ಬಿಗ್-ಬ್ಯಾಂಗ್ ನಂತರ ಉದಯಿಸಿದ ಊರ್ಜೆಗೆ ಸಮ. ಅದುವೇ ಎಲ್ಲಾ ಮಾನವರ ಆದ್ಯಂತ.


ವಿಜ್ಞಾನವು ಮುಂದುವರೆದಂತೆ, ತಮ್ಮ ಸುತ್ತಲಿರುವ ಕಪ್ಪು ಸತ್ವ ಮತ್ತು ಕಪ್ಪು ಊರ್ಜೆಯನ್ನು ಚೆನ್ನಾಗಿ ಗುರುತಿಸಲು, ಚೆನ್ನಾಗಿ ಅನುಭವ ಪಡೆಯಲು ಹಾಗೂ ಚೆನ್ನಾಗಿ ಅರ್ಥಮಾಡಿಕೊಳ್ಳಲು ಮಾನವರೇ ಪರಿಕರಗಳಾಗಿ ಪ್ರಬುದ್ಧರಾಗುತ್ತಾರೆ. ಆದರೂ, ಎಲ್ಲಾ ಶಬ್ದಗಳಾಚೆಯ ನಿಶ್ಶಬ್ದದಂತೆ, ತಿಳಿಯಲಾಗದ್ದು ಇದ್ದೇ ಇರುತ್ತದೆ. ಅದನ್ನು ತಿಳಿಯಲಾಗುವುದಿಲ್ಲ. ಅದೇನೆಂದರೆ ಅದೂ ಅಲ್ಲ ಇದೂ ಅಲ್ಲ ಅಂದರೆ ಅವ್ಯಾಖ್ಯಾನಿತ, ಅದೇ ವಿಶ್ವಸೃಷ್ಟಿಯ ಮೂಲದ ಊರ್ಜೆ, ನಿರಂತರ ಪ್ರವರ್ಧಮಾನವಾಗಿರುತ್ತದೆ.

ಮಾಂಡೂಕ್ಯೋಪನಿಷತ್ತು ಆ ಓಂಕಾರವನ್ನೇ ಬ್ರಹ್ಮನ್ ಅಥವಾ ಆತ್ಮನ್ ಅಥವಾ ನಾನು ಎನ್ನುತ್ತದೆ. ವೈಜ್ಞಾನಿಕ ದೃಷ್ಟಿಯಿಂದ ಕಣಗಳು, ಬಲಗಳು ಕಪ್ಪು ಸತ್ವ ಹಾಗೂ ಕಪ್ಪು ಊರ್ಜೆಗಳು ಈ ವಿಶ್ವವನ್ನುಂಟು ಮಾಡುತ್ತವೆ. ಓಂಕಾರವು ವಿಶ್ವವನ್ನೇ ಒಂದು ಶಬ್ದವನ್ನಾಗಿಸಿದೆ.

ಹಾಗಾಗಿ ಓಂಕಾರವು ತನ್ನ ಪಾದಗಳ ಮುಖೇನ ಸ್ಟ್ಯಾಂಡರ್ಡ್ ಮಾದರಿಯಲ್ಲಿ ಘಟಕಗಳು ಹಾಗೂ ಸ್ಥಿತಿಗಳನ್ನೂ ಪ್ರತಿನಿಧಿಸುತ್ತದೆ. ವೇದಗಳಲ್ಲಿನ ವಿಜ್ಞಾನವು ಎಲ್ಲವನ್ನೂ ಹೇಳಿರುತ್ತದೆ. ಅದನ್ನು ನೋಡುವ ದೃಷ್ಟಿ ಬೆಳೆಸಿಕೊಳ್ಳಬೇಕು. ಆಗ ಮಾತ್ರ ಭಾರತವು ವಿಶ್ವಗುರುವಾಗಲು ಸಾಧ್ಯ.

# ಪರಶು ರಾಮಾವತಾರದ ವೈಶಿಷ್ಟ್ಯ

- ಕೆ. ರಾಘವೇಂದ್ರ
94839 68101



ಪರಮಾತ್ಮನ ಅವತಾರಗಳೆಲ್ಲವೂ ದುಷ್ಟ ಶಿಕ್ಷಣ ಶಿಷ್ಟರಕ್ಷಣೆಗಾಗಿಯೇ,ದಶಾವತಾರಗಳು ನಿರ್ದಿಷ್ಟವಾದ ಕಾರ್ಯಸಾಧನೆಗಾಗಿ ಭಗವಂತನು ಮಾಡುವ ಅವತಾರ. ಪರಮಾತ್ಮನು ಪರಶುರಾಮನಾಗಿ ಅವತಾರ ಪಡೆಯುವುದು ಆರನೇಯ ಅವತಾರವಾಗಿ ಇದರ ಔಚಿತ್ಯವೆಂದರೇ ಅರಿಷಡ್ವರ್ಗ ಗಳನ್ನು ಬಿಟ್ಟರೆ ಮಾತ್ರ ಪರಮಾತ್ಮನ ಅನುಗ್ರಹವನ್ನು ಪಡೆಯ ಬಹುದು. ಅದ್ಭುತ,ಊಹಿಸಲಸಾಧ್ಯ, ಭೂಲೋಕದಲ್ಲಿ ಪ್ರತಿಯೊಬ್ಬರಿಗೂ ಕಾಣಿಸಿ ಕೊಂಡ ದಶಾವತಾರಗಳ ಪ್ರಥಮರೂಪ ಚಿರಂಜೀವಿಯಾಗಿ ಅನಂತಕಾಲದ ತನಕ ದುಷ್ಟರನ್ನು ಶಿಕ್ಷಿಸುತ್ತ, ಶಿಷ್ಟರನ್ನು ರಕ್ಷಿಸುತ್ತಿರುವ ರೂಪ. ವೈವಸ್ವತ ಮನ್ವಂತರದ 19 ನೇ ತ್ರೇತಾಯುಗ, ವೈಶಾಖ ಶುದ್ಧ ದ್ವಿತೀಯದಂದು ಅವತಾರ,ಸುಮಾರು 4 ಕೋಟಿ ವರ್ಷಗಳಿಂದಲೂ ಹಿಂದೆ ಅವತಾರವೆತ್ತಿದ ಈ ರೂಪ ಇಂದಿಗೂ ಮಹೇಂದ್ರ ಪರ್ವತದಲ್ಲಿ ಶಿಷ್ಟರ ರಕ್ಷಣೆಗಾಗಿ ತಪಗೈಯುತ್ತ ನಿಂತಿದೆ.

ದೇವರಿಲ್ಲ.ಧರ್ಮವೆಲ್ಲವೂ ಮೂಢನಂಬಿಕೆ, ಹಸು ಗಳನ್ನು ಮತ್ತು ವಿಪ್ರರನ್ನು ಪೂಜಿಸಬೇಕಿಲ್ಲ ಎಲ್ಲರೂ ಸಮಾನರು ಹೀಗೆ ಪ್ರಚಾರ ಮಾಡುವ ದುಷ್ಟರ ಸಂಹಾರವೇ ಈ ಅವ ತಾರದ ಮುಖ್ಯ ಉದ್ದೇಶ. ಅಜ್ಞಾನವೆಂಬ ಮಹಾ ಪರ್ವತವು ಅನಾದಿಕಾಲದಿಂದಲೂ ಮೋಕ್ಷಮಾರ್ಗಕ್ಕೆ ಅಡ್ಡಿ ಯಾಗಿದೆ. ಇವೆಲ್ಲದರ ನಿಗ್ರಹಕ್ಕಾಗಿ ಪರಶುರಾಮ ನಮ್ಮ ಹೃದಯಕ್ಕೆ ಬರ ಬೇಕು.

ಪರಶುರಾಮ ಅವತಾರ ಒಂದು ವಿಶಿಷ್ಟ ಕಾರ್ಯವನ್ನು ನಡೆಸಲು ಪಡೆದದ್ದಾಗಿದೆ. ಈ ಅವತಾರದಿಂದ ಜಗಕ್ಕೆ ಪಿತೃಭಕ್ತಿ ಮತ್ತು ಪಿತೃವಾಕ್ಯ ಪರಿಪಾಲನೆ, ಸ್ತ್ರೀಯಾದವಳು ಹೇಗೆ ವರ್ತಿಸಬೇಕು ಎನ್ನುವುದು ಮುಖ್ಯ ಅಂಶ ವಾಗಿರುತ್ತದೆ. ಚಂದ್ರವಂಶದ ಜಮದಗ್ನಿ ಋಷಿ ಪುತ್ರನಾಗಿ ಭಗವಂತ ಅವ ತರಿಸಿದ.ಅರ್ಘ್ಯ ಪಾದ್ಯಾದಿಗಳಿಗೆ ನದಿಯಿಂದ ನೀರು ತರಲು ಹೋದ ಜಮದಗ್ನಿ ಪತ್ನಿ ರೇಣುಕೆಯು ಗಂಧರ್ವರು ನೀರಿನಲ್ಲಿ ಸರಸವಾಡುತ್ತಿರುವಾಗ ತಾನು ಮಾನಸಿಕ ವ್ಯಭಿ ಚಾರ ದೋಷಕ್ಕೆ ಈಡಾದಳು, ಇದನ್ನು ತಮ್ಮ ದಿವ್ಯಶಕ್ತಿಯಿಂದ ಅರಿತ ಜಮದಗ್ನಿ ಪರಶುರಾಮನಿಗೆ ತಲೆಕಡಿಯಲು ತಿಳಿಸಿದರು.

ಸಣ್ಣತಪ್ಪಿಗೆ ಇಷ್ಟೊಂದು ದೊಡ್ಡ ಶಿಕ್ಷೆಯೇ ಎನಿಸಬಹುದು. ಹೌದು ಇದು ಉದ್ಧಾರದ ದಾರಿ ಋಷಿಗಳಿಗೆ ಬರುವ ಕೋಪ ಶಾಪವಲ್ಲ ಅನುಕಂಪ, ತನ್ನ ಹೆಂಡತಿ ಮಾಡಿರುವ ಪಾಪದ ಪರಿಹಾರಕ್ಕಾಗಿ ಇದೊಂದು ಉಪಾಯ ಗೌತಮರು ಅಹಲ್ಯೆಗೆ ಶಾಪ ವಿತ್ತು ಉದ್ಧರಿಸಿದಂತೆ ತಾಯಿಯ ತಲೆಕಡಿದ ಪರಶು ರಾಮನಿಗೆ ಪಾಪ ತಟ್ಟಲಿಲ್ಲವೆ? ಸರ್ವಥಾ ಪಿತೃವಾಕ್ಯ ಪರಿಪಾಲನೆ ಮಾಡಿದ ಮತ್ತು ತಾಯಿಯನ್ನು ಉದ್ಧರಿಸಿದ ಮಹಾಪುಣ್ಯವೆ ಬರುತ್ತದೆ. ಆದರೆ ಗಂಡನಾದ ಜಮದಗ್ನಿಗೆ ಈ ಪಾಪದ ಲೇಪ ತಟ್ಟಲಾಗಿ ಮುಂದೆ ಕಾರ್ತವೀರ್ಯಾಜುನನ ಮಕ್ಕಳು ಮತ್ತು ಸೈನಿಕರು ಬಂದು ತಪೋನಿರತರಾದ ಜಮದಗ್ನಿಯ ತಲೆಯನ್ನು ಕತ್ತರಿಸಿದರು. ಆ ಸಂದರ್ಭದಲ್ಲಿ 21 ಬಾರಿ ತಾಯಿಯ ಆರ್ತಧ್ವನಿ ಮಾಡುವುದರಿಂದ 21 ಸಲ ಸಂಚರಿಸಿ ಅವರ ಕುಲವನ್ನೇ ಸಂಹರಿಸಿ,ತಾಯಿಗೆ ಸಂತೋಷ ಪಡಿಸುತ್ತಾನೆ. ಸಮಸ್ತಭೂಲೋಕವೇ ಪರಶು ರಾಮದೇವರ ಅಧೀನವಾದ ಮೇಲೆ ಸಮುದ್ರದ ಮೇಲೆ ಕೊಡಲಿಯೆಸೆದ, ಸಮುದ್ರ ಹಿಂದಕ್ಕೆ ಸರಿದು ಜಾಗ ಬಿಟ್ಟುಕೊಟ್ಟಿತು. ಅದೇ ಕೊಂಕಣ ತೀರ, ಗೋವಾ ದಿಂದ ಕೇರಳದವರೆಗೆ ಹರಡಿರುವ ಪರಶುರಾಮ ಕ್ಷೇತ್ರ.

ಉಳಿದ ಭಗವದ್ರೂಪವನ್ನು ಪ್ರತಿಮೆ ಮೊದಲಾದವುಗಳಲ್ಲಿ ಪೂಜಿ ಸಿದರೆ, ಪರಶುರಾಮನನ್ನು ಅಗ್ನಿಯಲ್ಲಿ ಪೂಜಿಸಬೇಕು ಮತ್ತು ಈ ರೂಪ ಶುಕ್ರಗ್ರಹಕ್ಕೆ ಸಂಬಂಧ ಪಟ್ಟಿದ್ದು ಶುಕ್ರಗ್ರಹದ ಬಲಾಬಲಗಳನ್ನು ಚಿಂತಿಸುವ ದಶಾವತಾರ ಅಂತರ್ಗತ ಪರಶು ರಾಮನು ಸಂಹಾರಕನು ಮಾತ್ರವಲ್ಲದೆ ವೀರ್ಯಕಾರಕನೂ ಅರ್ಥಾತ್ ಸದ್ವಂಶಗಳನ್ನು ವೃದ್ಧಿಗೊಳಿಸುವನು ಆಗಿರುವವನು.

ರೇಣುಕೇಯ ಮಹಾವೀರ್ಯ ಕೃತವೀರ್ಯಸುತಾಂತಕ
ಆಯುಃ ಪ್ರಯಚ್ಛ ಮೇ ರಾಮ ಜಮದಗ್ನ್ಯ ನಮೋಸ್ತುತೇ ॥

# ಕಣ್ವತೀರ್ಥ ಮಹಾಮುನಿಯ ಆರಾಧನೆ

- ಪ್ರಣವ

9035618076

ಕರಾವಳಿ ಪ್ರದೇಶ ಕಂಡ ಅಪೂರ್ವ ತಪಸ್ವಿಗಳಲ್ಲಿ ಒಬ್ಬರಾದ ಶ್ರೀವಿಜಯಧ್ವಜತೀರ್ಥರ ಕಾರ್ಯಕ್ಷೇತ್ರ ದ.ಕ ಮತ್ತು ಕೇರಳದ ಗಡಿ ತಲಪಾಡಿ ಸಮೀಪದ ಕಣ್ವತೀರ್ಥ. ಇವರು ಬೃಂದಾವನಸ್ಥರಾಗಿ ಹೊಂದಿ 600 ವರ್ಷಗಳು ಸಂದಿವೆ. ಇವರ ಆರಾಧನೋತ್ಸವ ಕಣ್ವತೀರ್ಥದಲ್ಲಿ ಅಕ್ಷಯ ತೃತೀಯದಂದು ಜರಗಲಿದೆ.

ಶ್ರೀಪರಶುರಾಮಕ್ಷೇತ್ರ ಅನೇಕ ಪವಿತ್ರ ಸ್ಥಳಗಳ ಬೀಡು, ಅಂಬರಚುಂಬಿ ಅಡಿಕೆ ಮರಗಳ ಗುಂಪು ಒಂದೆಡೆಯಾದರೆ ಮತ್ತೊಂದಡೆ ತಲ್ಲಣಗೊಳಿಸುವ ಸಮುದ್ರದ ಭೋರ್ಗರತೆ. ಈ ಕಡಲಕಿನಾರೆಯ ದಡದಲ್ಲಿ ಇರುವ ಪವಿತ್ರ ಐತಿಹಾಸಿಕ ಕ್ಷೇತ್ರ ಕಣ್ವತೀರ್ಥ. ಸಾಧನೆಗೆ ಹೇಳಿ ಮಾಡಿಸಿದ ಭೂಮಿ. ಸಾಧನೆಯ ಉತ್ತುಂಗ ಶಿಖರವನ್ನೇರಿದ ಕಣ್ವ ಋಷಿಗಳ ತಪಸ್ಸಿನ ತಾಣ ವೇದದ್ರಷ್ಟಾರರಾದ ಇವರ ಕಾರುಣ್ಯ, ವೈರಾಗ್ಯ, ಅಂತಃಕರಣ ಎಲ್ಲವೂ ಅನುಸರಣೀಯ. ಶಕುಂತಲೆಯ ಸಾಕು ತಂದೆ, ಮಹಾವೈರಾಗ್ಯ ಸಂಪನ್ನರಾದರೂ ಮಗುವಾದ ಶಕುಂತಲೆಯನ್ನು ಆಶ್ರಮಕ್ಕೆ ತಂದು ಸಾಕಿದ್ದು ಇವರ ಹೃದಯವಂತಿಕೆಗೆ ಸಾಕ್ಷಿ. ಆ ಮಹರ್ಷಿಯ ಹೃದಯ ವನ್ನರಿತವರು ವ್ಯಾಸ, ಕಾಳಿದಾಸರು ಮಾತ್ರ ಮಹಾರಾಜ ದುಃಶ್ಯಂತ ಶಕುಂತಲೆಯನ್ನು ಗಾಂಧರ್ವ ಪದ್ಧತಿಯಿಂದ ವಿವಾಹವಾದ ಸ್ಥಳ ಇದೇ ಇರಬಹುದು ಎಂದು ಅನಿಸುವುದು.

ಮಂಗಳೂರಿನಿಂದ ಕೇವಲ ಇಪ್ಪತ್ತು ಕಿಲೋ ಮೀಟರ್ ದೂರದಲ್ಲಿರುವ ಕಣ್ವತೀರ್ಥ ಐತಿಹಾಸಿಕ ತಪೋಭೂಮಿ. ರಾಷ್ಟ್ರಕೂಟರು, ಹೊಯ್ಸಳರು ಆಳಿದ ನಾಡು. ವ್ಯಾಪಾರಕ್ಕಾಗಿ ಬರುತ್ತಿದ್ದ ಫ್ರಾನ್ಸರು, ಪೋರ್ಚುಗೀಸರಿಗೆ ಇದು ರಾಜಮಾರ್ಗ, ಕೇರಳ - ಕರ್ನಾಟಕಗಳ ಗಡಿಯಲ್ಲಿರುವ ಈ ಕ್ಷೇತ್ರದಲ್ಲಿ ಸಮುದ್ರದ ಹೆದ್ದೆರೆಗಳ ಭೋರ್ಗರೆತದ ಶಬ್ದಬಿಟ್ಟರೆ ಮತ್ತೊಂದು ಶಬ್ಧವಿಲ್ಲ. ತಿಳಿನೀರಿನಿಂದ ತುಳುಕುವ ರಾಮತೀರ್ಥ ಕಣ್ವತೀರ್ಥದ ಪ್ರಕೃತಿಯನ್ನು ಸವಿಯುವವನ ಮನಸ್ಸಿಗೆ ಆಹ್ಲಾದ ವನ್ನೀಯುತ್ತದೆ.

ಪೇಜಾವರಮಠ ಉಡುಪಿಯ ಎಂಟು ಮಠಗಳಲ್ಲಿ ಒಂದು. ಶ್ರೀಮಧ್ವಾಚಾರ್ಯರ ಶಿಷ್ಯರಾದ ಶ್ರೀಅಧೋಕ್ಷಜತೀರ್ಥರು ಈ ಪರಂಪರೆಯ ಪ್ರವರ್ತಕರು. ಈ ಪರಂಪರೆಯಲ್ಲಿ ಅನೇಕ ಮಂದಿ ಸಮಾಜಸುಧಾರಕರು, ವಿರಕ್ತರು, ತತ್ವಜ್ಞಾನಿಗಳು ಬಂದಿರುವರು. ಇಂದು ನಾವು ಕಂಡ ಸಹಸ್ರಮಾನದ ಯತಿ ಶ್ರೀವಿಶ್ವೇಶ್ವರ ತೀರ್ಥರಲ್ಲಿ ನಾವು ನೋಡಿದ ಕ್ರಿಯಾಶೀಲತೆ, ತತ್ವ ಜ್ಞಾನ, ವೈರಾಗ್ಯ, ಸಾಮಾಜಿಕಪ್ರಜ್ಞೆ ಮಾನವೀಯತೆ ಇವುಗಳೆ ಲ್ಲವೂ ಈ ಪರಂಪರೆಗೆ ಬಂದ ವಿಶಿಷ್ಟ ಬಳುವಳಿ ಎನ್ನಬಹುದು.

ವಿಜಯಧ್ವಜರ ತಪಃಶಕ್ತಿ ಅಪಾರ. ಕಣ್ವತೀರ್ಥದ ಕಡಲ ದಡದಲ್ಲಿ ಒಮ್ಮೆ ಧ್ಯಾನದಲ್ಲಿ ತಲ್ಲೀನರಾಗಿದ್ದರು. ಅಸಂಪ್ರಜ್ಞಾತ ಸಮಾಧಿಯನ್ನು ಪ್ರವೇಶಿಸಿದವರಿಗೆ ಹೊರಗಿನ ಪರಿವೆಯೇ ಇರುವುದಿಲ್ಲ.ನಗಾರಿ ಬಡಿದರೂ ಕೇಳಿಸದ ಏಕಾಗ್ರತೆ. ಹೃದಯಾಕಾಶದಲ್ಲಿ ನೆಲೆಸಿದ ದೇವನನ್ನು ಕಾಣುತ್ತ ಆನಂದಾನುಭವದ ಸ್ಥಿತಿ. ಇಂತಹ ಗಾಢವಾದ ಧ್ಯಾನದಲ್ಲಿ ಮುಳುಗಿದ ವಿಜಯಧ್ವಜರು ಸುತ್ತ ಮುತ್ತಲಿನ ಮಂದಿಗೆ ಆಶ್ಚರ್ಯವನ್ನುಂಟು ಮಾಡುತ್ತಿದ್ದರು. ನಿರಂತರ ಯೋಗಾನುಷ್ಠಾನದಿಂದ ಅಣಿಮಾದಿ ಸಿದ್ಧಿಗಳನ್ನು ಸಂಪಾದಿಸಿದ್ದರೂ ಅವುಗಳನ್ನು ಎಂದೂ ಪ್ರದರ್ಶಿಸದ ನಿಷ್ಕಲ್ಮಶ ಮನಸ್ಸಿನ ಮಹರ್ಷಿಗಳು ವಿಜಯಧ್ವಜರು. ವ್ಯಾಪಾರಕ್ಕೆ ಬಂದ ಮಂದಿ ಇವರನ್ನು ಕಂಡರು. ಇದೊಂದು ಚರ್ಮದ ಗೊಂಬೆ ಎಂದು ಭಾವಿಸಿದರು.ದೇಹವನ್ನು ಮುಟ್ಟಿ ಎಷ್ಟೇ ಅಲುಗಾಡಿಸಿದರೂ ಎಚ್ಚರವಿಲ್ಲ. ಅವರನ್ನು ಹಡಗಿನಲ್ಲಿ ಕುಳ್ಳಿರಿಸಿ ಹೊರಟೇ ಬಿಟ್ಟರು. ಸ್ವಲ್ಪಹೊತ್ತಿನಲ್ಲೇ ವಿಜಯಧ್ವಜರು ಅಸಂಪ್ರಜ್ಞಾತ ಸಮಾಧಿಯಿಂದ ಹೊರಗೆ ಬಂದರಂತೆ. ಹೀಗೂ ಇರಲು ಸಾಧ್ಯವೇ!ಎಂದು ವ್ಯಾಪಾರಿಗಳಿಗೆ ಅಚ್ಚರಿ. ಆ ವ್ಯಾಪಾರಿಗಳು ಶ್ರೀವಿಜಯಧ್ವಜರನ್ನು ಗೌರವದಿಂದ ಬೀಳ್ಕೊಟ್ಟರಂತೆ.

## ಐತಿಹಾಸಿಕ ವೃಕ್ಷ

ವಿಜಯಧ್ವಜರು ಬಹುತೇಕ ಸಮಯವನ್ನು ಇಲ್ಲಿಯೇ ಕಳೆದು ಭಾಗವತಕ್ಕೆ ವ್ಯಾಖ್ಯಾನ ರಚಿಸಿದರೆಂಬುದನ್ನು ಊಹಿಸಬಹುದು. ಏಕೆಂದರೆ ಆಗ 2 ವರ್ಷಗಳ ಉಡುಪಿ ಶ್ರೀಕೃಷ್ಣ ಪೂಜಾ ಪದ್ಧತಿ ಬೆಳೆದು ಬಂದಿರಲಿಲ್ಲ. ಇವರದು ಶ್ರೀವಾದಿರಾಜ

ಗುರುಸಾರ್ವಭೌಮರ ಹಿಂದಿನ ಕಾಲಮಾನ. ಊಹೆಗೆ ಇನ್ನೊಂದು ಕಾರಣವೆಂದರೆ 18,000 ಶ್ಲೋಕಗಳಿಗೆ ವ್ಯಾಖ್ಯಾನ ಬರೆಯುವುದೆಂದರೆ ಜೀವಮಾನ ಸಾಧನೆ. ವ್ಯಾಖ್ಯಾನ ರಚನೆ, ಪಾಠ ಪ್ರವಚನಕ್ಕೆ ಮಠದೆದುರಿಗೇ ಇರುವ ಅಶ್ವತ್ಥವೃಕ್ಷದ ಎಲೆಗಳ ಶಬ್ಧ ತೊಂದರೆಯಾದಾಗ ಶಬ್ದ ಮಾಡದಂತೆ ವಿಜಯಧ್ವಜರು ಕೊಟ್ಟ ಸೂಚನೆ ಇಂದಿಗೂ ಪಾಲನೆಯಾಗುತ್ತಿರುವುದನ್ನು ಅಲ್ಲಿ ನೋಡಬಹುದು. ಈ ಆಧಾರದಲ್ಲಿಯೇ ವಿಜಯ ಧ್ವಜರನ್ನು ಚಿತ್ರಿಸುವಾಗ ಒಂದು ಕೈ ಮೇಲೆತ್ತಿದ ಭಂಗಿಯಲ್ಲಿ ಚಿತ್ರಿಸುತ್ತಾರೆ. ಈ ವೃಕ್ಷದಡಿ ಶ್ರೀವಿಜಯಧ್ವಜ ತೀರ್ಥರ ವೃಂದಾವನವಿದೆ. ಈ ವೃಕ್ಷ 6 ಶತಮಾನಕ್ಕೂ ಹಿಂದಿನದೆಂಬುದು ವೃಕ್ಷದಾಕಾರ ನೋಡಿದರೆ ಅರಿವಾಗುತ್ತದೆ. ಪಾಠವನ್ನು ಹೇಳುವ ಪ್ರಸಂಗ. ಬಿರುಸಿನ ಗಾಳಿ, ಧೂಳಿನ ರಾಶಿ, ಗಿಡ ಮರಗಳಲ್ಲಿ ಕಂಪನ. ಪರ ಪರ ಶಬ್ದ. ಶಬ್ದಮಾಲಿನ್ಯದಿಂದ ಪಾಠಕ್ಕೆ ಅಡಚಣೆ. ಕೂಡಲೇ ಶ್ರೀವಿಜಯ ಧ್ವಜರು ಆಕಾಶದಲ್ಲಿ ಕೈ ಎತ್ತಿ ಶಬ್ದ ಮಾಡದಿರಲು ಸೂಚಿಸಿದರಂತೆ. ಕೂಡಲೇ ಎಲ್ಲೆಡೆಯೂ ಸ್ತಬ್ದವಾಯಿತಂತೆ!! ಪರಿಸರವೆಲ್ಲವೂ ಅವರ ಪಾಠಕ್ಕೆ ಪೋಷಕ.

## ಧ್ವಂದ್ವಮಠದ ಕಟ್ಟೆ

ಕಣ್ವತೀರ್ಥರ ಇನ್ನೊಂದು ವೈಶಿಷ್ಟ್ಯವೆಂದರೆ ನಿರ್ಮಲ, ಪ್ರಶಾಂತ ವಾತಾವರಣ. ಅಲ್ಲಿ ಕುಳಿತರೆ ಜಗತ್ತಿನ ಜಂಜಾಟಗಳು ಮನಪಟಲದಲ್ಲಿ ಸುಳಿಯವು. ಇದೇ ತಾಣದಲ್ಲಿ ಅಷ್ಟಮಠಗಳ ದ್ವಂದ್ವ ಮಠಗಳ ವ್ಯವಸ್ಥೆ ರೂಪಿತವಾಯಿತು ಎಂಬುದಕ್ಕೆ ಮಠದ ಹೊರಪಾರ್ಶ್ವದಲ್ಲಿ ಕಂಡುಬರುವ ದ್ವಂದ್ವ ಮಠದ ಕಟ್ಟೆ ಸಾಕ್ಷಿಯಾಗಿದೆ. ಈಗ ಇದನ್ನು ಜೀರ್ಣೋದ್ಧಾರಗೊಳಿಸಲಾಗುತ್ತಿದೆ ಇದಲ್ಲದೆ ಸಾಧಕರ ತಂಗುವಿಕೆಗಾಗಿ ಅತಿಥಿಗೃಹವನ್ನೂ ಶ್ರೀಪೇಜಾವರ ಶ್ರೀಪಾದರು ಕಟ್ಟಿಸಿದ್ದಾರೆ.

## ಕಣ್ವಮಹರ್ಷಿಗಳ ತಾಣ

ಕಣ್ವತೀರ್ಥ ಮಠ ಕಣ್ವಮಹರ್ಷಿಗಳ ಪರಂಪರೆಯಿಂದ ಬಂದಿದೆ ಎಂಬ ಪ್ರತೀತಿ ಇದೆ. ಮಧ್ವಾಚಾರ್ಯರ ಪ್ರಭಾವಕ್ಕೆ ಒಳಗಾಗಿ ಬಂದ ಧಾರ್ಮಿಕ ಸಂಸ್ಥಾಪನೆಗಳಲ್ಲಿ ಇದೂ ಒಂದು ಕಣ್ವಮಹರ್ಷಿಗಳು ಪೂಜಿಸಿದ ರಾಮಸೀತೆ ವಿಗ್ರಹ ಪೇಜಾವರ ಮಠದಲ್ಲಿ ಪಟ್ಟದ ದೇವರಾಗಿ ಪೂಜೆಗೊಳ್ಳುತ್ತಿದ್ದ ಉತ್ಸವ ಮೂರ್ತಿ ಮತ್ತು ವಿಜಯಧ್ವಜರು ಪ್ರತಿಷ್ಠಾಪಿಸಿದ ಕಪ್ಪುಶಿಲೆಯ ಆಂಜನೇಯ ಕಣ್ವತೀರ್ಥದಲ್ಲಿ ಪೂಜೆಗೊಳ್ಳುತ್ತಿದೆ. ಮಠದ ಪಕ್ಕದಲ್ಲಿಯೇ ಪೂಜಿಸಿದ್ದರೆನ್ನಲಾದ ಶ್ರೀಬ್ರಹ್ಮೇಶ್ವರ ದೇವಸ್ಥಾನವಿದೆ.

## ಶ್ರೀ ಮದ್ಭಾಗವತಕ್ಕೆ ವ್ಯಾಖ್ಯಾನ

ಶ್ರೀವಿಜಯಧ್ವಜತೀರ್ಥರು ಶ್ರೀಪೇಜಾವರ ಮಠದ ಪರಂಪರೆಯಲ್ಲಿ ಏಳನೆಯ ಯತಿಗಳು. ಶ್ರೀವಿಜಯಧ್ವಜರು ಸಾರಸ್ವತ ಪ್ರಪಂಚಕ್ಕೆ ಕೊಟ್ಟ ಕೊಡುಗೆ ಅಸಾಧಾರಣ. ಪುರಾಣ ರಾಜನೆಂದು ಪ್ರಸಿದ್ಧವಾದ ಶ್ರೀಮದ್ಭಾಗವತ ವೈಶಿಷ್ಟ್ಯಪೂರ್ಣವಾದ ವ್ಯಾಸರ ಕೃತಿ. ಇದಕ್ಕೆ ಶ್ರೀವಿಜಯಧ್ವಜರು ಪದರತ್ನಾವಳೀ ಎಂಬ ವ್ಯಾಖ್ಯಾನವನ್ನು ರಚಿಸಿರುವರು. ಭಾರತೀಯ ದರ್ಶನಗಳು ಭಕ್ತಿಗೆ ಬಹು ಪ್ರಾಶಸ್ತ್ಯವನ್ನು ನೀಡಿವೆ. ಈ ಭಕ್ತಿಯು ಮಾನವನ ಮನಸ್ಸಿನಲ್ಲಿರುವ ಕಾಮ, ಕ್ರೋಧ, ಉಗ್ರತೆ ಇವುಗಳನ್ನು ಹೊಡೆ ದೋಡಿಸಿ ಸೌಮನಸ್ಯವನ್ನು ತಂದುಕೊಡುವುದು. ಇಂತಹ ಭಕ್ತಿ ಸಿದ್ಧಾಂತವನ್ನು ಪ್ರತಿಪಾದಿಸುವ ಕೃತಿ ಭಾಗವತ.

ವೇದಾಂತ ಕ್ಷೇತ್ರದಲ್ಲಿ ಸಮಗ್ರ ಭಾಗವತ ಗ್ರಂಥಕ್ಕೆ ವ್ಯಾಖ್ಯಾನ ರಚಿಸಿದ ಬೆರಳೆಣಿಕೆ ವ್ಯಾಖ್ಯಾನಕಾರರಲ್ಲಿ ಶ್ರೀವಿಜಯಧ್ವಜರು ಒಬ್ಬರು. ಇಂದಿಗೂ ಭಾಗವತ ಗ್ರಂಥದ ಗೋಷ್ಠಿ ನಡೆದರೆ ಶ್ರೀವಿಜಯಧ್ವಜರ ವ್ಯಾಖ್ಯಾನದ ಉಲ್ಲೇಖವಿಲ್ಲದೆ ಹಾಗೂ ಅಧ್ಯಾಯಗಳು ಯಾವ ರೀತಿ ಭಕ್ತಿ ಸಿದ್ಧಾಂತವನ್ನು ಪ್ರತಿಬಿಂಬಿಸುತ್ತಿವೆ ಎಂಬುದನ್ನು ಮನ ಮುಟ್ಟುವಂತೆ ಚಿತ್ರಿಸುವರು. ಭಾಗವತದ ಹದಿನೆಂಟು ಸಾವಿರ ಶ್ಲೋಕಗಳಿಗೂ ವ್ಯಾಖ್ಯಾನವನ್ನು ಬರೆದ ಕೀರ್ತಿ ಶ್ರೀ ವಿಜಯಧ್ವಜರಿಗೆ ಸಂದಿರುವುದು. ಶ್ರೀವಿಜಯಧ್ವಜರು ಭಾಗವತದ ವ್ಯಾಖ್ಯಾನವಲ್ಲದೇ ಬೇರೆ ಮೂರು ಕೃತಿಗಳನ್ನು ರಚಿಸಿರುವರೆಂದು ಪ್ರಸಿದ್ಧಿಯಿದೆ. ಯಮಕಭಾರತ ಆನಂದತೀರ್ಥರ ಕೃತಿ ಇದಕ್ಕೆ ಟೀಕೆಯನ್ನು ರಚಿಸಿರುವರು.

ಭಕ್ತಿ ಸಿದ್ಧಾಂತದ ಭದ್ರ ಬುನಾದಿಯನ್ನು ಹಾಕಿ ವಿಜಯದ ಧ್ವಜ ಹಾರಿಸಿದವರು ಶ್ರೀವಿಜಯಧ್ವಜರು. ವೈಶಾಖ ಶುದ್ಧ ತೃತೀಯಾ ಅಕ್ಷಯ ತೃತೀಯಾ ಎಂದು ಆ ದಿವಸಕ್ಕೆ ಪವಿತ್ರಸ್ಥಾನವಮಾನವಿದೆ. ಆ ದಿವಸದ ಎಲ್ಲಾ ಕರ್ಮಾಚರಣೆಗಳಿಗೂ ಅಕ್ಷಯಫಲಪ್ರಾಪ್ತಿ ಎಂದು ಬ್ರಹ್ಮ ವರವೇ ಇದೆ. ಅಂತಹ ಪವಿತ್ರ ದಿನದಲ್ಲಿ ತಮ್ಮ ಕರ್ಮಗಳಿಗೆಲ್ಲ ಸಮಾಪ್ತಿಯನ್ನು ಹಾಡಿ ಈ ಲೋಕವನ್ನು ಪರಿತ್ಯಜಿಸಿದವರು ಶ್ರೀವಿಜಯಧ್ವಜ ತೀರ್ಥರು.


ಧಾರಾವಾಹಿ

# ವೇದಗಳಲ್ಲಿ ವಿಜ್ಞಾನ

ಈ ಗಾಳಿಯ ಶಕ್ತಿ ಅನುಪಮವೆಂದು ವೇದ ಮಂತ್ರ ಹೇಳುತ್ತಿದೆ.

ಅಂತರಿಕ್ಷೇ ಪಥಿಭೀರೀಯಮಾನೋ
ನನಿವಿಶತೇ ಕತಮಚ್ಚನಾಹಃ।
ಅಪಾಂ ಸಖಾ ಪ್ರಥಮಜಾ
ಋತಾವಾ ಕ್ವಸ್ವೇಜ್ಞಾತಃ ಕುತ ಆಬಭೂವ
(ಋಗ್ವೇದ 10-168 -3)

ಆಕಾಶಗಾಮಿಯಾದ ಗಾಳಿಯು ಎಲ್ಲೂನಿಲ್ಲದೆ ಸದಾ ಕಾಲ ಬೀಸುತ್ತಿದೆ. ಇದು ನೀರಿನ ಗೆಳೆಯ ಮಳೆ ಸುರಿಸುವುದರಿಂದ ನೀರಿನ ಗೆಳೆಯ. ಎಲ್ಲ ಪ್ರಾಣಿಗಳಿಗಿಂತಲೂ ಮೊದಲೇ ಹುಟ್ಟಿರುವ ಇದು ಎಲ್ಲಿ ಹುಟ್ಟಿತು? ಎಲ್ಲಿಂದ ಎಲ್ಲಿಗೆ ಬಂದಿತು? ಇದನ್ನು ಕಳುಹಿಸಿದವರು ಯಾರು?



ಒಂದೂ ಯಾರಿಗೂ ತಿಳಿಯದು. ಇದು ಶಬ್ದ ಮಾಡುತ್ತಾ ಬೀಸುತ್ತದೆ.

ಆತ್ಮಾ ದೇವಾನಾಂ ಭುವನಸ್ಯಗ
ರ್ಭೋೀಯಥಾವಶಂ ಚರತಿ ದೇವ ಏಷಃ ।
ಘೋಷಾ ಇದಸ್ಯ ಶೃಣ್ವಿರೇ ನ
ರೂಪಂ ತಸ್ಮೈವಾತಾಯ ಹವಿಷಾ ವಿದೇಮ ॥
(ಋಗ್ವೇದ 10-168 -4)

ಈ ಗಾಳಿಯು ಎಲ್ಲ ಜೀವಿಗಳ ದೇಹದೊಳಗೆ ಪ್ರಾಣರೂಪದಲ್ಲಿದ್ದು ಎಲ್ಲವನ್ನೂ ನಿಯಂತ್ರಿಸುತ್ತಿದೆ. ಇದು ಸ್ವೇಚ್ಛೆಯಿಂದ ಯಾರ ತಡೆಗೂ ಸಿಲುಗದೆ ಶಬ್ದ ಮಾಡುತ್ತಾ ಬೀಸುತ್ತದೆ.ಗಾಳಿ ಬೀಸುವಾಗ ಶಬ್ದ ಬರುವುದರಿಂದ ಗಾಳಿ ಬೀಸುತ್ತಿದೆ ಎಂದು ತಿಳಿಯುತ್ತದೆ. ಆದರೆ ಇದಕ್ಕೆ ರೂಪವಿಲ್ಲದ್ದರಿಂದ ಇದನ್ನು ಕಣ್ಣಿನಿಂದ ನೋಡಲಾಗದು. ಇಂತಹ ವಾಯುವಿನ ಶಕ್ತಿ ಮಹಿಮೆಗಳು ಅಸದೃತ. ಇಂತಹ ವಾಯುವಿಗೆ ನಾವು ಹವಿಸ್ಸನ್ನು ಅರ್ಪಿಸಿ ಸಂತೋಷಪಡಿಸುತ್ತವೇ ಎಂದು ಋಷಿಯು ಕೃತಜ್ಞತೆಯನ್ನು ತೋರಿದ್ದಾನೆ.

**ನೀರು ಪ್ರಾಣಧಾರಕ ಮತ್ತು ಸೃಷ್ಟಿಯ ಮೂಲ :**

ಜೀವಿಗಳ ಹುಟ್ಟು - ಬದುಕುಗಳಿಗೆ ನೀರೂ ಸಹ ಆಧಾರವಾಗಿದೆ. ಅಪೋಮಯಃ ಪ್ರಾಣಃ (ಎಲ್ಲಾ ಜೀವಿಗಳೂ ಜಲಮಯ) ಎಂದು ಉಪನಿಷತ್ತಿನಲ್ಲಿ ಹೇಳಿದೆ. ಎಲ್ಲ ಜೀವಿಗಳ ಜೀವನಕ್ಕೆ ನೀರು ಆಧಾರವಾದ್ದರಿಂದಲೇ ಇದಕ್ಕೆ "ಜೀವನ" ಎಂದು ಹೆಸರು.''ಅಪಾಂನಪಾತ್'' ಎಂಬ ಹೆಸರನ್ನು ಹೊಂದಿದ ಅಗ್ನಿಯ ಹುಟ್ಟುವಿಕೆಗೆ ಈ ನೀರೇ ಆಧಾರವಾಗಿದೆ.

ತಮಾಪ್ರೋ ಅಗ್ನಿಂ
ಜನಯಂತಃ ಮಾತರಃ
(ಋಗ್ವೇದ 10-91-6)

ನೀರಿನಿಂದ ಬೆಂಕಿ ಹುಟ್ಟುವುದರಿಂದ ಬೆಂಕಿಗೆ ನೀರು ಜನ್ಮದಾಯಿನೀ ತಾಯಿ. ನೀರಿನಿಂದ ಬೆಂಕಿ ಹುಟ್ಟುತ್ತದೆ ಎಂದು ವಿಜ್ಞಾನ ಹೇಳುತ್ತದೆ.ಈ ಮಂತ್ರವೂ ಅದನ್ನೇ ಹೇಳುತ್ತಿರುವುದು. ಸೂರ್ಯ

- ಡಾ॥ ಟಿ.ವಿ. ಸತ್ಯನಾರಾಯಣ



ನಿಂದ ನೀರು, ನೀರಿನಿಂದ ಬೆಂಕಿ, ಬೆಂಕಿ ಯಿಂದ ಮಳೆ ಹೀಗೆ, ನೀರು-ಬೆಂಕಿ ಒಂದಕ್ಕೊಂದು ಪೂರಕಗಳು. ಮೋಡಗಳಾಗುವುದು ಅವುಗಳಿಂದ ಭೂಮಿಯ ಮೇಲೆ ಮಳೆ ಸುರಿಯುವುದು ಈ ಕಾರ್ಯಕ್ರಮವನ್ನು ಈ ಮಂತ್ರವು ಸೊಗಸಾಗಿ ಹೇಳುತ್ತಿದೆ.

ಯಾಃ ಸೂರ್ಯೋ ರಶ್ಮಿಭಿರಾತತಾನ
ಯಾಭ್ಯ ಇಂದ್ರೋ ಅರದದ್ಗಾತುಭೂಮಿಮ್।
ತೇ ಸಿಂಧವೋ ವರಿವೋ ಧಾತನಾ ನೋ
ಯೂಯಂ ಪಾತ ಸ್ವಸ್ತಿಭಿಸ್ಸಧಾನಃ॥

(ಋಗ್ವೇದ 7-48-4)

ಸೂರ್ಯನು ತನ್ನ ಕಿರಣಗಳಿಂದ ಭೂಮಿಯ ಮೇಲೆ ಕೆರೆ-ಕಟ್ಟೆಗಳು, ನದೀ-ನದೀಗಳು ಸಮುದ್ರಗಳ ನೀರನ್ನು ಹೀರಿಕೊಂಡು ನೀರನ್ನು ಬೆಳೆಸುತ್ತಾನೆ. ಆವಿಯಾಗಿ ಹೋದ ಆ ನೀರು ಗಟ್ಟಿಯಾಗಿ ದೊಡ್ಡ ದೊಡ್ಡ ಮೋಡಗಳಾಗುತ್ತವೆ. ಈ ಮೋಡಗಳು ಜೀವನದ ಮೂಟೆಗಳು. ಅಂದರೆ ನೀರಿನ ಮೂಟೆಗಳು. ಈ ನೀರಿನ ಮೂಟೆಗಳಾದ ಮೋಡಗಳನ್ನು (ಜೀವನಮೂತ ಗಳಾದ ಜೀಮೂತಗಳನ್ನು) ಇಂದ್ರನು ತನ್ನ ವಜ್ರಾಯುಧದಿಂದ ಹೊಡೆದು ಚೂರು ಚೂರು ಮಾಡುತ್ತಾನೆ. ಆ ಹೊಡೆತಕ್ಕೆ ಬೆಂಕಿ ಹುಟ್ಟಿ ಆದರಿಂದ ಇವು ಕರಗಿ ನೀರಾಗಿ ಮಳೆಯಾಗಿ ಕೆಳಗೆ ಸುರಿಯುತ್ತವೆ.ಎಲ್ಲ ಜೀವಿಗಳಿಗೆ ಕುಡಿಯಲು ಬೆಳೆಯಲು ಹುಟ್ಟಲು ನೀರು ಕಾರಣವಾಗಿದೆ.

ನೀರಿನ ಆಕರಗಳು ಸ್ವಾಭಾವಿಕವಾಗಿ ಭೂಮಿಯಲ್ಲಿ ಬೇರೆ ಬೇರೆ ರೂಪದಲ್ಲಿದೆ. ಇವೆಲ್ಲ ಜೀವಿಗಳ ಉಪಕಾರಿಗಳಾಗಿವೆ.

ಯಾ ಆಪೋದಿವ್ಯಾ ಉತವಾಸ್ರವಂತಿ
ಖನಿತ್ರಿಮಾ ಉತವಾ ಸ್ವಯಂಜಾಃ।
ಸಮುದ್ರಾರ್ಥ ಯಾಃ ಶುಚಯಃ ಪಾವಕಾಃ
ತಾ ಆಪೋದೇವಿರಿಹ ಮಾಮವಂತು ॥

(ಋಗ್ವೇದ 7-49 -2)

ಆಕಾಶದಲ್ಲಿ ಹುಟ್ಟುವ ನೀರು ಮೋಡಗಳಾಗಿ ಆಕಾಶದಲ್ಲಿವೆ. ಇವು ದಿವ್ಯಜಲ. ಭೂಮಿಯ ಮೇಲೆ ಮಳೆ ಬಿದ್ದಾಗ ನದಿಗಳಾಗಿ ಹರಿಯುತ್ತವೆ. ಭೂಮಿಯೊಳಗಿರುವ ನೀರನ್ನು ಅಗೆದಾಗ ಪಡೆಯಬಹುದು. ಇವು ಭಾವಿಯ ಜಲ, ಬಾವಿಯಿಂದ ನೀರನ್ನು ಸೇದಿ ಜನರು ಕುಡಿಯುತ್ತಾರೆ. ಇವು ಅಗೆದಾಗ ಸಿಕ್ಕುವುದರಿಂದ ಖನಿತ್ರಿಯ ಜಲ, ಕೆಲವು ಕಡೆ ಭೂಮಿಯೊಳಗೆ ಇರುವ ನೀರು ಭೂಮಿಯನ್ನು ಸೀಳಿಕೊಂಡು ಬುಗ್ಗೆಗಳಾಗಿ ಹೊರ ಬರುತ್ತವೆ. ಇವು ಸ್ವಯಂಜಾತ ಜಲ. ಈ ಎಲ್ಲಾ ನೀರು ಶುದ್ಧವಾಗಿದ್ದು ಜನರಿಗೆ ಉಪಕಾರಿಗಳಾಗಿ ಕಡೆಗೆ ಸಮುದ್ರವನ್ನು ಹೋಗಿ ಸೇರುತ್ತವೆ. ಇವುಗಳ ಉಪಕಾರ ಅಪಾರ. ಸ್ಥಾವರ ಜಂಗಮರೂಪದ ಎಲ್ಲ ಪ್ರಾಣಿಗಳೂ ಹುಟ್ಟುವುದು ನೀರಿನಿಂದಲೇ ಮಂತ್ರವೊಂದು ಹೀಗೆ ಹೇಳುತ್ತದೆ.

ಯಾಯಂ ಹಿಷ್ಠಾ ಭಿಷಜೋ ಮಾತೃತಮಾ ವಿಶ್ವಸ್ಯ ಸ್ಥಾತಂರ್ಜಗತೋ ಜನಿತ್ರಿಃ। (ಋಗ್ವೇದ 6-50-7)

ಜಲದೇವತೆಗಳು ಎಲ್ಲ ಜೀವಿಗಳ ತಾಯಿಯರು. ಪರಬ್ರಹ್ಮನು ಪ್ರಜೆಗಳನ್ನು ಸೃಷ್ಟಿಸಬೇಕೆಂದು ಮೊದಲಿಗೆ ನೀರು, ತೇಜಸ್ಸು, ಅನ್ನ ಎಂಬ ಮೂರುದೇವತೆಗಳನ್ನು ಸೃಷ್ಟಿಸಿದನು. ನಂತರ ಇವುಗಳ ಒಳಗೆ ಹಂತಾಹಮಿಮಾಃ ತಿಸ್ರೋದೇವತಾ ಅನೇನ ಜೀವೇನಾತ್ಮನಾ ಅನುಪ್ರವಿಶ್ಯ ನಾಮ ರೂಪೇ ವ್ಯಾಕರವಾಣಿ (ಛಾಂದೋಗ್ಯಾಉಪನಿಷತ್ 6-3-2)

ಪರಮಬ್ರಹ್ಮನು ಪ್ರವೇಶಿಸಿ ಆಕಾರ, ಹೆಸರುಗಳನ್ನು ಪಡೆದನು. ಆದ್ದರಿಂದ ಭಗವಂತನ ಸೃಷ್ಟಿಯಲ್ಲಿ ನೀರೇ ಮೊದಲು ಹುಟ್ಟಿದ್ದು, ಮಹಾನಾರಾಯಣೋಪನಿಷತ್ತಿನಲ್ಲಿ "ತೋಯೇನ ಜೀವಾನ್ ವ್ಯಸಸರ್ಜ ಭೂಮ್ಯಾಮ್" (ಭೂಮಿಯ ಮೇಲೆ ಜೀವಿಗಳನ್ನು ನೀರಿನಿಂದ ಹುಟ್ಟಿಸಿದನು) ಎಂದು ಹೇಳಿದೆ. ಮನುಸ್ಮೃತಿಯಲ್ಲಿ " ಅಪ ಏವ ಸಸರ್ಜಾದೌ ತಾಸು ವೀರ್ಯಮಪಾಸೃಜತ್" (ಆ ದೇವರು ಮೊದಲಿಗೆ ನೀರನ್ನು ಹುಟ್ಟಿಸಿ ಅದರೊಳಗೆ ತನ್ನ ವೀರ್ಯವನ್ನು ಇಟ್ಟನು. ನಂತರ ಜೀವಿಗಳು ಹುಟ್ಟಿದವು) ಎಂದು ಹೇಳಿದೆ. ಪ್ರಪಂಚದಲ್ಲಿ ಯಾವುದೇ ಜೀವಿಯು ಹುಟ್ಟಬೇಕಾದರೆ ಗಂಡು-ಹೆಣ್ಣಿನಲ್ಲಿ ತನ್ನ ವೀರ್ಯವನ್ನು ಇಡಬೇಕು. ಗಂಡು ಹೆಣ್ಣುಗಳ ಶುಕ್ರ-ಶೋಣಿತಗಳು ಅಂದರೆ ವೀರ್ಯ ರಕ್ತಗಳು ಜಲರೂಪವಾಗಿದೆ. ಇವುಗಳ

(ಮುಂದುವರಿಯುವುದು)

ಧಾರಾವಾಹಿ - 2

# ಶ್ರೀಮದ್ಭಗವದ್ಗೀತೆ

ತೆಲುಗು ಮೂಲ : ಕೆ. ವಿಶ್ವನಾಥಶಾಸ್ತ್ರಿ

ಅನುವಾದ : ಸೂರ್ಯವಂಶಿ



## ಕಳೆದ ಸಂಚಿಕೆಯಿಂದ

ಮನುಷ್ಯ ತಪಸ್ಸು ಮಾಡಬೇಕೆಂದುಕೊಂಡರೆ ತನ್ನ ಶರೀರವನ್ನು ಎಷ್ಟಾದರೂ ಕಷ್ಟಕ್ಕೆ ಗುರಿ ಮಾಡುತ್ತಾನೆ. ಆದರೆ ದಾನ ಮಾಡುವುದಕ್ಕೆ ಇಷ್ಟ ಪಡುವುದಿಲ್ಲವಂತೆ ಕೈಯಲ್ಲಿ ಹಣವಿದ್ದಾಗ ಕಳ್ಳನು ಬಂದು ಹಣವನ್ನು ಕೊಡುತ್ತೀಯೋ ಹೊಡೆತ ತಿನ್ನುತ್ತಿಯೋ ಎಂದು ಹೆದರಿಸಿದಾಗ ಹೊಡಿಸಿ ಕೊಳ್ಳುತ್ತಾರಾಗಲೀ ಹಣವನ್ನು ಮಾತ್ರಾ ಅಲ್ಲಿ ಬಿಟ್ಟು ಹೋಗುವುದಿಲ್ಲ. ಹಣದ ಮೇಲೆ ಅಷ್ಟೊಂದು ವ್ಯಾಮೋಹವಿರುತ್ತದೆ. ಮನುಷ್ಯರಿಗೆ ಇರುವ ಜಿಪುಣತನವನ್ನು ಹಣದ ಮೇಲೆ ಇರುವ ವ್ಯಾಮೋಹವನ್ನು ದೃಷ್ಟಿಯಲ್ಲಿಟ್ಟುಕೊಂಡು ದತ್ತ ಅಂದರೆ ದಾನ ಮಾಡಿ ಎಂದು ತೀರ್ಮಾನ ಮಾಡಿದರು. ಇದನ್ನು ಮನುಷ್ಯರು ಅರ್ಥ ಮಾಡಿಕೊಂಡರಾಗಲಿ ಉಳಿದ ಎರಡು 'ದ' ಗಳ ಮಾತೇನು? ಅಂದರೆ ದೇವತೆಗಳಿಗೆ ರಾಕ್ಷಸರಿಗೆ ನಮಗೂ ಸಂಬಂಧವಿಲ್ಲ. ಒಂದು 'ದ' ಇಂದ ನಮ್ಮ ಜೀವನದ ಗುರಿಯನ್ನು ಅರ್ಥಮಾಡಿಕೊಳ್ಳಬಹುದೆಂದು ಕೆಲವರು ಭಾವಿಸಿದರು. ಆದರೆ ಕೆಲವು ಮಹರ್ಷಿಗಳು ಸಮಾವೇಶವನ್ನು ನಡೆಸಿ ಚರ್ಚೆ ಮಾಡಿ ಪ್ರಜಾಪತಿಯಂತವರಿಗೆ 'ದ' 'ದ' ಎಂದು ಮೂರು 'ದ' ಎಂದು ಹೇಳಿದರೆ ನಮ್ಮಂತಹವರಿಗೆ ಒಂದ 'ದ' ಸಾಕೆಂದುಕೊಂಡರೆ ಹೇಗೆ? ಮೂರು 'ದ' ಗೆ ಅರ್ಥ ತಿಳಿದುಕೊಳ್ಳಬೇಕಲ್ಲವೇ ಅವರು ಒಂದು 'ದ' ಎಂದು ಹೇಳಬೇಕೆಂದು ಕೊಂಡರೆ ದೇವತೆಗಳನ್ನು ಪ್ರತ್ಯೇಕವಾಗಿ ಕರೆದು 'ದ' ಎನ್ನುತ್ತಿದ್ದರು. ಮನುಷ್ಯರನ್ನು ಪ್ರತ್ಯೇಕವಾಗಿ ಕರೆದು 'ದ' ಎನ್ನುತ್ತಿದ್ದರು. ಹಾಗೆ ರಾಕ್ಷಸರನ್ನು ಕರೆದು 'ದ' ಎಂದು ಹೇಳುತ್ತಿದ್ದರು. ಅಥವಾ ಮೂವರನ್ನು ಕರೆದರೂ ಸ್ವಲ್ಪ ಸೌಕರ್ಯಕ್ಕಾಗಿ ಒಂದೆ ಬಾರಿ 'ದ' ಎಂದು ಹೇಳಬಹುದಾಗಿತ್ತು. ಆದರೆ ಮೂರು ಬಾರಿ 'ದ' ಎಂದು ಏಕೆ ಹೇಳಿದರು? ಅದರಲ್ಲಿ ಇನ್ನೇನೋ ಗೂಡಾರ್ಥವಿದೆ. ಇದು ಕೇವಲ ದೇವತೆಗಳಿಗೂ ರಾಕ್ಷಸರಿಗೋ ಸಂಬಂಧಿಸಿದ್ದಲ್ಲ ಮನುಷ್ಯರನ್ನು ಉದ್ದೇಶಿಸಿದ ಉಪ ದೇಶವೇ ಆಗಿರಬೇಕು. ದೇವತೆಗಳಿಗೆ ಏನೆಂದು ಉಪದೇಶ ಮಾಡಬೇಕು? ರಾಕ್ಷಸರಿಗೆ ಏನೆಂದು ಉಪದೇಶ ಮಾಡಬೇಕು ಎಂದು ನಾವು ಚಿಂತಿಸುವ ಅವಶ್ಯಕತೆ ಇಲ್ಲ. ನಮಗೆ ಮಹರ್ಷಿಗಳು ತಿಳಿಸಿದ ವಿಷಯವೇನೆಂದರೆ ನಾವು ಮಹರ್ಷಿಗಳು, ನಾವು ಮನುಷ್ಯರು ಆದ್ದರಿಂದ ನಮಗೆ ಏನೆಂದು ಉಪದೇಶ ಮಾಡಿದರು.? ದಾಮ್ಯತೆ ಅಂದರೆ ನೀವು ಅಹಾಂಕಾರ ಪಡಬೇಡಿ ದತ್ತ ದಾನಗಳನ್ನು ಚೆನ್ನಾಗಿ ಮಾಡಿ. ಅಗತ್ಯವಿದ್ದಷ್ಟೊ ಮಾತ್ರವೇ ಹೊರತು ಹೆಚ್ಚಿಗೆಯಲ್ಲ ದಯತ್ವಮ್ ದಯಾ ಗುಣ ವನ್ನು ಹೊಂದಿರಿ ಹಾಗಾದರೇ ಈ ಮೂರು ಉಪದೇಶಗಳನ್ನು ಮಾಡಬೇಕೆಂದರೆ ಈ ಮೂರು ಲಕ್ಷಣಗಳು ನಮ್ಮಲ್ಲಿ ಇರಬೇಕು. ದೇವತೆಗಳ ಲಕ್ಷಣಗಳೂ ಇರಬೇಕು ರಾಕ್ಷಸರ ಗುಣಗಳು ಇರಬೇಕು ಹಾಗೆ ಮನುಷ್ಯರ ಗುಣವು ಇರಬೇಕು.ಆಗಲೇ ಈ ಉಪದೇಶವನ್ನು ನಾವು ಅರ್ಥ ಮಾಡಿಕೊಳ್ಳಬಹುದು.ನಮ್ಮಲ್ಲಿ ದೇವತೆಗಳ ಸ್ವಭಾವ ಇರಬೇಕು. ನಮ್ಮಲ್ಲಿ ಒಳ್ಳೆಯ ಸದ್ಗುಣಗಳು ಇರಬೇಕು. ಪಾಜಿಟಿವ್ ಆಲೋಚನೆಗಳು ಇರಬೇಕು. ಹಾಗೆ ನಮ್ಮಲ್ಲಿ ರಾಕ್ಷಸರೂ ಇದ್ದಾರೆ ರಾಕ್ಷಸ ಭಾವನೆಗಳು ಕ್ರೂರವಾದ ಸ್ವಭಾವಗಳು ಇರುತ್ತವೆ ಹಾಗೆ ವ್ಯತಿರೇಕವಾದ ಯೋಚನೆಗಳು ಇರುತ್ತವೆ. ಮಾನವ ಸಹಜವಾದ ಕೆಲವು ಗುಣಗಳು ಇರುತ್ತವೆ. ನಮ್ಮಲ್ಲೇ ದೇವತೆಗಳ ಗುಣಗಳು ರಾಕ್ಷಸರ ಗುಣಗಳು ಆಡಗಿವೆ. ಇನ್ನೂ ಸರಿಯಾಗಿ ಹೇಳಬೇಕೆಂದರೆ ದೇವತೆಗಳು ಹೇಗೆ ಹುಟ್ಟುತ್ತಾರೆಂದರೆ ಕೇವಲ ಅವರ ಪುಣ್ಯಕರ್ಮಗಳಿಂದ ದೇವತೆಗಳಾಗಿ ಹುಟ್ಟುತ್ತಾರೆ. ಕೇವಲ ಪಾಪಕರ್ಮಗಳನ್ನು ಮಾಡಿದರೆ ರಾಕ್ಷಸರಾಗಿ ಹುಟ್ಟುತ್ತಾರೆ. ಅಧಿಕವಾದ ಪುಣ್ಯಮಾಡಿದರೆ ದೇವತೆಗಳಾಗಿ ಹುಟ್ಟುತ್ತಾರೆ. ಹಾಗಾದ್ರೆ ಮನುಷ್ಯರಾಗಿ ಯಾರು ಜನ್ಮಿಸುತ್ತಾರೆ ಎಂದರೆ ಈ ಪಾಪ ಪುಣ್ಯಗಳು ಒಂದೆಡೇ ಸೇರಿ ಮನುಷ್ಯರಾಗಿ ಹುಟ್ಟುತ್ತಾರೆ. ಯಾವಾಗ ಪಾಪ ಪುಣ್ಯಗಳು ಒಂದೆಡೆ ಸೇರುತ್ತವೋ ಆಗ ಎಲ್ಲ ಗುಣಗಳು ನಮ್ಮಲ್ಲಿರುತ್ತವೆ. ಅತ್ತ ದೇವತೆಗಳ ಸದ್ಗುಣಗಳು ರಾಕ್ಷಸರ ಕ್ರೂರಗುಣಗಳೂ ಸ್ವಲ್ಪಮಟ್ಟಿಗೆ ಇರುತ್ತವೆ. ಕೇಳುವುದಕ್ಕೆ ಕಠೋರ ವಾಗಿದ್ದರೂ ನಾವು ಇದನ್ನು ಒಪ್ಪಿಕೊಳ್ಳಬೇಕಾದ್ದೇ. ಈ ಎರಡು ಸಾಧಾರಣವಾದ ಗುಣಗಳು ಕೆಲವು ಇರುತ್ತವೆ. ಈ ದೇವತಾ ಗುಣಗಳಿಗೆ ರಾಕ್ಷಸ ಗುಣಗಳಿಗೆ ಸದಾ ಯುದ್ಧ ನಡೆಯುತ್ತಿರು ತ್ತವೆ.ಇಂತಹಾ ಯುದ್ಧದಲ್ಲಿ ದೇವತೆಗಳ ಗುಣಗಳು ಗೆದ್ದಾಗ ಜಾಗರೂಕತೆಯಿಂದ ಇರಬೇಕು.ರಾಕ್ಷಸ ಗುಣಗಳು ಗೆದ್ದಾಗ ಮತ್ತಷ್ಟು ಜಾಗರೂಕತೆಯಿಂದ ಇರಬೇಕು. ಮನುಷ್ಯ ಗುಣಗಳು ಗೆದ್ದಾಗ ಇನ್ನಷ್ಟೂ ಜಾಗರೂಕತೆಯಿಂದ ಇರಬೇಕು ಮನುಷ್ಯಗುಣ ಗಳು ಗೆದ್ದಾಗ ಮತ್ತಷ್ಟು ಒಳ್ಳೆಯ ಗುಣಸ್ವಭಾವ ಗಳನ್ನು ನಮ್ಮದಾಗಿಸಿಕೊಳ್ಳುವ ಪ್ರಯತ್ನ ಮಾಡ ಬೇಕು. ಇದು ಪ್ರಜಾಪತಿಯ ಉದ್ದೇಶ. ಈ ವಿಷಯ ವನ್ನು ಮಹರ್ಷಿಗಳು ಚೆನ್ನಾಗಿ ಅರ್ಥಮಾಡಿ ಕೊಂಡು "ದಾಮ್ಯತ" ದತ್ತ "ದಯತ್ವಮ್" ಎಂದು ಮೂರು 'ದ' ಗಳನ್ನು ವ್ಯಾಖ್ಯಾನ ಮಾಡಿ ಪ್ರಚಾರ ಮಾಡಿದರು. ನಮ್ಮೆಲ್ಲರಿಗೂ ಚೆನ್ನಾಗಿ ಪರಿಚಯ ವಿರುವ ಸ್ವಭಾವ ಇದು ಮನುಷ್ಯರು ಸದ್ಗುಣಗಳ ರಾಶಿ ಎಂದು ಕರೆಯಲ್ಪಡುತಿದ್ದಾನೆ.

(- ಸಶೇಷ)



ಧಾರಾವಾಹಿ- 2

# ಆಳ್ವಾರುಗಳು ಕಂಡ ತಿರುವೇಂಗಡ

- ಎಂ. ಆರ್. ನರಸಿಂಹನ್

### ತಿರುವೇಂಗಡಂ

ಆದರೆ ಶ್ರೀರಾಮಾನುಜರು ಪ್ರಬಂಧ ವಾಙ್ಮಯವನ್ನು ಸಂಪೂರ್ಣ ಅರಿತು ನುರಿತು ಪಾರಂಗತರಾಗಿದ್ದರು. ಅವುಗಳ ಬಗೆಗೆ ಆದರ ತಳೆದಿದ್ದರು. ಆಳ್ವಾರ್‌ಗಳೆಂದರೆ ಅಂತರಂಗದಿಂದ ಗೌರವಿಸುತ್ತಿದ್ದರು. ರಾಯರು ತಿಳಿದಿರುವಂತೆ ನಾಥಮುನಿ, ಯಾಮುನರು ಮತ್ತು ರಾಮಾನುಜರ ಕಾಲಕ್ಕೆ ಕೇವಲ ನಮ್ಮಾಳ್ವಾರ್ ಅವರ ತಿರುವಾಯ್ಮೊಳಿ ಮಾತ್ರವೇ ತಿಳಿದಿದ್ದಿತು ಎನ್ನುವವಾದ ಕೇವಲ ಕಲ್ಪನೆ. ಏತಕ್ಕೆಂದರೆ ಆ ವೇಳೆಗೆ ಆಳ್ವಾರ್‌ಗಳೆಲ್ಲ ಆವಿಷ್ಕರಿಸಲ್ಪಟ್ಟು ಅವರ ಪ್ರಬಂಧಗಳೆಲ್ಲಾ ಇವು ಇಂತು, ಇಷ್ಟು ಎಂದು ಹೇಳುವಷ್ಟು ಸ್ಪಷ್ಟವಾಗಿ ತಿಳಿದಿದ್ದಿತು. ಈ ದಿಸೆಯಲ್ಲಿ ಆಚಾರ್ಯ ನಾಥಮುನಿಗಳೇ ಹೆಚ್ಚಿನ ದುಡಿಮೆ ಮಾಡಿ ಈ ಜ್ಞಾನ ಭಂಡಾರವನ್ನು ಹೊರಕ್ಕೆ ತೆಗೆದರು. ಪೆರಿಯವಾಚ್ಚಾನ್ ಪಿಳ್ಳೈ ಎನ್ನುವವರು ಎಲ್ಲಾ ಪ್ರಬಂಧಗಳಿಗೂ ವ್ಯಾಖ್ಯಾನವನ್ನು ಅಪೂರ್ವ ರೀತಿಯಲ್ಲಿ ಬರೆದು ವ್ಯಾಖ್ಯಾನ ಚಕ್ರವರ್ತಿಗಳೆಂಬ ಕೀರ್ತಿಗೆ ಭಾಜನರಾದರು. ಆದರೆ ಪ್ರಬಂಧಗಳಿಗೆ ವ್ಯಾಖ್ಯಾನ ಬರೆಯುವ ಅವಶ್ಯಕತೆ ರಾಮಾನುಜರ ಕಾಲಕ್ಕೆ ಇನ್ನೂ ತೋರಿ ಬಂದಿರಲಿಲ್ಲ. ಇದನ್ನು ರಾಮಾನುಜರೇ ಮೊದಲಿಗೇ ಆರಂಭಿಸಿದರು. ಶಿಷ್ಯರಿಗೆಲ್ಲಾ ಉಪದೇಶ (ಕಾಲಕ್ಷೇಪ)ವನ್ನು ರಾಮಾನುಜರು ಪ್ರಬಂಧಗಳ ಉದಾಹರಣೆಗಳಿಂದಲೇ ವಿವರಿಸುತ್ತಿದ್ದ ಉಲ್ಲೇಖ ಕೂಡ "ಗುರುಪರಂಪರಾಪ್ರಭಾವಂ" ಎನ್ನುವ ಪ್ರಮಾಣ ಗ್ರಂಥದಲ್ಲಿ ದೊರೆಯುತ್ತದೆ. ಇವರ ಕಾಲಕ್ಷೇಪಗಳೂ ಸಹ ಶಿಷ್ಯರನ್ನು ಮಂತ್ರ.ಮುಗ್ಧರನ್ನಾಗಿ ಮಾಡಿಬಿಡುತ್ತಿದ್ದ ಸಂದರ್ಭಗಳೂ ವಿವರಿತಗೊಂಡಿದೆ. "ಗುರುಪರಂಪರಾ

ಪ್ರಭಾವಂ" ಅನ್ನು ಪ್ರಮಾಣ ಗ್ರಂಥವೆಂದು ಗೌರವಿಸುವವರು ಈ ಮೇಲ್ಕಾಣಿಸಿದ ವಿವರಗಳನ್ನು ಮನಗಾಣಬಹುದಾಗಿದೆ.

ಶ್ರೀರಾಮಚಂದ್ರರಾಯರ ವಾದದಂತೆಯೇ ಶ್ರೀ ಕೆ.ಕೆ. ಎ. ವೆಂಕಟಾಚಾರಿ ಎನ್ನುವ ವಿದ್ವಾಂಸರ "Sri vaishnava Manipravala" ಎನ್ನುವ ಪುಸ್ತಕದಲ್ಲೂ ವಾದ ಪ್ರತಿವಾದಗಳು ಕಂಡು ಬರುತ್ತವೆ. ಅವು ಈ ರೀತಿ ಸ್ವಾರಸ್ಯವಾಗಿವೆ.

"While Yamuna does not mention that Dravida Veda directly in his stotrartna (stanza 5) he does pay homage to the feet of vakulabharana nammalwar whom he called the first Acharya (Adyasyanah kulapateh Vakulabrhiramam Sreemathadhan griyugalam pranamami Murdhanah). Many of his ideas are parallel to those of alwars. He includes, for instance, a direct translation from Kulashekhara Alwar in stanza 62 of his stotratna (Rushanirastopi Shishustanam - dayoh). Several different sources, such as, "Guruparampara prabhavam" the 24,000 (Iravithnalayirappadi) by Periyavachambillai and Idu of 36,000 (Muppathu arayirappadi) of vadakku Thiruveedhi Pillai report that Yamuna taught the 'Thiruvoimozhi' to his disciples and one of his disciples Tirumalai Andan instructed Ramanuja in the ' Thiruvoimozhi' . This tradition tells us that the third wish pronounced by yamuna at the time of his death was that Hymns of Nammalwar be made popular. Ramanuja, it is said taught Thiruvoimozhi to his disciples and asked pillan (Whose father also was said to be proficient in 4000 (Nalayiram) to Write commentary on the Thiruvoimozhi to fulfil Yamuna's wish. There is one thaniyan attributed to Ramanuja which describes Thirumangai Alwara's Thiruvelukuthriukkai as containing the import of vedas. I bow down to those feet which are our refuge of the one who has given the entire mening of vedas in the form of Thiruvelukuthirukkai which is composed in good tamil (sendamil) for the uplift of the world , which is great one (i.e. Text) and Which is non - satiating ambrosa...."

Tradition also says that Ramanuja as part of his temple reforms included the chanting of the tamil hymns in the temple liturgy itself (see koilougu pp. 46-50) . some scholars have suggested that yamuna's and Ramanuja's relative silence as ubhayavedantha is indicative of their pre - sanskritic brahminical bias and their unwillingness to acknow ledge the hymns of alwars or the use of tamil as language for scripture but we can see from the above references that such a conclusion is Questionable, for`yamuna has paid explicit homage to Nammalwar and has demonstrated his knowledge of hymns of Alwars in his translation of half a verse form kulasekhara Alwar. Furthermore that there are so many works which acknowledge yamuna's and Ramanuja's interpretation of the Thiruvoimozhi suggest the interpretations originally were oral tradition handed down and recorded a few generation later. Form the accounts we can conclude that the early Acharyas who acknowledged ubhayavedantha Knew the hymns of Alwars themselves and orally transmitted their interpretations e.g. yamuna to Thirumalai Andan to Ramanuja to pillan who finally wrote a commentary."

ಅಂತೂ ಗುರುಪರಂಪರಾ ಪ್ರಭಾವ ಮುಂತಾದ ಆಧಾರ ಗ್ರಂಥಗಳಿಂದ ತಿಳಿದು ಬರುವ ಅಂಶಗಳೆಂದರೆ ಈ ಕೆಳ ಕಂಡವು. ಇವುಗಳು ಪ್ರಮಾಣವೆಂದು ಅಂಗೀಕರಿಸಿದಲ್ಲಿ ಹಲ ವಾರು ಹೊಸವಿಚಾರಗಳು ಬೆಳಕಿಗೆ ಬರುತ್ತವೆ.

(ಸಶೇಷ)

# ತಿರುಮಲೆ - ಕಾಲಮಾನಾಚರಣೆಗಳು

- ಮೂಲ . ಡಾ॥ ಎನ್. ನರಸಿಂಹಾಚಾರ್ಯ
- ಅನುವಾದ :ಶ್ರೀಮತಿ

**ಧಾರಾವಾಹಿ - 2**

**(ಹಿಂದಿನ ಸಂಚಿಕೆಯಿಂದ)**

ನಂತರ ಭಗವದಾಚಾರ್ಯರು ಈ ತಿರುಮಲೆಯ ಮೇಲೆ ನೆಲೆಸಿರುವ ಸ್ವಾಮಿ ವೈಕುಂಠನಾಥನನ್ನು ಶ್ರೀಯಃಪತಿಯಾದ ಶ್ರೀ ಮಹಾವಿಷ್ಣುವೇ ಎಂದು ಸಕಲ ದೇಶಗಳಿಗೂ ತಿಳಿಯುವಂತೆ ಏರ್ಪಾಡು ಮಾಡಿದ್ದಾರೆ.ಶ್ರೀವೈಖಾನಸಾಗಮ ಹೇಳುವಂತೆ ಸಂಪ್ರೋಕ್ಷಣವನ್ನು ಮಾಡಿಸಿ ನಿತ್ಯಾರಾಧನೆ ನಡೆಯುವಂತೆ ಸಂಕಲ್ಪಿಸಿ ಶ್ರೀವಿಷ್ಣುತತ್ತ್ವ ಪ್ರತಿಷ್ಠಾಪನಾಚಾರ್ಯರಾಗಿ ಶ್ರೀಯಃ ಪತಿಗೆ ಅಸಾಧಾರಣವಾದ ಶಂಖಚಕ್ರಗಳನ್ನು ಧಾರಣೆಯನ್ನು ಮಾಡಿಸುವ ಮೊದಲೇ ಉನ್ನತವಾದ ದಿವ್ಯವಿಮಾನವನ್ನು ಶ್ರೀ ವೈಖಾನಸಾಗಮದ ಪ್ರಕಾರ ನಾಲ್ಕು ದಿಕ್ಕುಗಳಲ್ಲಿ ವರಾಹ ನರಸಿಂಹ ವೈಕುಂಠನಾಥ ಶ್ರೀವೇಂಕಟೇಶ ದೇವತಾಮೂರ್ತಿಗಳನ್ನು ಪ್ರತಿಷ್ಠಾಪಿಸಿದ್ದಾರೆ. ವಿಷ್ಣು ಪರಿವಾರ ದೇವತೆಗಳಾದ ಆದಿ ಶೇಷ, ವಿಶ್ವಕ್ಸೇನ, ಗರುಡ, ದ್ವಾರಪಾಲಕರನ್ನು ಸಹಾ ಆಯಾ ಜಾಗಗಳಲ್ಲಿ ಪ್ರತಿಷ್ಠಾಪಿಸಿದ್ದಾರೆ.ಮುಖ್ಯ ಸನ್ನಿಧಿಯಲ್ಲಿ ದಿವ್ಯೈಶ್ವರ್ಯಗಳನ್ನು ಹೊಂದಿರುವ ಶ್ರೀವಕ್ಷಃಸ್ಥಲ ನಾಯಕಿಯಾದ ಅಲಮೇಲ್ ಮಂಗಮ್ಮ ನನ್ನು:-


"ದ್ವಿಭುಜಾ ವ್ಯೂಹಲಕ್ಷ್ಮೀಃಸ್ಯಾತ್ ಬದ್ಧ ಪದ್ಮಾಸನ ಪ್ರಿಯಾ ,
ಶ್ರೀನಿವಾಸಾಂಗ ಮಧ್ಯಸ್ಥಾ ಸುತರಾಂ ಕೇಶವಪ್ರಿಯಾ"

(ಕೇಶವನಿಗೂ ಮಿಗಿಲಾದ ಪ್ರೇಮ ಸಹೃದಯಿಯಾದ ಬದ್ಧ ಪದ್ಮಾಸನ ಭಂಗಿಯಲ್ಲಿರುವ ಶ್ರೀನಿವಾಸನ ಮಧ್ಯಾಂಗ (ವಕ್ಷಃ ಸ್ಥಳ)ದಲ್ಲಿ ಸ್ಥಿತಗೊಂಡಿರುವ ವ್ಯೂಹಲಕ್ಷ್ಮಿಯು ಎರಡು ಭುಜಗಳುಳ್ಳ ವಳಾಗಿದ್ದಾಳೆ.)

ಎಂದು ವರಾಹ ಪುರಾಣಸಿದ್ಧವಾದ ವಚನದಂತೆ ದ್ವಿಭುಜ ವ್ಯೂಹಲಕ್ಷ್ಮೀಯಾಗಿ ಭಕ್ತರಿಗೆ ದರ್ಶನವೀಯುವಂತೆ ಶುಕ್ಲ ದ್ವಾದಶಿ ಶುಕ್ರವಾರ, ಉತ್ತರಫಲ್ಗುಣಿ ನಕ್ಷತ್ರದಿಂದ ಕೂಡಿರುವಂಥ ರತ್ನ ಮಂಜಲಿಯೋಗವಿರುವಂತೆ ದಿವ್ಯ ವಕ್ಷಃಸ್ಥಳವನ್ನು (ಲಕ್ಷ್ಮಿದೇವಿಗೆ) ಸಮರ್ಪಿಸಲಾಯಿತು. ಶ್ರೀವೇಂಕಟೇಶ್ವರ ಸ್ವಾಮಿಗೆ ಅನಾದಿಕಾಲದಿಂದಲೂ ನಿತ್ಯಾಭಿಷೇಕ ನೆರ ವೇರುವುದನ್ನು ಕೇಳಿ ಈ ರೀತಿಯಾಗಿ ನೆರ ವೇರಿಸಲು ಆ ದಿವ್ಯವಿಗ್ರಹಕ್ಕೆ ಸಮಯೋಚಿತವಾದ ಎಲ್ಲಾ ಆಚಾರಗಳನ್ನು ಜರುಗಿಸಬೇಕೆಂದು ನಿರ್ಣಯಿಸಿ.

"ಕಿಂಚ ಲಕ್ಷ್ಮೀಭಿಷೇಕಸ್ತು ವಾಸರೇ,ಭಾರ್ಗವೇ ಹರೇಃ
ಸಾನ್ನಿಧ್ಯಕಾರೀ ಸತತಂ ಸರ್ವಸಂಪತ್ಪ್ರದಾಯಕಃ"





ಇದಷ್ಟೇ ಅಲ್ಲದೇ, ಶುಕ್ರವಾರದಂದು ಶ್ರೀಲಕ್ಷ್ಮೀ ದೇವಿಗೆ ಜರುಗಿಸುವ ಅಭಿಷೇಕವು ಶ್ರೀವಿಷ್ಣು ಸಾನ್ನಿಧ್ಯಲ್ಲಾಗುವುದು ಎಂದಿಗೂ ಸರ್ವಸಂಪದಗಳನ್ನೇ ಸುರಿಸುವುವು.

ಎಂದು ವೈಖಾನಸಾಗಮದ ಆನಂದ ಸಂಹಿತೆಯಲ್ಲಿ ಹೇಳಿದಂತೆ ಶುಕ್ರವಾರದಂದು ಅಲರ್‌ಮೇಲ್ ಮಂಗಾದೇವಿ ದಿವ್ಯವಕ್ಷಃ ಸ್ಥಳದಿಂದಿಳಿದು ಕೆಳಗೆ ಬಂದು ಅಭಿಷೇಕವನ್ನು ಸ್ವೀಕರಿಸುವ ಮೊದಲು ಶ್ರೀಸ್ವಾಮಿಗೆ ಅಭಿಷೇಕವನ್ನು ಸ್ವೀಕರಿಸುವಂತೆ ಕಟ್ಟಳೆ ವಿಧಿಸಲಾಯಿತು.

"ಅಷ್ಟಮಿಯಂದು ಕಲಾಕಾರ ಲಲಾಟಸ್ಥಾರೇ ಪುಂಡ್ರಕಃ"

(ಅಷ್ಟಮಿ ದಿನದ ಚಂದ್ರನಂತೆ ಕಾಂತಿಯುತವಾದ ಲಲಾಟದ ಮಧ್ಯೆ ಧರಿಸಿರುವ ಊರ್ಧ್ವಪುಂಡ್ರಗಳವನು)

ಎನ್ನುವ ಪದ್ಮಪುರಾಣದ ವಚನದಂತೆ -

"ನಾಸಿಕ ಮೂಲ ಮಾರಭ್ಯ ರೇಖಾದ್ವಿತಯಸಂಯುತಂ,
ಧಾರಯೇ ದೂರ್ಧ್ವಪುಂಡ್ರ ತು ಹರೇಃ ಫಾಲತಲೇ ಶುಭೇ."

(ಮಂಗಳಕರವಾದ ಶ್ರೀಹರಿ ಫಾಲಭಾಗದಲ್ಲಿ ನಾಸಿಕಮೂಲದಿಂದ ಮೊದಲುಗೊಂಡು ಎರಡು ರೇಖೆಗಳು ಕೂಡಿದಂತೆ ಊರ್ಧ್ವ ಪುಂಡ್ರವನ್ನು ಧರಿಸತಕ್ಕದ್ದು)

ಎಂಬ ಮಾತನ್ನು ಹೇಳುವ ವೈಖಾನಸಾಗಮಶಾಸ್ತ್ರ ಸಿದ್ಧವಾದ ಶ್ರೀಯಃಪತಿಗೆ ಅಸಾಧಾರಣವಾದ ರೇಖಾದ್ವೈತರೂಪವಾದ ತಿರುನಾಮವನ್ನು (ತಿರುಮಣ್‌ಕಾಪ್ಪು, ಊರ್ದ್ವಪುಂಡ್ರ) ನಾಸಿಕದಿಂದ ಮೊದಲುಗೊಂಡು ಕೇಶದಾದ್ಯಂತ್ಯ ತಿದ್ದಿ ಹಚ್ಚ ಬೇಕಾದ್ದು ಎಂದು ಹೀಗೆ ಕಟ್ಟಳೆಯನ್ನು ಮಾಡಿದ ಮರುದಿನವೇ ಶುಕ್ರವಾರವಾದ್ದರಿಂದ ಆ ದಿನದ ತಿರುಮಂಜನ (ಅಭಿಷೇಕವನ್ನು) ಆಚರಿಸುವ ಸಮಯದಲ್ಲಿ ಮೊದಲು ಆಕಾಶಗಂಗಾ ನೀರಿನಿಂದ ಮೊದಲು ಅಭಿಷೇಕ ಮಾಡುತ್ತಲೇ ಸ್ವಾಮಿಯ ದಿವ್ಯಫಾಲಕದ ಮೇಲೆ ತಿದ್ದಿ ಬರೆದ ಊರ್ದ್ವಪುಂಡ್ರ ರೇಖೆಗಳು ಅಳಿಸಿ ಹೋಗಿ, ಆ ರೇಖೆಗಳ ಮೂಲ ಭಾಗವು ನಾಸಾದಿಯಲ್ಲಿ ಕಲೆತು ಉಂಟಾದ ಅರ್ಧಚಂದ್ರಾಕೃತಿಯ ತಿರುನಾಮ ಭಾಗವು ಮಾತ್ರ ಅಳಿಸದೇ ಉಳಿಯಿತು. ಈ ಅರ್ಧ ಚಂದ್ರಾಕೃತಿಯ ರೇಖಾಭಾಗವು ಸಹಾ ಶ್ರೀರಾಮಾನುಜ ಚಾರ್ಯರು ಬರದದ್ದೇ. ಮೊದಲು ಜಗನ್ಮೋಹಿನಿಯಾಗಿ ಅವತರಿಸಿದ ಸಂದರ್ಭದಲ್ಲಿ ದಿವ್ಯಫಾಲಕದಲ್ಲಿ ಅರ್ಧ-ಚಂದ್ರಾಕಾರವಾದ ಪುಂಡ್ರವು (ಸ್ತ್ರೀಯರ ವದನದ ನಾಮದಂತೆ) ನೋಡುತ್ತಿದ್ದ ದೇವದಾನವರಿಗೆ ಮೋಹಕವಾಗಿ ಕಂಡುಬಂದಂತೆ ಈ ಜಗನ್ಮೋಹನನಾದ ದಿವ್ಯಮಂಗಳ ವಿಗ್ರಹದ ನಾಸಿಕಾಗ್ರದಲ್ಲಿ ಕಂಡು ಬರುತ್ತಿರುವ ಅರ್ಧ ಚಂದ್ರಾಕಾರವು ಸ್ವಾಮಿಯ ತಿರುನಾಮವಾಗಿ ಶ್ರೀಮುಖಕ್ಕೆ ಶೋಭಾಯ ಮಾನವಾಗಿ ನೋಡುಗರ ದೃಷ್ಟಿಯನ್ನು ಹೃದಯವನ್ನು ಆಕರ್ಷಿಸುವುದರಿಂದಲೇ ಈ ತಿರುನಾಮವನ್ನೇ ಸ್ವಲ್ಪದಿನಗಳವರೆಗೆ ಧಾರಣೆ ಮಾಡಬೇಕೆಂದು ಜನಮನ ಕೋರಲು "ಹಾಗೇ ಆಗಲೀ" ಎಂದು ಅರ್ಚಕರ ಮೂಲಕ ಭಗವದನುಗ್ರಹವನ್ನು ತಿಳಿಸಲಾಯಿತು.

ಶ್ರೀಭಗವದ್ರಾಮಾನುಜಾಚಾರ್ಯರು ಶುಕ್ರವಾರದಂದು ಶ್ರೀನಿವಾಸನು ಅಭಿಷೇಕವನ್ನು ಸ್ವೀಕರಿಸಿದ ನಂತರ ಕರ್ಪೂರ ಚೂರ್ಣದಿಂದ ದಿವ್ಯಫಾಲಕದಲ್ಲಿ ರೇಖಾದ್ವಯ ರೂಪದಲ್ಲಿರುವ ತಿರುನಾಮವನ್ನು ಮೂರು ದಿನಗಳವರೆಗೆ ಹಾಗೇ ಇರುವಂತೆ ಏರ್ಪಾಟು ಮಾಡಿದರು.

(- ಸಶೇಷ)

# ಮಹಾದಾರ್ಶನಿಕ ಶ್ರೀಶಂಕರಾಚಾರ್ಯರು

- ಡಾ॥ ಲಕ್ಷ್ಮೀಕಾಂತ ವಿ. ಮೊಹರೀರ

ಸನಾತನ ಭಾರತದ ಸಂಸ್ಕೃತಿಯನ್ನು ಜಗತ್ತಿಗೆ ಸಾರಿ ಹೇಳಿದ ಆಚಾರ್ಯತ್ರಯರಲ್ಲಿ ಶಂಕರಾಚಾರ್ಯರು ಮೊದಲಿಗರು. ಕೇವಲ ೩೨ ವರ್ಷಗಳ ಕಾಲ ಜೀವಿಸಿ ದೇಶದ ಮೂಲೆ ಮೂಲೆಗಳಿಗೆ ಸಂಚರಿಸಿ ಗೀತಾಚಾರ್ಯ ಶ್ರೀಕೃಷ್ಣನ ಸಿದ್ಧಾಂತ ವಾದ "ಅದ್ವೈತ ತತ್ವವನ್ನು ಪ್ರತಿಪಾದಿಸುತ್ತ ಈ ವಿಶಿಷ್ಟ ಅಂಶಗಳನ್ನು ಜಗತ್ತಿಗೆ ಸಾರಿ ಹಲವಾರು ಮತಗಳಿಂದ ದಾಳಿಗೊಳಗಾಗುತ್ತಿದ್ದ ಸನಾತನ ಧರ್ಮವನ್ನು ಪುನರುತ್ಥಾನಗೊಳಿಸಿದ ಸರ್ವಶ್ರೇಯಸ್ಸು ಶ್ರೀಆದಿಗುರು ಶಂಕರಾಚಾರ್ಯರಿಗೆ ಸಲ್ಲುತ್ತದೆ.

ಇಂತಹ ಮಹಾದಾರ್ಶನಿಕರ ಜೀವನ - ಸಾಧನೆಗಳತ್ತ ಮುಖಮಾಡೋಣ. ಶಿವಗುರು ಹಾಗೂ ಆರ್ಯಾಂಬಾ ಪುಣ್ಯ ದಂಪತಿಗಳಿಗೆ ದೀರ್ಘಕಾಲದಿಂದ ಪುತ್ರೋತ್ಸವವಾಗದೆ ಇರುವುದರಿಂದ 'ತ್ರಿಚೂರ' ವೆಂಬ ಶಿವಕ್ಷೇತ್ರಕ್ಕೆ ಹೋಗಿ, ಪೂಜೆ - ಪುನಸ್ಕಾರ ಕೈಗೊಂಡಿದ್ದರ ದೆಸೆಯಿಂದಾಗಿ, ಪರಮೇಶ್ವರನ ಅಂಶವಾಗಿ, ಸೌರಮಾನ ವೈಶಾಖ ಶುಕ್ಲ ಪಂಚಮಿಯಂದು ಮಧ್ಯಾಹ್ನ ಪುನರ್ವಸು ನಕ್ಷತ್ರ ಇರುವಾಗ 'ಶಂಕರನ' ಜನುಮವಾಯಿತು. ಶಂಕರಾಚಾರ್ಯರ ಕಾಲದ ಬಗ್ಗೆ ವಿದ್ವಾಂಸರಲ್ಲಿ ಇನ್ನೂ ಜಿಜ್ಞಾಸೆಯಿದೆ. ಒಂದು ವಿಧದ ಪ್ರಕಾರ (ಕ್ರಿ.ಶ. ೭೮೮) ೮ನೇ ಶತಮಾನದಲ್ಲಿ ಜನಿಸಿದರು ಎಂದು ನಂಬಲಾಗಿದೆ. ಇವರು ಆತ್ರೇಯ ಗೋತ್ರದ ಯಜುರ್ ವೇದದ ತೈತ್ತಿರೀಯ ಶಾಖೆಯವರು ಎಂದು ಹೇಳಲಾಗುತ್ತದೆ.



ಶಿವಗುರುವಿನ ಮನೆಯಲ್ಲಿ ಹುಟ್ಟಿದ ಮಗುವನ್ನು ಕಂಡು ಕಾಲಟಿಯ ಜನರು ಶಂಭುವೇ ಅವತರಿಸಿ ಬಂದಿದ್ದಾನೆಂದು ತಿಳಿದರು ಎಂದು ಆನಂದಗಿರಿ ವರ್ಣಿಸಿದ್ದಾರೆ. ಪದ್ಧತಿಯಂತೆ ಜಾತಕವನ್ನು ಬರೆಯಬೇಕೆಂದು ಕರೆಸಿದ ಜ್ಯೋತಿಷ್ಯರು ಈ ಶಿಶು ಎಲ್ಲಾ ವಿಧದಲ್ಲಿಯೂ "ಪೂರ್ಣ"ವೆಂದು ಹೇಳಿದರು. ಹನ್ನೊಂದನೆಯ ದಿನ ಮಗುವಿಗೆ 'ಶಂಕರ'ನೆಂದು ನಾಮಕರಣ ಮಾಡಿದರು. ಚಿಕ್ಕ ವಯಸ್ಸಿನಲ್ಲೆ ವಿದ್ಯಾಪಾರಂಗತರಾದರು. ಇವರ ಉಪನಯನವಾಗುವುದಕ್ಕಿಂತ ಮುಂಚೆಯೇ ಇವರ ತಂದೆಯು ತೀರಿಕೊಂಡರು. ಶಂಕರರಿಗೆ ಐದು ವರ್ಷವಾದಾಗ ಉಪನಯನವಾಯಿತು. ವೇದಾಭ್ಯಾಸಕ್ಕಾಗಿ ಗುರುಕುಲಕ್ಕೆ ಕಳುಹಿಸಲಾಯಿತು. ವೇದ, ಉಳಿದ ಎಲ್ಲಾ ಶಾಸ್ತ್ರಗಳನ್ನು ಸ್ವಲ್ಪ ಕಾಲದಲ್ಲಿ ಕಲಿತರು. ಎಂಟು ವರ್ಷ ತುಂಬುವುದಕ್ಕೆ ಮೊದಲೇ ಶಂಕರರು ಗುರುಕುಲದ ವಿದ್ಯಾಭ್ಯಾಸ ಪೂರೈಸಿದರು. ಶಿಕ್ಷಣವು ಪೂರೈಸಿದ ಮೇಲೆ ಶಂಕರರು ಗುರುಕುಲದಿಂದ ಹಿಂತಿರುಗಿ ತಾಯಿಯೊಡನೆ ವಾಸಿಸತೊಡಗಿದರು.

ಮುಂದೆ ತಾಯಿಯ ಆಶೀರ್ವಾದ ಪಡೆದು ಸನ್ಯಾಸ ಧರ್ಮ ಸ್ವೀಕರಿಸಲು ಅಪ್ಪಣೆ ಪಡೆದು ಧರ್ಮೋದ್ದೇಶ ಸಾಧನೆಗಾಗಿ ಮನೆಯನ್ನು ತೊರೆದು ಕಾಲಟಿಯನ್ನು ಬಿಟ್ಟು ಗುರುವನ್ನು ಹುಡುಕಿಕೊಂಡು ಉತ್ತರ ದಿಕ್ಕಿಗೆ ಪ್ರಯಾಣ ಮಾಡಿದರು.

ನರ್ಮದಾನದಿಯ ದಂಡೆಯ ಮೇಲೆ ಇದ್ದ ಗೌಡಪಾದರ ಶಿಷ್ಯರಾದ ಗೋವಿಂದ ಭಗವತ್ಪಾದರನ್ನು ಭೇಟಿಯಾಗಿ. "ಅದ್ವೈತವಾದದ ಉದಾತ್ತ ನಿರೂಪಣೆಯನ್ನು ಮಾಡಿದರು. ಅವರಿಂದ ಸನ್ಯಾಸಧರ್ಮವನ್ನು ಸ್ವೀಕರಿಸಿ ಮುಂದೆ ಕಾಶಿಗೆ ಪ್ರಯಾಣ ಬೆಳೆಸಿದರು.

ತತ್ವಜ್ಞಾನದ ಪ್ರಪಂಚದಲ್ಲಿ ಶ್ರೀಶಂಕರರು ಒಂದು ಧ್ರುವ ತಾರೆಯೇ ಸರಿ. ಅತ್ಯಲ್ಪಾವಧಿಯಲ್ಲಿ ಅವರು ಗೈದ ಸಾಧನೆಗಳು ಅವರನ್ನು ಅಪೌರುಷೇಯ ಸ್ಥಾನಕ್ಕೇರಿಸಿವೆ.

ಶಂಕರಾಚಾರ್ಯರು ಮುಖ್ಯವಾಗಿ ಪ್ರಸ್ಥಾನತ್ರಯ - ಬ್ರಹ್ಮ ಸೂತ್ರಗಳು, ಉಪನಿಷತ್ತುಗಳು ಹಾಗೂ ಭಗವದ್ಗೀತೆ ಇವುಗಳಿಗೆ ಭಾಷ್ಯಗಳನ್ನು ರಚಿಸಿದರು. ಇನ್ನು ತತ್ವಶಾಸ್ತ್ರ ಪ್ರವೇಶಕರಿಗಾಗಿಯೇ ರಚಿಸಲ್ಪಟ್ಟ ವಿವೇಕ ಚೂಡಾಮಣಿ, ಅನುಭೂತಿ ಪ್ರಕರಣ ಇತ್ಯಾದಿ ಪ್ರಕರಣ ಗ್ರಂಥಗಳು ಹಲವಾರಿವೆ. ಕೊನೆಯದಾಗಿ ಜನ ಸಾಮಾನ್ಯರಿಗಾಗಿ ಸಾಕಷ್ಟು ದೇವತಾ

ಸ್ತೋತ್ರಗಳನ್ನು ರಚಿಸಿ, ಮನುಕುಲಕ್ಕೆ ಉಪಕಾರ ಗೈದಿದ್ದಾರೆ. ಯಾವುದೇ ಮತ - ಪಂಥಗಳ ಬೇಧವಿಲ್ಲದೇ ಶಂಕರರು ಎಲ್ಲಾ ದೇವತೆಗಳ ಕುರಿತಾಗಿ ರಚಿಸಿದ ಸ್ತೋತ್ರ ಸಮೂಹವು ಶಂಕರರ ಅಖಂಡತೆ ಮತ್ತು ಐಕತೆಯ ಮನೋಭಾವವನ್ನು ಬಿಂಬಿಸುತ್ತದೆ. ಇವರು ರಚಿಸಿದ ಭಜ ಗೋವಿಂದಮ್ ಸ್ತೋತ್ರ ಅತ್ಯಂತ ಜನಪ್ರಿಯವಾಗಿದೆ.

ದೇಶದ ನಾಲ್ಕು ಭಾಗಗಳಲ್ಲಿ 'ಅಮ್ನಾಯ' ಪೀಠಗಳನ್ನು ಸ್ಥಾಪಿಸಿದ ಮಹಾದಾರ್ಶನಿಕರು, ಉತ್ತರದಲ್ಲಿ ಬದರಿಪೀಠ, ದಕ್ಷಿಣದಲ್ಲಿ 'ಶೃಂಗೇರಿ ಪೀಠ', ಪೂರ್ವದಲ್ಲಿ 'ಪುರಿಪೀಠ', ಹಾಗೂ ಪಶ್ಚಿಮದಲ್ಲಿ 'ದ್ವಾರಕಾಪೀಠ'ಸ್ಥಾಪಿಸಿದ ಮಹಾನುಭಾವರು. ಈ ನಾಲ್ಕು ಮಠಗಳು ಇಂದಿಗೂ ತಮ್ಮ ಗುರು ಪರಂಪರೆಯನ್ನೂ ಮುಂದುವರೆಸಿ ಕೊಂಡು ಬರುತ್ತಿರುವುದು ಹೆಮ್ಮೆಯ ವಿಚಾರ.

'ಅದ್ವೈತ' ಸಿದ್ಧಾಂತವನ್ನು ಪ್ರಚುರಪಡಿಸಿದ ಶ್ರೀ ಶಂಕರಾಚಾರ್ಯರು ಇದನ್ನು ಜನಮಾನಸದಲ್ಲಿ ತಂದರು. ಸಂಸ್ಕೃತದಲ್ಲಿ 'ದ್ವಿ' ಎಂದರೆ ಎರಡು ಎಂದರ್ಥ. ಹಾಗಾಗಿ ' ಅ- ದ್ವೈತ' ಎಂದರೆ ಎರಡಲ್ಲದ್ದು ಎಂದು ಅರ್ಥೈಸಬಲ್ಲದು. ಅದ್ವೈತ ಸಿದ್ದಾಂತದ ಮೂಲ ಸಾರವೇ ಇದು.

ಅಹಂ ಬ್ರಹ್ಮಾಸ್ಮಿ (ನನ್ನೊಳಿರುವ ಆತ್ಮವೇ ಪರಬ್ರಹ್ಮ) ತತ್ ತ್ವಮ್ ಅಸ್ತಿ' (ನೀನು ಅದೇ ಆತ್ಮದಿಂದ ಆಗಿರುವೆ) ಎಂಬುದು ಅದ್ವೈತ ತತ್ವದ ಮೂಲ ಮಂತ್ರ.

'ಶೃತಿಸ್ಮೃತಿ ಪುರಾಣಾನಾಂ
ಆಲಯಂ ಕರುಣಾಲಯಮ್
ನಮಾಮಿ ಭಗವತ್ಪಾದ ಶಂಕರಂ
ಲೋಕ ಶಂಕರಮ್ ।

ಎಂಬ ಶ್ರೀಮದ್ ಶಂಕರಾಚಾರ್ಯರ ಸ್ತೋತ್ರವನ್ನು ಅನುದಿನದಲ್ಲಿ ಪಠಿಸುತ್ತ ಅಂತಹ ಮಹಾದಾರ್ಶನಿಕರ, ಅನುಪಮ ಕೊಡುಗೆಗಳನ್ನು ಮೆಲುಕು ಹಾಕುತ್ತ ಆದಿ ಗುರು ಶಂಕರರ ನಮಿಸೋಣ.

### ತಿರುಮಲೆ ತಿರುಪತಿ ದೇವಸ್ಥಾನಗಳು, ತಿರುಪತಿ

# ತಿರುಮಲೆಯಲ್ಲಿ

ಮಾಡಬೇಕಾದವು; ಮಾಡಬಾರದವುಗಳು ಹಾಗೂ ನಿಷಿದ್ಧವಾದವು.

## ಮಾಡಬೇಕಾದವು :

☑ ತಿರುಮಲೆಗೆ ಬರುವ ಮುನ್ನ ನಿಮ್ಮ ಇಷ್ಟ ಅಥವಾ ಕುಲದೈವವನ್ನು ಪೂಜಿಸಿರಿ.
☑ ಶ್ರೀವೆಂಕಟೇಶ್ವರ ಸ್ವಾಮಿಯನ್ನು ದರ್ಶಿಸುವ ಮೊದಲು ಸ್ವಾಮಿ ಪುಷ್ಕರಿಣಿಯಲ್ಲಿ ಸ್ನಾನಮಾಡಿ,
☑ ಅಲ್ಲಿಯೇ ಇರುವ ಶ್ರೀ ವರಾಹಸ್ವಾಮಿಯನ್ನು ದರ್ಶಿಸಿರಿ.
☑ ದೇವರ ದರ್ಶನಕ್ಕೆ ಸರದಿಯ ಸಾಲು ಸೇರಿರಿ.
☑ ಆಲಯದ ಒಳಗಡೆ ಸ್ವಾಮಿಯಲ್ಲಿ ಮನಸ್ಸನ್ನು ಕೇಂದ್ರೀಕರಿಸಿ.
☑ ಆಲಯದ ಒಳಗಡೆ ಗಂಭೀರ ಮೌನವನ್ನು ಪಾಲಿಸಿರಿ ಮತ್ತು
☑ ಮನಸ್ಸಿನಲ್ಲಿ "ಓಂ ನಮೋ ವೇಂಕಟೇಶಾಯ" ಎಂದು ಜಪಿಸಿರಿ.
☑ ತಿರುಮಲೆಯಲ್ಲಿ ಪಾಪನಾಶಿನಿಯಲ್ಲೂ, ಆಕಾಶಗಂಗೆಯಲ್ಲೂ ಸ್ನಾನಮಾಡಿರಿ.
☑ ತಿರುಮಲೆಗೆ ಬಂದಾಗ ಪ್ರಾಚೀನಪರಂಪರೆಯನ್ನೂ ಆಚಾರವನ್ನೂ ಗೌರವಿಸಿ.
☑ ತಮ್ಮ ಕಾಣಿಕೆಗಳನ್ನು ಹುಂಡಿಯಲ್ಲಿ ಮಾತ್ರವೇ ಸಮರ್ಪಿಸಿ.
☑ ತಿರುಮಲೆಯನ್ನು ಶುಭ್ರವಾಗಿ ಶುದ್ಧವಾಗಿ ಇಡಲು ಸಹಕರಿಸಿ.
ಬಯೋಡಿಗ್ರೇಡಬಲ್ ಪ್ಲಾಸ್ಟಿಕ್ ಕವರಗಳನ್ನು ಮಾತ್ರವೇ ಬಳಸಿರಿ.

## ಮಾಡಬಾರದವು :

☒ ತಮ್ಮೊಂದಿಗೆ ಹೆಚ್ಚಿನ ಹಣ, ಆಭರಣಗಳನ್ನು ತರಬೇಡಿ.
☒ ದೇವರನ್ನು ಸೇವಿಸುವುದರ ಹೊರತು ಬೇರೆ ಯಾವ ಕಾರಣಕ್ಕೂ ತಿರುಮಲೆಗೆ ಬಾರದಿರಿ.
☒ ದೇವರ ದರ್ಶನಕ್ಕಾಗಿ ನೂಕುನುಗ್ಗುಲು ಮಾಡದಿರಿ.
☒ ಸಂಪ್ರದಾಯದಂತೆ ಆಲಯ ಪ್ರವೇಶ ನಿಷೇಧವಿದ್ದಲ್ಲಿ ಆಲಯ ಪ್ರವೇಶ ಮಾಡದಿರಿ.
☒ ಹೂವು ಮುಡಿಯದಿರಿ. (ಎಲ್ಲ ಹೂವುಗಳೂ ದೇವರಿಗೇ.)
☒ ನೀರು, ವಿದ್ಯುತ್‌ಗಳು ಪೋಲು ಮಾಡದಿರಿ.
☒ ಅಪರಿಚಿತರಿಗೆ ನಿಮ್ಮ ಕೋಣೆಯ ಬೀಗದ ಕೈಗಳನ್ನು ನೀಡದಿರಿ, ಅವರನ್ನು ನಿಮ್ಮ ಕೊಠಡಿಗೆ ಸೇರಿಸದಿರಿ.
☒ ಆಲಯದ ಒಳಗೆ, ಹೊರಗೆ ಪಾದರಕ್ಷೆಗಳನ್ನು ಧರಿಸಿ ಓಡಾಡಬೇಡಿರಿ.

## ನಿಷೇಧಿತ ಪದಾರ್ಥಗಳು :( ನಿಷೇಧಿಸಿದವು)

✗ ತಿರುಮಲೆಯಲ್ಲಿ ಮಾಂಸಾಹಾರವನ್ನು ಬಳಸಬೇಡಿರಿ. ಮಾದಕ ವಸ್ತು, ಪೇಯಗಳನ್ನು ಬಳಸಬೇಡಿರಿ. ಧೂಮಪಾನ ಮಾಡಬೇಡಿರಿ.
✗ ವಸತಿಗಾಗಿ, ಪ್ರತ್ಯೇಕ ಪ್ರವೇಶಕ್ಕಾಗಿ ದಳ್ಳಾಳಿಗಳನ್ನು ಆಶ್ರಯಿಸಬೇಡಿರಿ.
✗ ಬೀದಿವ್ಯಾಪಾರಿಗಳಿಂದ ನಕಲೀ ಪ್ರಸಾದ ಕೊಳ್ಳಬೇಡಿ.
✗ ದೇವಾಲಯದಲ್ಲಿ ಉಗುಳುವುದೇ ಮುಂತಾದವುಗಳನ್ನು ಮಾಡದಿರಿ.
✗ ಅನ್ಯಮತ ಪ್ರಚಾರ ನಿಷೇಧಿಸಲಾಗಿದೆ.
✗ ವಿವಿಧ ರಾಜಕೀಯ ಸಭೆ, ಬ್ಯಾನರು, ಧರಣಿ, ರಾಸ್ತಾರೋಕೋ, ಹರತಾಳ - ಮೊದಲಾದವುಗಳನ್ನು ನಿಷೇಧಿಸಲಾಗಿದೆ.
✗ ಜಂತುವಧೆ ನಿಷೇಧ.
✗ ಯಾವುದೇ ರೂಪದಲ್ಲಿ ಜೂಜಾಡುವುದನ್ನು ನಿಷೇಧಿಸಲಾಗಿದೆ.
✗ ಸೆಲ್‌ಫೋನ್, ಕ್ಯಾಮರಾ, ಮತ್ತಿತರ ವಿದ್ಯುತ್ ಚಾಲಿತ ಉಪಕರಣಗಳನ್ನು ಆಲಯಕ್ಕೆ ಒಯ್ಯಬೇಡಿರಿ.ಆಯುಧಗಳನ್ನು ತರಬಾರದು.
✗ ಭಿಕ್ಷೆಯನ್ನು ಪ್ರೋತ್ಸಾಹಿಸದಿರಿ. ಹುಸಿ ಪ್ರಸಾದಗಳನ್ನು ಕೊಳ್ಳಬೇಡಿರಿ.

# ನೀತಿ ಕಥೆ

# ನಿಜವಾದ ಭಕ್ತನಾರು

-ಶ್ರೀಮತಿ. ಸುಧಾ ಮಧುಸೂದನ್

ಪಾಂಡವರು ವನವಾಸದಲ್ಲಿ ಇದ್ದಾಗ ಪ್ರತಿದಿನ ಬೆಳಗ್ಗೆ ಬೇಗನೆ ಎದ್ದು ಭಗವಂತನ ಪ್ರಾರ್ಥನೆ ಮಾಡುತ್ತಿದ್ದರು. ಆದರೆ ಭೀಮ ಮಾತ್ರ ಬಹಳ ಹೊತ್ತು ಮಲಗಿ ನಿದ್ದೆ ಮಾಡುತ್ತಿದ್ದಾ ಬೆಳಗ್ಗೆ ಬೇಗ ಏಳದೆ ಎಲ್ಲರ ಹತ್ತಿರವು ಸೋಮಾರಿ ಎಂದು ಕರೆಸಿಕೊಳ್ಳುತ್ತಿದ್ದನು.

ಅರ್ಜುನನಿಗೆ ತಾನು ಶ್ರೀ ಕೃಷ್ಣನ ಶ್ರೇಷ್ಟ ಭಕ್ತ ಎಂದು ಹೆಮ್ಮೆ ಮತ್ತು ಅಹಂಕಾರವಿತ್ತು ತಾನು ಭಕ್ತಿಯಲ್ಲಿ ಉಳಿದ ಪಾಂಡವರಿಗಿಂತ ಶ್ರೇಷ್ಟ ಎಂದು.

ಒಂದು ದಿನ ಎಲ್ಲರೂ ಊಟಕ್ಕೆ ಕುಳಿತಿದ್ದಾಗ ಅರ್ಜುನ ಧರ್ಮರಾಯನಿಗೆ ಕೇಳಿದನು. “ಅಣ್ಣಾ ನಾಳೆ ನಾವೇಕೆ ಶ್ರೀಕೃಷ್ಣ ನನ್ನು ಊಟಕ್ಕೆ ಕರೆಯಬಾರದು. ಬಹಳ ದಿವಸವಾಯಿತು ಶ್ರೀ ಕೃಷ್ಣ ನಮ್ಮ ಮನೆಗೆ ಬಂದು ಎಂದು ಹೇಳಿದನು. ಇದನ್ನು ಕೇಳಿ ಧರ್ಮ ರಾಯನು ಸಂತೋಷದಿಂದ ಒಪ್ಪಿಗೆ ಕೊಟ್ಟನು. ಉಳಿದ ಪಾಂಡ ವರು ಸಹ ಸಮ್ಮತಿ ಸೂಚಿಸಿದರು. ಸರಿ ಕೃಷ್ಣನನ್ನು ಯಾರು ಕರೆದು ಕೊಂಡು ಬರುವುದು? ಎಂದು ಯೋಚಿಸುತ್ತಿದ್ದಾಗ ಧರ್ಮ ರಾಯನು ನಕುಲನಿಗೆ ಈ ಕೆಲಸವನ್ನು ಒಪ್ಪಿಸಿದನು.

ನಕುಲನು ಕೃಷ್ಣನನ್ನು ಕರೆಯಲು ಹೋದಾಗ ಶ್ರೀಕೃಷ್ಣನು ತನಗೆ ಬಹಳ ಕೆಲಸವಿರುವುದರಿಂದ ಬರಲು ಆಗುವುದಿಲ್ಲ ಎಂದು ನಕುಲನ ಕರೆಯನ್ನು ನಿರಾಕರಿಸಿದನು. ಇದನ್ನು ಕೇಳಿ ಅರ್ಜುನನು “ನಕುಲ ನೀನು ಕರೆದರೆ ಅವನು ಬರುವುದಿಲ್ಲ. ನೋಡುತ್ತಿರು, ನಾನು ಅವನನ್ನು ಕರೆದುಕೊಂಡು ಬಂದೇ ಬರುತ್ತೇನೆ. ” ಎಂದು ಬಹಳ ಜಂಬದಿಂದ ಹೊರಟನು.

ಆದರೆ ಕೃಷ್ಣನು ಅರ್ಜುನನ ಕರೆಗೂ ಸಹ ನಿರಾಕರಿಸಿದನು. ಅರ್ಜುನನು ನಿರಾಶೆಯಿಂದ ಭಾರವಾದ ಹೃದಯದಿಂದ ಹಿಂದಿರುಗಿದನು. ಇವೆಲ್ಲವನು ಕೇಳುತ್ತಿದ್ದ ಭೀಮ ಅವರ ಬೇಸರಕ್ಕೆ ಕಾರಣವೇನು ಎಂದು ಕೇಳಿದನು. ಧರ್ಮರಾಯನು ನಡೆದ ಎಲ್ಲಾ ವಿಷಯವನ್ನು ಭೀಮನಿಗೆ ಹೇಳಿದನು.

ಅದಕ್ಕೆ ಭೀಮನು “ ಅಣ್ಣಾ! ಇಷ್ಟು ಸಣ್ಣ ವಿಷಯಕ್ಕೆ ಇಷ್ಟೊಂದು ಚಿಂತೆ ಮಾಡುತ್ತಿರುವೆಯಾ ನೀವೆಲ್ಲರೂ ಚಿಂತೆ ಬಿಡಿ ನಾನು ಶ್ರೀ ಕೃಷ್ಣನನ್ನು ಈಗಲೇ ಕರೆತರುವೆ” ಎಂದನು. ನಂತರ ದ್ರೌಪತಿಯನ್ನು ಕರೆದು “ಎಲೈ ಕೃಷ್ಣೇ ನೀನು ಶ್ರೀ ಕೃಷ್ಣನಿಗೆ ಏನೇನು ಇಷ್ಟವೋ ಎಲ್ಲಾ ತರಹದ ಅಡುಗೆ ಮಾಡಿಡು. ಇವತ್ತು ವಾಸುದೇವನನ್ನು ಊಟಕ್ಕೆ ಕರೆತರುವೆನು. ಎಲ್ಲರೂ ಸೇರಿ ಊಟ ಮಾಡೋಣ” ಎಂದು ಹೇಳಿ ಹೊರಟನು. ಭೀಮನ ಮಾತನ್ನು ಕೇಳಿ ಎಲ್ಲಾ ಸಹೋದರರು ಅಪಹಾಸ್ಯ ಮಾಡಿಕೊಂಡು ಮನಸೋ ಇಚ್ಛೆ ನಕ್ಕರು.


ಭೀಮನು ಮನೆಯಿಂದ ಅವರ ಕಣ್ಣಿಗೆ ಕಾಣದಷ್ಟು ದೂರ ನಡೆದುಕೊಂಡು ಹೋದನು. ಹಿಂದಿರುಗಿ ನೋಡಿ ಯಾರು ತನ್ನನ್ನು ಹಿಂಬಾಲಿಸುತ್ತಿಲ್ಲ ಎಂದು ಖಾತ್ರಿ ಮಾಡಿಕೊಂಡನು. ಕೃಷ್ಣನನ್ನು ಧ್ಯಾನಮಾಡಿ ತನ್ನ ಪೂರ್ತಿ ಶಕ್ತಿಯನ್ನು ಹಾಕಿ ತನ್ನ ಗದೆಯನ್ನು ಆಕಾಶದ ಕಡೆಗೆ ಜೋರಾಗಿ ಎಸೆದು ಈ ರೀತಿ ಕಿರುಚಿದನು.

“ ಹೇ ಕೃಷ್ಣಾ , ವಾಸುದೇವಾ ನನ್ನೊಡನೆ ಬರುವೆಯಾ? ನೀನು ಬರುವುದಿಲ್ಲವೆಂದಾದರೆ ಆಕಾಶದ ಕಡೆಗೆ ಎಸೆದ ಈ ನನ್ನ ಗದೆಯು ನನ್ನ ತಲೆಯ ಮೇಲೆ ಬಿದ್ದು, ನನ್ನ ಈ ತಲೆಯನ್ನು ಮತ್ತು ದೇಹವನ್ನು ಪುಡಿ ಪುಡಿ ಮಾಡಿಬಿಡಲಿ”.

ಇನೇನು ಗದೆಯು ಭೀಮನ ತಲೆಗೆ ಅಪ್ಪಳಿಸಬೇಕು. ಅಷ್ಟರಲ್ಲಿ ಶ್ರೀ ಕೃಷ್ಣನು ಪ್ರತ್ಯಕ್ಷನಾಗಿ ಗದೆಯನ್ನು ಹಿಡಿದು ಕೊಂಡನು. ಭೀಮನನ್ನು ಪ್ರೀತಿಯಿಂದ ಆಲಂಗಿಸಿಕೊಂಡನು. ಭೀಮನು ಶ್ರೀಕೃಷ್ಣನಿಗೆ ನಮಸ್ಕರಿಸಿ ತನ್ನ ಮನೆಗೆ ಕರೆದುಕೊಂಡು ಹೋದನು. ಎಲ್ಲರೂ ಆದರದಿಂದ ಕೃಷ್ಣನನ್ನು ಬರಮಾಡಿಕೊಂಡು ಸಂತೋಷ ದಿಂದ ಊಟವನ್ನು ಮಾಡಿದರು.

ಅರ್ಜುನನು ಮನದಲ್ಲೇ “ನಿಜ ಕೃಷ್ಣನು ಅಹಂಕಾರಕ್ಕೆ ಮಣಿಯನು ಭೀಮನು ಭಕ್ತಿಯಿಂದ ಕರೆದಾಕ್ಷಣ ಓಡಿ ಬಂದನು. ಅವನು ಭಕ್ತಪ್ರಿಯನು, ಕರುಣಾ ಮೂರ್ತಿಯು ಭೀಮನೂ ಎಂತಹ ಪರಮ ಭಕ್ತನೆಂದು ಸಾಬೀತಾಯಿತು” ಎಂದು ಬಹಳ ನಾಚಿ ಅವಮಾನದಿಂದ ಕುಗ್ಗಿ ಹೋದನು.

ಮಕ್ಕಳೇ ಭಗವಂತನನ್ನು ಪ್ರೇಮದಿಂದ , ಭಕ್ತಿಯಿಂದ ಕರೆದರೆ ಆ ಕ್ಷಣ ನಿಮ್ಮ ಬಳಿಗೆ ಒದಗಿ ಬರುವನು, ಓಡೋಡಿ ಬರುವನು!


ಚಿತ್ರಕಥೆ
ಜೀವನ ಸಾರ್ಥಕವಾಗಬೇಕೆಂದರೆ
ಕಥೆ ಮತ್ತು ಚಿತ್ರಗಳು : ಟಿ. ಶಿವಾಜಿ
ಅನುವಾದ : ಸೂರ್ಯವಂಶಿ
ಸಿದ್ಧಪ್ಪ ಒಬ್ಬ ಗೋವುಗಳನ್ನು ಮೇಯಿಸಿಕೊಂಡು ಜೀವಿಸುತ್ತಿದ್ದ. ಊರಿನ ಹೊರಭಾಗದಲ್ಲಿರುವ ಬೆಟ್ಟ ಗುಡ್ಡಗಳಲ್ಲಿ ದಿನವೂ ಹಸುಗಳನ್ನು ಮೇಯಿಸುವುದಕ್ಕೆ ಕರೆದೊಯ್ಯುತ್ತಿದ್ದ.
ಸಿದ್ದಪ್ಪ ಮಹಾ ದೈವಭಕ್ತ ಸದಾ ದೇವರನ್ನು ಸ್ಮರಿಸುತ್ತಾ ತನ್ನ ಕೆಲಸಗಳನ್ನು ತಾನು ಮಾಡುತ್ತಾ ಕಾಲ ಕಳೆಯುತ್ತಿದ್ದ.
ದೇವಾಧಿದೇವಾ!ಈ ಲೋಕವನ್ನೆಲ್ಲ ಸೃಷ್ಟಿಸಿದವನೇ! ನೀನು ಹೇಗಿರುತ್ತೀಯೋ , ಎಲ್ಲಿರುತ್ತೀಯೋ ಏನು ತಿಳಿಯದ ಅಜ್ಞಾನಿನಾನು. ನಾನೂ ನಿನ್ನ ಬಳಿ ಬರಲಾರೆ. ನೀನು ನನ್ನ ಸಮೀಪದಲ್ಲಿ ಇಲ್ಲ. ನನ್ನ ತಪ್ಪುಗಳೆನ್ನಲ್ಲಾ ನಿನ್ನ ಮಡಿಲಿನಲ್ಲಿ ಹಾಕಿಕೊಂಡು ನನ್ನ ಮೇಲೆ ದಯೆ ತೋರಿಸು ತಂದೇ !
ಒಂದು ದಿನ ಸಿದ್ದಪ್ಪ ಹಸುಗಳನ್ನು ಮೇಯಿಸಲು ಬಿಟ್ಟು ಒಂದು ಮರದ ಕೆಳಗೆ ಕುಳಿತು ವಿಶ್ರಾಂತಿ ಪಡೆಯುತ್ತಿದ್ದಾಗ ಒಬ್ಬ ಬ್ರಾಹ್ಮಣ ಆ ದಾರಿಯಲ್ಲಿ ಹೋಗುತ್ತಿರುವುದನ್ನು ನೋಡಿದ.
ಅಬ್ಬಾ! ಯಾರೋ ಸ್ವಾಮಿಯವರು ನನ್ನ ನೋವನ್ನು ಪರಿಹರಿಸುವುದಕ್ಕೆ ಬಂದಿರುವಂತಿದೆ ಎಂದು ಹೋಗಿ ಆತನಿಗೆ ನಮಸ್ಕರಿಸಿದ.
1
ನಮಸ್ಕಾರ ಸ್ವಾಮಿ ! ದೇವರಂತೆ ಬಂದಿದ್ದೀರಾ. ನನ್ನ ನೋವನ್ನು ಯಾರಿಗೆ ಹೇಳಿಕೊಳ್ಳಲಿ. ಈ ಜೀವನವೇ ಅರ್ಥವಾಗುತ್ತಾಯಿಲ್ಲ. ನನಗೆ ನೀವೇ ದಾರಿತೋರಿಸಿ ಪುಣ್ಯ ಕಟ್ಟಿಕೊಳ್ಳಿ ಸ್ವಾಮಿ..
ನೋಡಪ್ಪಾ ! ನೀನು ತುಂಬಾ ಬುದ್ಧಿವಂತನಂತೆ ಕಾಣಿಸುತ್ತೀದ್ದೀಯಾ! ಹಸು ಮೇಯಿಸುವವನಿಗೆ ಈ ಯೋಚನೆ ಬಂದಿದೆ ಅಂದರೆ ಅದು ಭಗವಂತನ ಕೃಪೆ. ನಿನಗೆ ಏನು ಬೇಕೋ ಕೇಳು - ನಿನಗೆ ಅರ್ಥವಾಗುವಂತೆ ಹೇಳುತ್ತೇನೆ...
ಏನೋ ಸ್ವಾಮಿ ... ಏನು ಕೇಳಬೇಕೆಂದು ನನಗೆ ತಿಳಿಯುತ್ತಿಲ್ಲ. ಸರಿ ನಾನು ಹೋಗಬೇಕು. ಆ ದೇವರು ನನ್ನ ಮೇಲೆ ದಯೆ ತೋರಿಸಬೇಕು ಅಷ್ಟೇ....
ನೀನು ಯಾವುದಾದರೂ ಕೋರಿಕೆಯನ್ನು ಕೇಳುತ್ತೀಯಾ ಎಂದು ಕೊಂಡಿದ್ದೆ - ನೀನು ಧನ್ಯನಾದೆ...
ಸಿದ್ದಪ್ಪನ ಮಾತುಗಳು ಆಸಕ್ತಿಯಿಂದ ಕೂಡಿದ್ದುವು. ಅಮಾಯಕನಂತೆ ಕಂಡು ಬರುತ್ತಿದ್ದ ಸಿದ್ದಪ್ಪನ ಸಂದೇಹಗಳು ಆ ಬ್ರಾಹ್ಮಣನನ್ನು ಯೋಚನೆಗೆ ಈಡುಮಾಡಿದ್ದುವು.
ಸಿದ್ದಪ್ಪ ಕೇಳಿದ ಪ್ರಶ್ನೆಗಳು ಅವನ ಭೌತಿಕ ಜೀವನವನ್ನು ದಾಟಿ ನಿಂತಿದ್ದುವು. ಅನೇಕ ಪ್ರಶ್ನೆಗಳು ಆ ಬ್ರಾಹ್ಮಣನನ್ನು ಆಶ್ಚರ್ಯಕ್ಕೆ ಗುರಿಮಾಡಿದ್ದುವು. ಆ ಬ್ರಾಹ್ಮಣ ಸಿದ್ಧಪ್ಪನ ಮನೋಧರ್ಮಕ್ಕೆ ಅನುಗುಣವಾಗಿಯೇ ಭಾಗವತ ಕಥೆಯನ್ನು ಸರಳ ಭಾಷೆಯಲ್ಲಿ ಬೋಧಿಸಿದರು.
2



ಆ ಬ್ರಾಹ್ಮಣ ಮುತ್ತು ಪೋಣಿಸಿದಂತೆ ಹೇಳಿದ ಭಾಗವತ ಕಥೆಗಳು ಸಿದ್ದಪ್ಪನನ್ನೂ ಮತ್ತೊಂದು ಪ್ರಪಂಚಕ್ಕೆ ಕರೆದೊಯ್ದಿದ್ದುವು. ಕಣ್ಣು ಮುಚ್ಚಿದರೂ ಕಣ್ಣು ತೆರೆದರೂ ಪ್ರತಿ ಕ್ಷಣದಲ್ಲೂ ಆ ಕತೆಗಳು ಕಣ್ಣ ಮುಂದೆ ಕಂಡುಬರುತ್ತಿದ್ದುವು.
ಶ್ರೀ ಕೃಷ್ಣಲೀಲೆಗಳು ಅನುಕ್ಷಣವೂ ಜ್ಞಾಪಕವಾಗುತ್ತಿದೆ. ನಿದ್ದೆಯಿಂದ ಎದ್ದ ಕ್ಷಣದಿಂದ ಹಿಡಿದು ದಿನಗೆಲಸ ಮಾಡುತ್ತಿದ್ದರೂ ಸಹ ಭಗವಂತನ ಆಲೋಚನೆಯಲ್ಲಿಯೇ ಸಾಗುತ್ತಿದೆ.
ದೇವರೇ ಇದೇನಿದು..?
ಪರಮಾತ್ಮಾ ! ಅಲ್ಪನಾದ ನಾನು ನಿನ್ನ ಲೀಲೆಗಳನ್ನು ಹೇಗೆ ಹೊಗಳಲಿ?
ಆ ಸ್ವಾಮಿಯವರು ಹೇಳಿದಂತೆ ಪ್ರತಿದಿನ ಪ್ರತಿಕ್ಷಣ ಆ ದೇವರನ್ನೆ ಧ್ಯಾನಿಸುತ್ತಿದ್ದೇನೆ .. ಸರಿ... ಅದ್ರೆ ರಾತ್ರಿ ಹಗಲೆನ್ನದೆ ಪದೇ ಪದೇ ಆ ದೇವರೇ ಕಾಣಿಸುತ್ತಾ ನನ್ನ ಕೆಲಸಗಳಿಗೆ ಅಡ್ಡಿ ಮಾಡುತ್ತಿದ್ದಾನಲ್ಲಾ,....? ಏಕೆ ಹೀಗಾಗುತ್ತಿದೆ? ನಾನೇನಾದರೂ ತಪ್ಪು ಮಾಡಿದೆನಾ? ತಿಳಿದೋ ತಿಳಿಯದೆಯೋ ಯಾವುದಾದರೂ ತಪ್ಪು ಮಾಡಿದ್ದರೆ? ಆ ದೇವರಿಗೆ ಕೋಪ ಬಂದ್ರೆ ನನ್ನ ಪರಿಸ್ಥಿತಿ ಏನು..? ಈ ದಿನ ಹೇಗಾದರೂ ಆ ಸ್ವಾಮಿ ಬಂದ್ರೆ ಮತ್ತೆ ನನ್ನ ಪರಿಸ್ಥಿತಿಯನ್ನು ತಿಳಿಸಬೇಕು.
3
ನಮಸ್ಕಾರ ಸ್ವಾಮಿ ! ನನ್ನನ್ನು ನೀವೇ ಕಾಪಾಡಬೇಕು.
ಏನಾಯ್ತಪ್ಪಾ ! ಏಕೆ ಇಷ್ಟೊಂದು ನೋವಿನಲ್ಲಿದ್ದೀಯೆ ! ಏನಾಯ್ತು ಹೇಳು ..
ನನಗೆ ಹಗಲು ರಾತ್ರಿ ದೇವರೇ ಕಾಣಿಸುತ್ತಿದ್ದಾನೆ. ನನಗೆ ಮುಂದೆ ಏನೋ ಕಷ್ಟ ಕಾದಿದೆ ಎಂದು ನನ್ನ ಮನಸ್ಸಿಗೆ ಅನಿಸುತ್ತಿದೆ. ನಾನೇನು ತಪ್ಪು ಮಾಡಿದ್ದೇನೋ ತಿಳಿಯುತ್ತಿಲ್ಲ. ಆ ದೇವರು ಪದೇ ಪದೇ ಕಾಣಿಸಿಕೊಳ್ಳುತ್ತಾ ನನ್ನ ಕೆಲಸಗಳಿಗೆ ಅಡ್ಡಿ ಉಂಟು ಮಾಡುತ್ತಿದ್ದಾನೆನೋ ಅನಿಸುತ್ತಿದೆ. ನನ್ನ ಕೆಲಸಗಳನ್ನೆಲ್ಲಾ ನಾನು ಮಾಡುತ್ತಿರುವಂತೆ ಅಲ್ಲದೆ ಆ ದೇವರೆ ಮಾಡುತ್ತಿರುವಂತೆ ಭ್ರಮೆ ಉಂಟಾಗುತ್ತಿದೆ. ಅದು ತಪ್ಪೋ ಒಪ್ಪೋ ತಿಳಿಯುತ್ತಿಲ್ಲ.
ನೀನು ತುಂಬಾ ಅದೃಷ್ಟವಂತ ಕಣಪ್ಪಾ. ನಿನ್ನ ಹೆಸರು ಸಾರ್ಥಕವಾಗುವಂತೆ ನೀನು ಭಗವತ್ಸಿದ್ಧಿಯನ್ನು ಪಡೆದಿರುವಿ.
ಸ್ವಾಮಿ ! ನನಗೇನೂ ಅರ್ಥವಾಗುತ್ತಿಲ್ಲ. ನನಗಂತಾ ಅದೃಷ್ಟವೆ?
ಹೌದಪ್ಪಾ! ನೀನು ಅದೃಷ್ಟವಂತ ! ಪ್ರತಿಯೊಬ್ಬ ಮನುಷ್ಯ ತನ್ನ ಕೆಲಸವನ್ನು ತಾನು ಮಾಡುತ್ತಾ ಪ್ರತಿಯೊಂದು ಕೆಲಸ ವನ್ನು ಭಗವಂತನಿಗೆ ಸಮರ್ಪಣೆ ಮಾಡುತ್ತಾ ಸಾಗಿದರೆ ಆ ಜೀವನ ಸಾರ್ಥಕವೆನಿಸುತ್ತದೆ. ಸದಾ ಭಗವನ್ನಾಮ ಸ್ಮರಣೆಯಿಂದ ಮುನ್ನಡೆಯುತ್ತಿರಬೇಕು. ಯಾರಿಗೂ ಹಾನಿಯನ್ನು ಉಂಟುಮಾಡದೆ ನಮ್ಮ ಜೊತೆಗಿರು ವವರಿಗೆ ಸಹಾಯ ಮಾಡುತ್ತಾ ಜೀವನ ಸಾಗಿಸಿದರೆ ಅದೇ ಮಾಧವ ಸೇವೆ ಎನಿಸಿಕೊಳ್ಳುತ್ತದೆ.
4
ಆ ಬ್ರಾಹ್ಮಣನು ಮಾಡಿದ ಜ್ಞಾನ ಬೋಧನೆಯಿಂದ ಸಿದ್ದಪ್ಪ ತನ್ನ ಜೀವನ ವನ್ನು ಪರೋಪಕಾರ ಬುದ್ಧಿಯಿಂದ ನಡೆಸತೊಡಗಿದನು.
ಸಮಾಪ್ತಿ

## ರಸಪ್ರಶ್ನೆಗಳು :

1.ಪರಶುರಾಮ ಜಯಂತಿಯನ್ನು ಯಾವ ಮಾಸದಲ್ಲಿ ಆಚರಿಸುತ್ತೇವೆ?

1. ವೈಶಾಖಮಾಸ 2. ಭಾದ್ರಪದ ಮಾಸ
3. ಕಾರ್ತಿಕಮಾಸ 4. ಚೈತ್ರಮಾಸ

2.ಶ್ರೀಕೃಷ್ಣ ಜಯಂತಿಯನ್ನು ಯಾವ ಮಾಸದಲ್ಲಿ ಆಚರಿಸುತ್ತೇವೆ?

1.ಭಾದ್ರಪದ ಮಾಸ 2.ಆಶ್ವೀಜ ಮಾಸ
3. ಶ್ರಾವಣ ಮಾಸ 4. ಮಾಘಮಾಸ

3.ಶ್ರೀರಾಮನವಮಿಯನ್ನು ಯಾವ ಮಾಸದಲ್ಲಿ ಆಚರಿಸುತ್ತೇವೆ?

1. ವೈಶಾಖಮಾಸ 2. ಶ್ರಾವಣಮಾಸ
3. ಜ್ಯೇಷ್ಠ ಮಾಸ 4. ಚೈತ್ರ ಮಾಸ

4. ವರಾಹ ಜಯಂತಿಯನ್ನು ಯಾವ ಮಾಸದಲ್ಲಿ ಆಚರಿಸುತ್ತೇವೆ?

1. ಮಾಘಮಾಸ 2. ಕಾರ್ತಿಕಮಾಸ
3.ಚೈತ್ರಮಾಸ 4. ಶ್ರಾವಣಮಾಸ

# ಕ್ವಿಜ್

5.ಮತ್ಸ್ಯ ಜಯಂತಿಯನ್ನು ಯಾವ ಮಾಸದಲ್ಲಿ ಆಚರಿಸುತ್ತೇವೆ?

1. ವೈಶಾಖಮಾಸ 2. ಭಾದ್ರಪದ ಮಾಸ
3. ಫಾಲ್ಗುಣ ಮಾಸ 4. ಚೈತ್ರಮಾಸ

6. ಕೂರ್ಮ ಜಯಂತಿಯನ್ನು ಯಾವ ಮಾಸದಲ್ಲಿ ಆಚರಿಸುತ್ತೇವೆ?

1. ವೈಶಾಖಮಾಸ 2. ಅಷಾಢಮಾಸ
3. ಶ್ರಾವಣ ಮಾಸ 4. ಭಾದ್ರಪದ ಮಾಸ

7. ನರಸಿಂಹ ಜಯಂತಿಯನ್ನು ಯಾವ ಮಾಸದಲ್ಲಿ ಆಚರಿಸುತ್ತೇವೆ?

1.ಶ್ರಾವಣ ಮಾಸ 2. ಮಾರ್ಗಶಿರ ಮಾಸ
3. ಕಾರ್ತಿಕ ಮಾಸ 4. ವೈಶಾಖಮಾಸ

ಉತ್ತರಗಳು:
1) 1 2) 3 3) 4 4) 1 5) 4 6) 1 7) 4

# ಚಿತ್ರಲೇಖನ

ಈ ಗೊಂಬೆಗೆ ಬಣ್ಣವನ್ನು ತುಂಬಿರಿ.......



ಪಕ್ಕದಲ್ಲಿರುವ ಗೊಂಬೆಯನ್ನು ಕೆಳಗಿನ ಬಾಕ್ಸ್‌ನಲ್ಲಿ ಬರಿಯೋಣ...


Edited and Published on behalf of T.T.Devasthanams by Prof. K.Rajagopalan, Phd., Chief Editor, T.T.D. and Printed at T.T.D. Press by Sri P. Ramaraju, M.A., Special Officer (Press & Publications), T.T.D. Press, Tirupati - 517 507.





21-04-2021 ರಂದು ಹನುಮಂತನ ಜನ್ಮಸ್ಥಳ ತಿರುಮಲೆಯಲ್ಲಿಯೇ ಎಂದು ತಿರುಮಲೆ ತಿರುಪತಿ ದೇವಸ್ಥಾನವು ಪ್ರಕಟಿಸಿದ ಸಂದರ್ಭದ ದೃಶ್ಯಮಾಲಿಕೆ



13-04-2021 ರಂದು ಮಹತಿ ಕಳಾಕ್ಷೇತ್ರ (ತಿರುಪತಿ)ದಲ್ಲಿ
ತಿ.ತಿ.ದೇ. ನಿರ್ವಹಿಸಿದ ಪ್ಲವ ನಾಮಸಂವತ್ಸರ ಯುಗಾದಿ ಹಬ್ಬದ ದೃಶ್ಯಮಾಲಿಕೆ



18-04-2021 ರಂದು ಶ್ರೀರಾಮಾನುಜಚಾರ್ಯರ 1005 ನೇ ಅವತಾರ ಮಹೋತ್ಸವ ಸಂದರ್ಭದಲ್ಲಿ
ತಿರುಮಲೆ ಶ್ರೀ ಶ್ರೀ ಶ್ರೀ ದೊಡ್ಡಜೀಯರ್ ರವರ ಮಠದಲ್ಲಿ ನಡೆದ ಶ್ರೀರಾಮಾನುಜ ನೂಟ್ರಂದಾದಿ
ದಿವ್ಯ ಪ್ರಬಂಧ ಪಾರಾಯಣ ಮಹೋತ್ಸವದ ದೃಶ್ಯಮಾಲಿಕೆ



13-04-2021 ರಂದು ತಿರುಮಲೆ ಸ್ವಾಮಿಯವರ ಆಲಯದಲ್ಲಿ ಯುಗಾದಿ ಆಸ್ಥಾನದ ನಂತರ
ಶ್ರೀ ವೈಖಾನಸ ಆಗಮಶಾಸ್ತ್ರಗ್ರಂಥಗಳ ಆವಿಷ್ಕರಣದ ದೃಶ್ಯಮಾಲಿಕೆ



01-05-2021 ರಂದು ತಿರುಮಲೆಯಲ್ಲಿ ಕೆಲಸ ಮಾಡುತ್ತಿರುವ ನೈರ್ಮಲ್ಯ ಕಾರ್ಮಿಕರಿಗೆ
ಹೆಲ್ತ್‌ಕಿಟ್ ಅನ್ನು ನೀಡುತ್ತಿರುವ ತಿ.ತಿ.ದೇ. ಅಧ್ಯಕ್ಷರು ಶ್ರೀ ವೈ.ವಿ. ಸುಬ್ಬಾರೆಡ್ಡಿಯವರು


ಕೇಳಿರೋ ಭಾಗ್ಯವು ವಿಷ್ಣುಕಥೆ...!!!